ಫೆಬ್ರವರಿ 2023
ಸಂಪುಟ : 01
ಸಂಚಿಕೆ : 01
ಪುಟಗಳು : 20
ಬೆಲೆ ರೂ. 20
@MandaraMagazine

ಹೊಸ ಪತ್ರಿಕೆಯ
ತಾಜಾ ಘಮಘಮ


ಓದುವ ಮನಸ್ಸುಗಳಿಗೊಂದು ಜಾಲಿ ರೈಡಿನ ತಾಣ

ಮಂದಾರ

www.mandaramagazine.com ಪ್ರಾಯೋಗಿಕ ಪತ್ರಿಕೆ ಮೊದಲ ಸಂಚಿಕೆ

ಪ್ರಾಯೋಗಿಕ ಪತ್ರಿಕೆಯನ್ನು ಕೇವಲ ಕಾಲೇಜಿಗೆ ಮಾತ್ರ ಸೀಮಿತಗೊಳಿಸದೇ, ಕಾಲೇಜಿನ ಪರಿಧಿಯಾಚೆಗೂ ಪತ್ರಿಕೆಯ ಘಮವನ್ನು ಹರಡಬೇಕು, ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಜೊತೆಗೆ ಇತರ ಕಾಲೇಜಿನ ವಿದ್ಯಾರ್ಥಿಗಳಿಗೂ ಬರೆಯಲು ವೇದಿಕೆ ಕಲ್ಪಿಸಬೇಕು. ಹಿರಿಯ ವಿದ್ಯಾರ್ಥಿಗಳು ಮತ್ತು ವಿವಿಧ ಲೇಖಕರಿಂದಲೂ ಬರೆಸಬೇಕು - ಹೀಗೆ ಹಲವು ಯೋಜನೆಗಳು ಮಂದಾರ ಬಳಗದ್ದು.

ಮೊದಲು ನುಡಿ



ಅಕ್ಷರಗಳಿಗೆ ನಮ್ಮಲ್ಲಿ ಹೊಸ ಹುಮ್ಮಸ್ಸನ್ನು ಹುಟ್ಟಿಸಬಲ್ಲ ಶಕ್ತಿ ಇದೆ. ಅದು ನಮ್ಮೊಳಗಿನ ನೋವನ್ನು ಮರೆಸಬಲ್ಲ ಟಾನಿಕ್ ಆಗಬಲ್ಲದು. ಸಂಜೆ ಮನೆಯಂಗಳದಲ್ಲಿ ಆರಾಮ ಖುರ್ಚಿಯಲ್ಲಿ ಕೂತು ತಂಗಾಳಿಯ ಹಿತವನ್ನನುಭವಿಸುತ್ತಾ ಕೈಯಲ್ಲೊಂದು ಪುಸ್ತಕವನ್ನೋ, ಪತ್ರಿಕೆಯನ್ನೋ ಹಿಡಿದು ಕಾಫಿಯನ್ನು ಹೀರುತ್ತಿದ್ದರೆ, ಸ್ವರ್ಗಕ್ಕೆ ಮೂರೇ ಗೇಣು! ಅಂತಹ ಓದಿನ ಖುಷಿಯನ್ನು 'ಮಂದಾರ' ನಿಮಗೆ ನೀಡಬಲ್ಲದು ಎಂಬ ನಂಬಿಕೆ ನಮ್ಮದು.

ನಲುಮೆಯ ಓದುಗರೇ..

ಬಹಳ ಕಾಯಿಸಿಬಿಟ್ವಿ ಅನಿಸತ್ತೆ. ಉಜಿರೆಯ ಕಾನುಮನೆಯಲ್ಲಿ ಇಂಟರ್ನಲ್ ಎಕ್ಸಾಮಿನ ಹಿಂದಿನ ದಿನ ಕುಳಿತು "ನಾವ್ಯಾಕೆ ಒಂದು ಪತ್ರಿಕೆ ಶುರು ಮಾಡ್ಬಾರ್ದು ಮಾರಾಯ" ಎಂಬ ತಮಾಷೆಯ ಮಾತುಕತೆಗೆ ಬಹುಶಃ ಒಂದು ವರ್ಷ. ಇಂದು ಆ ಕನಸು ನನಸಾಗಿ 'ಮಂದಾರ' ಗರಿಬಿಚ್ಚಿ ಹಾರಲು ಹೊರಟಿದೆ.

ನಮ್ಮ ಕಾಲೇಜಿನ ಅಂತಿಮ ವರ್ಷದ ಬಿಬಿಎ ಕ್ಲಾಸಿನ ಮುಂದೆ ಗೋಡೆಯ ಮೇಲೆ ಸಾಲೊಂದನ್ನು ನೋಡಬಹುದು.

"It takes lot of courage to show your dreams to someone else"

ಅದೇನೋ ಹುಂಬ ಧೈರ್ಯ ಮಾಡಿ ಹಲವು ದಿನಗಳ ಆಲೋಚನೆಯ ಬಳಿಕ ನಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವಾಗಿ ನಮ್ಮ ಈ ಹುಚ್ಚು ಕನಸನ್ನು ನಿಮ್ಮ ಮಡಿಲಿಗೆ ಇಡುತ್ತಿದ್ದೇವೆ. ಹಾಗೆ ನೋಡಿದರೆ, 'ಮಂದಾರ' ದಿಢೀರ್ ಎಂದು ಪ್ರಾರಂಭವಾಗಿದ್ದೇನಲ್ಲ. ಒಂದು ವರ್ಷಗಳಿಂದ ಆಲೋಚನೆಗಳಿದ್ದರೂ, ಈ ಕನಸಿಗೆ ಸ್ಪಷ್ಟ ದಿಕ್ಕು ಸಿಕ್ಕಿದ್ದು ಕೆಲವು ದಿನಗಳ ಹಿಂದೆ. ಆ ನಂತರದ ನಿರಂತರ ಶ್ರಮದ ಪ್ರತಿಫಲವೇ 'ಮಂದಾರ'.

ನಾವೇನೋ ಬೇರೆ ಯಾರೂ ಮಾಡದ ಬಹುದೊಡ್ಡ ಕೆಲಸವನ್ನೇನೋ ಮಾಡಿದ್ದೇವೆ, ಎಂಬ ಭ್ರಮೆ ಖಂಡಿತ ಇಲ್ಲ. ಆದರೆ ಪತ್ರಿಕೋದ್ಯಮದ ಶಾಸ್ತ್ರೀಯ ವಿದ್ಯಾರ್ಥಿಗಳಲ್ಲದೇ, ಬೇರೆ ವಿಭಾಗದ ವಿದ್ಯಾರ್ಥಿಗಳಾಗಿ ನಾವ್ಯಾಕೆ ಚಂದದ ವಿನ್ಯಾಸ ಹೊಂದಿರುವ, ಒಳ್ಳೆಯ ವಿಷಯ ಹೂರಣವುಳ್ಳ, ಉತ್ತಮ ಗುಣಮಟ್ಟವಿರುವ ಪತ್ರಿಕೆಯನ್ನೇಕೆ ಶುರು ಮಾಡಬಾರದು? ಸ್ವತಃ ಪತ್ರಿಕೆ ಪ್ರಾರಂಭಿಸುವುದು, ಪತ್ರಿಕೆ ಪ್ರಾರಂಭದ ಕಷ್ಟ-ಸುಖಗಳು, ಪತ್ರಿಕೆ ಮುನ್ನಡೆಸುವ ಸವಾಲು ಹೀಗೆ ಪತ್ರಿಕೆಯೊಂದನ್ನು ಸಿದ್ಧಪಡಿಸುವ ಪ್ರಕ್ರಿಯೆಗಳನ್ನು ಏಕೆ ಅನುಭವಿಸಬಾರದು ಎಂಬ ಯೋಚನೆಯಿಂದ ಈ ಪತ್ರಿಕೆಯನ್ನು ಶುರು ಮಾಡಿದ್ದು. ಒಂದು ಕಲ್ಪನೆ ಚಿಕ್ಕದಾಗಿ ಹುಟ್ಟಿ, ಅದರ ಬಗ್ಗೆ ಹೆಚ್ಚು ಆಲೋಚನೆ ಮಾಡುತ್ತಾ ದಿನ ಕಳೆದಂತೆ ನೋಡು ನೋಡುತ್ತಲೇ ಹಿರಿದಾದ ಕನಸಾಗಿ ಬೆಳೆದು ಬಿಡುತ್ತದೆ. ಈ ಪ್ರಕ್ರಿಯೆಯೇ ಬಹಳ ಸುಂದರವಾದ ಅನುಭವ.



ಪ್ರಾಯೋಗಿಕ ಪತ್ರಿಕೆಗಳು ವಿದ್ಯಾರ್ಥಿಗಳ ಪ್ರತಿಭೆಗೆ ಸೂಕ್ತ ವೇದಿಕೆಯನ್ನು ಒದಗಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಅಂತಹ ಪ್ರಾಯೋಗಿಕ ಪತ್ರಿಕೆಯನ್ನು ಕೇವಲ ಕಾಲೇಜಿಗೆ ಮಾತ್ರ ಸೀಮಿತಗೊಳಿಸದೇ, ಕಾಲೇಜಿನ ಪರಿಧಿಯಾಚೆಗೂ ಪತ್ರಿಕೆಯ ಘಮವನ್ನು ಹರಡಬೇಕು, ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಜೊತೆಗೆ ಇತರ ಕಾಲೇಜಿನ ವಿದ್ಯಾರ್ಥಿಗಳಿಗೂ ಬರೆಯಲು ವೇದಿಕೆ ಕಲ್ಪಿಸಬೇಕು. ಹಿರಿಯ ವಿದ್ಯಾರ್ಥಿಗಳು ಮತ್ತು ವಿವಿಧ ಲೇಖಕರಿಂದಲೂ ಬರೆಸಬೇಕು- ಹೀಗೆ ಹಲವು ಯೋಜನೆಗಳು ಮಂದಾರ ಬಳಗದ್ದು. ಓದುಗರಿಗೆ ಸಾಹಿತ್ಯ, ಪರಿಸರ, ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಅತ್ಯುತ್ತಮ ಸಾಹಿತ್ಯವನ್ನು ಕೊಡಬೇಕು. ಓದುವ ಮನಸುಗಳಿಗೆ ಇದೊಂದು ಜಾಲಿರೈಡಿನ ತಾಣವಾಗಬೇಕೆಂಬ ಆಕಾಂಕ್ಷೆ ನಮ್ಮದು. 'ಅಜ್ಜ ನೆಟ್ಟ ಆಲದ ಮರ' ಎಂದು ಅದಕ್ಕೇ ಸುತ್ತು ಹೊಡೆಯದೆ ಪ್ರತಿ ಸಂಚಿಕೆಯಲ್ಲೂ ವಿಭಿನ್ನವಾಗಿ ಹೊಸತನವನ್ನು ನೀಡಬೇಕೆಂಬುದು ನಮ್ಮ ಆಶಯ.

ಈ ಪತ್ರಿಕೆ ಗೆಲ್ಲುತ್ತದೆಯೋ, ಸೋಲುತ್ತದೆಯೋ ನಮಗೆ ಗೊತ್ತಿಲ್ಲ. ನಮಗದು ಮುಖ್ಯವೂ ಅಲ್ಲ. ಈ ಪತ್ರಿಕೆ ಆರಂಭಿಸುವ, ಸಿದ್ಧಪಡಿಸುವ ಹಂತದಲ್ಲಿ ತಿಳಿದ ಕಲಿತ ಸಂಗತಿಗಳು ಹಲವಷ್ಟು, ಇನ್ನೂ ಕಲಿಯುವುದು ಸಾಗರದಷ್ಟಿದೆ. ಬದುಕನ್ನು ಕಲಿಸುವುದು ಇಂತಹ ಯೋಜನೆಗಳೇ ಅಲ್ಲವೇ?

ಡಿಗ್ರಿ ಮುಗಿಸಿ ಕಾಲೇಜಿನಿಂದ ಹೊರಹೋಗುವಾಗ ನಾಲ್ಕು ಗೋಡೆಯ ನಡುವಿನ ಕ್ಲಾಸು, ಸಿಲೇಬಸ್ಸು, ಅಸೈನ್‌ಮೆಂಟ್, ಎಕ್ಸಾಮಿನ ಹೊರತಾದ ವಿಷಯಗಳನ್ನೂ ತಿಳಿದಿರಬೇಕಲ್ಲ; ಇವಿಷ್ಟರ ಹೊರತಾಗಿಯೂ ಏನಾದರೂ ಕಲಿತಿರಬೇಕಲ್ಲವೇ! ಅಂತಹ ಕಲಿಕೆಯನ್ನು ನಮ್ಮದಾಗಿಸಿಕೊಳ್ಳಲು 'ಮಂದಾರ' ಪ್ರಾರಂಭಗೊಂಡಿದೆ.

ಜಗತ್ತು ತುಂಬಾ ವೇಗವಾಗಿ ಚಲಿಸುತ್ತಿದೆಯಂತೆ. ಅಂತಹ ವೇಗದೋಟದ ನಡುವೆ ನಾವು ಬಹಳ ಚಿಕ್ಕ ಚಿಕ್ಕ ಸಂಗತಿಗಳನ್ನು ಕಳೆದುಕೊಳ್ಳುತ್ತಿದ್ದೇವೆಯೇ? ಎಂಬ ಪ್ರಶ್ನೆ ನಮ್ಮಲ್ಲಿ ಮೂಡುತ್ತದೆ. ಅಕ್ಷರಗಳಿಗೆ ನಮ್ಮಲ್ಲಿ ಹೊಸ ಹುಮ್ಮಸ್ಸನ್ನು ಹುಟ್ಟಿಸಬಲ್ಲ ಶಕ್ತಿ ಇದೆ. ಅದು ನಮ್ಮೊಳಗಿನ ನೋವನ್ನು ಮರೆಸಬಲ್ಲ ಟಾನಿಕ್ ಆಗಬಲ್ಲದು. ಸಂಜೆ ಮನೆಯಂಗಳದಲ್ಲಿ ಆರಾಮ ಖುರ್ಚಿಯಲ್ಲಿ ಕೂತು ತಂಗಾಳಿಯ ಹಿತವನ್ನನುಭವಿಸುತ್ತಾ ಕೈಯಲ್ಲೊಂದು ಪುಸ್ತಕವನ್ನೋ, ಪತ್ರಿಕೆಯನ್ನೋ ಹಿಡಿದು ಕಾಫಿಯನ್ನು ಹೀರುತ್ತಿದ್ದರೆ, ಸ್ವರ್ಗಕ್ಕೆ ಮೂರೇ ಗೇಣು! ಅಂತಹ ಓದಿನ ಖುಷಿಯನ್ನು 'ಮಂದಾರ' ನಿಮಗೆ ನೀಡಬಲ್ಲದು ಎಂಬ ನಂಬಿಕೆ ನಮ್ಮದು.

ಈ ಮುದ್ದಾದ ಪತ್ರಿಕೆಯು ಮೂಡಿಬರಲು ಒತ್ತಾಸೆಯಾಗಿ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡಿದವರು, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ. ಭಾಸ್ಕರ ಹೆಗಡೆ. ಅವರಿಗೆ ನಮ್ಮ ಕೃತಜ್ಞತೆಗಳು. ಮಂದಾರ ಎಂಬ ಚಂದದ ಹೆಸರನ್ನು ಸೂಚಿಸಿದ ನಮ್ಮ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಧರ ಭಟ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಎಲ್ಲ ಭೋದಕ-ಭೋದಕೇತರ ಸಿಬ್ಬಂದಿಗಳು, ಬ್ಯುಸಿನೆಸ್ ಅಡ್ಮಿನಿಷ್ಟ್ರೇಷನ್ ವಿಭಾಗದ ಎಲ್ಲಾ ಉಪನ್ಯಾಸಕರು, ಅಂದದ ಪತ್ರಿಕೆಯನ್ನು ಮುದ್ರಿಸಿದ ಉಜಿರೆಯ ಮಂಜುಶ್ರೀ ಪ್ರಿಂಟರ್ಸ್ ನವರಿಗೆ ಹಾಗೂ ಈ ಪತ್ರಿಕೆ ಹೊರಬರಲು ಕೈಜೋಡಿಸಿದ ಎಲ್ಲರಿಗೂ ಕೃತಜ್ಞತೆಗಳು.

ಮಂದಾರವು ನಿಮ್ಮ ಕೈಯಲ್ಲಿದೆ. ಇನ್ನು ಇದು ನಿಮ್ಮದು. ಓದಿ. ಇಷ್ಟವಾದರೆ ಇನ್ನೊಂದಿಷ್ಟು ಜನರಿಗೂ ತಿಳಿಸಿ. ಹಾ! ಮರೆಯಬೇಡಿ. ಮುಂದಿನ ಸಂಚಿಕೆಗಳಲ್ಲಿ ಈ ಕಲರ್‌ಫುಲ್ ಪುಟಗಳಲ್ಲಿ ನಿಮ್ಮದೂ ಒಂದು ಬರಹ ಇರಲಿ. ಬರೆಯುವಿರಿ ತಾನೇ? ನಿಮ್ಮ ಸಲಹೆ-ಸೂಚನೆಗಳಿಗೆ ಆತ್ಮೀಯ ಸ್ವಾಗತ. ನಮ್ಮ ನಿಮ್ಮ ಅಕ್ಷರ ಬಾಂಧವ್ಯಕ್ಕೆ ಇದು ಹೊಸ ಮುನ್ನುಡಿಯಾಗಲಿ!

ಪ್ರೀತಿಯಿರಲಿ,

ಚಂದನ್ ಭಟ್ ಕೋಣೆಮನೆ
ಎಂ ಎಸ್ ಶೋಭಿತ್
ಮಂದಾರ ಬಳಗ



ಜೋಳಿಗೆಯೊಳಗೆ..



www.mandaramagazine.com
ಇಂದೇ ಭೇಟಿ ಕೊಡಿ!

ಸಾಹಿತ್ಯೋಪನಿಷತ್ತು

ಇಂದಿರುವವ ನಾಳೆ ಇಲ್ಲವಾಗುತ್ತಾನೆ ಎಂಬ ಮಾತು ತೀರ ನಿಜ. ಆದರೆ, ಇರುವಷ್ಟು ದಿನ ಒಳ್ಳೆಯ ರೀತಿಯಲ್ಲಿ ಇದ್ದು ನಂತರ ತನ್ನ ಸುತ್ತಣ ಜನತೆಯ ನೆನಪಿನಲ್ಲಿ ಉಳಿದು. "ಎಂಥ ಹಿರಿಯ ಬದುಕು" ಅನಿಸುವ ಬಾಳ್ವೆ ಎಷ್ಟು ಜನರ ಪಾಲಿಗಿದ್ದೀತು?



ಶಿವರಾಮ ಕಾರಂತ
ಹುಚ್ಚು ಮನಸ್ಸಿನ ಹತ್ತು ಮುಖಗಳು ಕೃತಿಯಿಂದ

ನುಡಿಚಿತ್ರ

ಮರೆಯಾಗುತ್ತಿದೆ ಗೌಳಿಗಳ ಸಾಂಪ್ರದಾಯಿಕ ಶೈಲಿಯ ಉಡುಪು!





ಬೀರಣ್ಣ ನಾಯಕ ಮೊಗಟಾ

ಉತ್ತರ ಕನ್ನಡ ಜಿಲ್ಲೆ ಕರುನಾಡಿನಲ್ಲಿಯೇ ವಿಶಿಷ್ಟವಾದ ಜಿಲ್ಲೆ. ಭೌಗೋಳಿಕವಾಗಿ ಕರಾವಳಿ, ಮಲೆನಾಡು ಹಾಗೂ ಅರೆ ಮಲೆನಾಡು, ಅರೆ ಬಯಲು ಸೀಮೆ ಒಳಗೊಂಡಿರುವ ಈ ಜಿಲ್ಲೆಯಲ್ಲಿ ಬದುಕು ಕಟ್ಟಿಕೊಂಡಿರುವ ಅನೇಕ ಜನಾಂಗಗಳ ಉಡುಪು, ಆಚಾರ, ವಿಚಾರ, ಆಹಾರ, ಮೂಲ ಉದ್ಯೋಗ, ಭಾಷೆ ಎಲ್ಲದರಲ್ಲೂ ವೈವಿಧ್ಯತೆ ಇದೆ. ಹಾಗಿದ್ದರೂ, ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡಿರುವ ವಿಶೇಷ ಜಿಲ್ಲೆ ಉತ್ತರ ಕನ್ನಡ!

ತೀರಾ ಹಿಂದುಳಿದ ಕೃಷ್ಣನ ಭಕ್ತರಾಗಿ ಗೋವುಗಳನ್ನು ಸಾಕಿ ಸಲುಹುವ ಮೂಲಕ ತಮ್ಮ ಬದುಕನ್ನು ಕಟ್ಟಿಕೊಂಡ ವಿಶಿಷ್ಟ ಜನಾಂಗ ಗೌಳಿಗಳಲ್ಲಿ ಸಾಮಾಜಿಕವಾಗಿ ಪರಿವರ್ತನೆ ಆಗುತ್ತಿರುವುದು ಸಂತಸದ ವಿಷಯ. ಅಂತೆಯೇ ಅವರ ವಿಶೇಷ ಉಡುಗೆ ತೊಡುಗೆಗಳು ಕೂಡ ಬದಲಾವಣೆಯತ್ತ ಸಾಗುತ್ತಿದೆ.

ಒಬ್ಬ ಸಾಂಪ್ರದಾಯಿಕ ಗೌಳಿ ಪುರುಷನನ್ನು ನೆನಪಿಸಿ ಕೊಂಡರೆ ತಲೆಯ ಮೇಲೊಂದು ಮುಂಡಾಸು, ದಿಕ್ಸೂಚಿಯಂತಿರುವ ಆಕರ್ಷಕ ಮೀಸೆ, ಕಿವಿಗೊಂದು ಆಭರಣ, ಅಂಗಿ, ಹಾಫ್ ಪ್ಯಾಂಟ್, ಬಗಲಿಗೊಂದು ಚೀಲ, ಕೈಯ್ಯಲ್ಲೊಂದು ಬಿದಿರಿನ ಕೋಲು, ಕೊರಳಿನಲ್ಲೊಂದು ದಾರ ಅಥವಾ ಸರ ಇರುವ ವ್ಯಕ್ತಿ ನಮ್ಮ ಕಣ್ಮುಂದೆ ಬಂದು ನಿಲ್ಲುತ್ತಿದ್ದರು. ಅಂದಿನ ಉಡುಪು ಇಂದಿನ ಯುವ ಜನಾಂಗದಲ್ಲಿ ಮರೆಯಾಗುತ್ತಿದ್ದು ಮುಂದೊಂದು ದಿನ ಈ ಸಾಂಪ್ರದಾಯಿಕ ಉಡುಪು ಮರೆಯಾದರೂ ಆಶ್ಚರ್ಯವಿಲ್ಲ.

ಯಲ್ಲಾಪುರ ತಾಲೂಕಿನ ಕಿರವತ್ತಿಯ ಹಿರಿಯ ಕ್ರೀಡಾ ಪಟು ಹಾಗೂ ಗೌಳಿ ಸಮಾಜದ ಯುವ ಮುಖಂಡರಾದ ವಿಠ್ಠು ಶೆಳ್ಕೆ ಈ ಕುರಿತು ಮಾತನಾಡುತ್ತಾ 'ನಮ್ಮ ಗೌಳಿ ಸಮಾಜದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಬದಲಾವಣೆ ನಿಧಾನವಾಗಿ ಆಗುತ್ತಿದ್ದು ಅದರಲ್ಲೂ ನಮ್ಮ ಸಮಾಜದ ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ತೋರುತ್ತಿರುವುದು ಸಂತಸ ಉಂಟುಮಾಡಿದೆ. ಅಂತೆಯೇ ನಮ್ಮ ಮೂಲ ಸಾಂಪ್ರದಾಯಿಕ ಉಡುಪು ಕೂಡ ಮರೆಯಾಗುತ್ತಿದೆ' ಎಂದು ಅಭಿಪ್ರಾಯಪಟ್ಟರು.

ಜೀವನ ಪ್ರತಿಕ್ಷಣ ನಮ್ಮೆಡೆಗೆ ಅವಕಾಶಗಳನ್ನು ಎಸೆಯುತ್ತಲೇ ಇರುತ್ತದೆ. ಪ್ರತಿಯೊಂದು ಅವಕಾಶಗಳನ್ನು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ನಮ್ಮ ಭವಿಷ್ಯ ನಿರ್ಧಾರವಾಗುತ್ತದೆ. ವೇದಿಕೆಗಳು ಚಿಕ್ಕದಾಗಿರಲಿ ದೊಡ್ಡದಾಗಿರಲಿ ಸಿಕ್ಕಿದ ಅವಕಾಶಗಳನ್ನು ಕಡೆಗಣಿಸದೆ ಮುನ್ನುಗ್ಗಬೇಕು.

ಮನಸೇ ಮಾನಸ ಸರೋವರ

ಜೀವನ ಸ್ಫೂರ್ತಿ
ಪಂಚಮಿ ಬಾಕಿಲಪದವು



ಬದುಕಿನಲ್ಲಿ ಅದೆಷ್ಟೋ ಘಟನೆಗಳು ನಮ್ಮ ಊಹೆಗೆ ನಿಲುಕದಂತೆ ನಡೆದು ಬಿಡುತ್ತವೆ. ಕೆಲವು ಘಟನೆಗಳು ಹೀಗಾಗಬಹುದೆಂದು ನಾವು ಯೋಚಿಸುತ್ತಿರುವಾಗಲೇ ಚಿಕ್ಕದೊಂದು ಸುಳಿವೂ ಇಲ್ಲದೆ ನಮ್ಮ ಕಲ್ಪನೆಗೆ ವಿರುದ್ಧವಾಗಿ ಗತಿಸುತ್ತವೆ. ಅಂತಹ ಸಂದರ್ಭದಲ್ಲಿ ನಾವು ಎಷ್ಟೇ ದೊಡ್ಡ ವೇದಾಂತಿಯಂತಿದ್ದರೂ ಕ್ಷಣಕಾಲ ಚಿಂತೆಗೀಡಾಗುತ್ತೇವೆ. ಆಗುವುದೆಲ್ಲ ಒಳ್ಳೆಯದಕ್ಕೆ, ಇದೊಂದು ವಿಧಿಯ ನಿಯಮ, ಹಣೆಬರಹದಲ್ಲಿದ್ದ ಹಾಗೆ ಆಗುತ್ತೆ ಬಿಡು ಇತ್ಯಾದಿ ಮಾತುಗಳನ್ನು ನಮ್ಮನ್ನು ನಾವು ಸಮಾಧಾನ ಮಾಡಿಕೊಳ್ಳಲು ಆಡಿಕೊಂಡರೂ ಒಳಮನಸ್ಸಲ್ಲಿ ಹೀಗಾಯಿತಲ್ಲ ಎಂಬ ಒಂದು ಕೊರಗು ಇದ್ದೇ ಇರುತ್ತದೆ. ಅಂತಹ ಸಣ್ಣ ಕೊರಗು ನಮ್ಮನ್ನು ಭಾದಿಸದಂತೆ, ಯಾವುದೇ ಘಟನೆಗಳನ್ನು ಎದುರಿಸುವ ಧೈರ್ಯ ನಮ್ಮೊಳಗೆ ಬೆಳೆಯಬೇಕು. ಜೀವನದಲ್ಲಿ ಎಡರು-ತೊಡರು, ಜಯ-ಅಪಜಯ, ಸನ್ಮಾನ-ಅವಮಾನಗಳು ಬರುವುದನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯ ಇಲ್ಲ, ಅವುಗಳನ್ನು ಸ್ವೀಕರಿಸುವ ರೀತಿ ಮತ್ತು ಅದರಿಂದ ಕಲಿಯುವ ಸಾಧ್ಯತೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಮಾತ್ರ ನಮಗಿದೆ ಎಂಬುದನ್ನು ಅರಿತುಕೊಳ್ಳಬೇಕು!

> ಎಂಥದೇ ಸಮಸ್ಯೆಗಳು ಎದುರಾದರೂ, ನಮಗಿಂತ ಸಮಸ್ಯೆಗಳು ದೊಡ್ಡದಲ್ಲ ಎಂಬ ಪ್ರಜ್ಞೆಯು ಮನದಾಳದಲ್ಲಿ ಸದಾ ಜಾಗೃತವಾಗಿರಬೇಕು. ಸಮಸ್ಯೆ ನಮ್ಮನ್ನು ಕಬಳಿಸಿ ಚಿಂತಾಕ್ರಾಂತರನ್ನಾಗಿಸಲು ಬಿಡಬಾರದು.

ಎಂಥದೇ ಸಮಸ್ಯೆಗಳು ಎದುರಾದರೂ, ನಮಗಿಂತ ಸಮಸ್ಯೆಗಳು ದೊಡ್ಡದಲ್ಲ ಎಂಬ ಪ್ರಜ್ಞೆಯು ಮನದಾಳದಲ್ಲಿ ಸದಾ ಜಾಗೃತವಾಗಿರಬೇಕು. ಸಮಸ್ಯೆ ನಮ್ಮನ್ನು ಕಬಳಿಸಿ ಚಿಂತಾಕ್ರಾಂತರನ್ನಾಗಿಸಲು ಬಿಡಬಾರದು. ಆದಾಗ್ಯೂ, ಸಮಸ್ಯೆಗಳಲ್ಲೇ ಜೀವನದ ಮಹತ್ವದ ಪಾಠಗಳು ಹುದುಗಿರುತ್ತವೆ. ಸಮಸ್ಯೆಗಳು ಎದುರಾದಾಗ ಅದರ ಕುರಿತಾಗಿ ಚಿಂತಿಸುತ್ತಾ, ನಕಾರಾತ್ಮಕ ಆಲೋಚನೆಗಳ ಸುಳಿಗಳೊಳಗೆ ಸಿಲುಕಿಕೊಳ್ಳುವುದರ ಬದಲಿಗೆ ಅವುಗಳ ಪರಿಹಾರೋಪಾಯಗಳತ್ತ ದೃಷ್ಟಿ ಹಾಯಿಸಬೇಕು. ಕಷ್ಟಗಳು ಅಡರಿಕೊಂಡಾಗ ಕಿರಿಚಾಡುವುದನ್ನು, ಸಿಡಿಮಿಡಿಗೊಳ್ಳುವುದನ್ನು ಯತ್ನಪೂರ್ವಕವಾಗಿ ಬಿಟ್ಟು ಬಿಡಬೇಕು. ಸನ್ನಿವೇಶ ಎಷ್ಟೇ ಗಂಭೀರವಾಗಿದ್ದರೂ, 'ನಾನು ಮೇಲೇಳಲು ಸಾಧ್ಯವಾಗದಷ್ಟು ಕೆಳಗೆ ಬಿದ್ದಿದ್ದೇನೆ' ಎನ್ನುವ ಹತಾಶೆಯ ಮಾತುಗಳನ್ನು ಆಡದೆ 'ಎಲ್ಲವೂ ಸರಿ ಹೋಗುತ್ತದೆ, ಹೋಗಲೇಬೇಕು, ಹೋಗಲಾಡಿಸಲು ನನ್ನಿಂದ ಸಾಧ್ಯ' ಎಂದು ನಮ್ಮೊಳಗೆ ಆತ್ಮವಿಶ್ವಾಸದ ಕಿಡಿ ಹಚ್ಚಿಸಿಕೊಂಡು ಕಾರ್ಯಪ್ರವೃತರಾಗಬೇಕು. ಶ್ರೀಕೃಷ್ಣ ಭಗವದ್ಗೀತೆಯಲ್ಲಿ "ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ" ಎಂದು ಹೇಳುತ್ತಾನೆ. ಅಂತಃಕರಣವು ಪ್ರಸನ್ನವಾಗಿದ್ದರೆ ಎಲ್ಲ ದುಃಖಗಳು ಇಲ್ಲವಾಗುತ್ತದೆ ಎಂಬುದು ಇದರರ್ಥ. ವಿಷಮ ಸನ್ನಿವೇಶಗಳಲ್ಲಿ ಪ್ರಸನ್ನಚಿತ್ತರಾಗಿದ್ದರೆ ಅಂತರಂಗದ ಶಾಂತಿಯನ್ನು, ಸ್ಥೈರ್ಯವನ್ನು ಕಾಪಾಡಿಕೊಳ್ಳುವ ಕಲೆ ಒಲಿದು ಬಿಡುತ್ತದೆ. ನಮ್ಮೊಳಗಿನ ನೆಮ್ಮದಿಯನ್ನು ಕಾಪಾಡಿಕೊಳ್ಳಲು ಕಲಿತುಕೊಂಡ ಮೇಲೆ ಎಷ್ಟು ಕಷ್ಟ ಬಂದರೇನು?

ಕೆಲವೊಮ್ಮೆ ಕಾರಣವೇ ಇಲ್ಲದೆ ದುಃಖವು ನಮ್ಮನ್ನು ಆವರಿಸಿಕೊಂಡು ಬಿಡುತ್ತದೆ. ನಾನು ನಿಷ್ಪ್ರಯೋಜಕ, ನನ್ನ ಬದುಕೆಲ್ಲ ಶೂನ್ಯ ಎಂಬ ಖಾಲಿತನ ನಮ್ಮನ್ನು ಕಾಡಿ, ಕೊಂದುಬಿಡುತ್ತದೆ. ಹೀಗೆ ಪ್ರತಿ ಬಾರಿ ಮನಸ್ಸು ಹತಾಶೆಯಿಂದ ಅಥವಾ ಅತೃಪ್ತಿಯಿಂದ ಹಳಹಳಿಸಿದಾಗಲೂ ನಾವು ನಕರಾತ್ಮಕವಾಗಿಯೇ ಚಿಂತಿಸುತ್ತೇವೆ. ಅದರ ಬದಲು ಸಕಾರಾತ್ಮಕತೆಯೆಡೆಗೆ ಮುಖ ಮಾಡಬೇಕು. ನಮ್ಮ ಬಳಿಯಿರುವ ಬೆಲೆ ಕಟ್ಟಲಾಗದ ಸಂಪತ್ತನ್ನು ನೆನಪಿಗೆ ತಂದುಕೊಳ್ಳಬೇಕು. ದೃಢವಾದ ಶರೀರ, ಸುಸ್ಥಿತಿಯಲ್ಲಿರುವ ಅಂಗಾಂಗಗಳು, ಉತ್ತಮ ಆರೋಗ್ಯ, ತಂದೆ ತಾಯಿ ಒಡ ಹುಟ್ಟಿದವರು, ಅವರ ಪ್ರೀತಿ, ಉತ್ತಮ ಸ್ನೇಹಿತರು ಹೀಗೆ 'ಸಂಪತ್ತು' ಎಂದು ಯೋಚಿಸಿಯೇ ಇಲ್ಲದ ಅದೆಷ್ಟೋ ವಿಷಯಗಳು ಮನುಜನಿಗೆ ನಿಜವಾದ ಸಂಪತ್ತು, ಈ ವಸ್ತುಗಳು ಮನಃಪಟಲದ ಮುಂದೆ ಬಂದು ನಿಲ್ಲಬೇಕು. ಇಷ್ಟೆಲ್ಲ ಸೌಲಭ್ಯಗಳನ್ನು ಗುರುತಿಸಿ ಆನಂದಿಸಿದಾಗ ಮನಸ್ಸು ಶಾಂತವಾಗುತ್ತದೆ; ಧನ್ಯತಾ ಭಾವ ಆವರಿಸುತ್ತದೆ. ನಮ್ಮ ಮನಸ್ಥಿತಿಯೇ ಬೇರೆಯದಾಗಿ ಬದುಕಲ್ಲೊಂದು ಧ್ಯೇಯ, ಅದರೆಡೆಗಿನ ಹಾದಿ ಹಾಗೂ ತುತ್ತತುದಿಯಲ್ಲಿರುವ ಯಶಸ್ಸು ಗೋಚರವಾಗುತ್ತದೆ.

ಆದಾಗ್ಯೂ, ಬದುಕಿನ ಕೆಲಘಟ್ಟಗಳಲ್ಲಿ ನಾನು ಏಕಾಂಗಿ ಎಂದೆನಿಸಿಬಿಡುತ್ತದೆ. ಮನದೊಳಗಿನ ತಲ್ಲಣಗಳನ್ನು, ತುಮುಲಗಳನ್ನು ಹಂಚಿಕೊಳ್ಳಲು ಯಾರಿಲ್ಲ, ಇರುವವರು ನನ್ನ ಭಾವನೆಗಳಿಗೆ ಸ್ಪಂದಿಸಲು ಸಮರ್ಥರಲ್ಲ ಎಂದು ತೀರ್ಮಾನಿಸಿ ಮ್ಲಾನವದನರಾಗಿ ಬಿಡುತ್ತೇವೆ. ಇದಕ್ಕೆ ಸರಿಹೊಂದುವಂತೆ ಡಿ.ವಿ.ಜಿ ಸೊಗಸಾದ ಕಗ್ಗವೊಂದು ಹೇಳಿದ್ದಾರೆ,

"ಓರ್ವನೇ ನಿಲುವೆ ನೀನುತ್ಕಟಕ್ಷಣಗಳಲಿ
ಧರ್ಮಸಂಕಟಗಳಲಿ, ಜೀವಸಮರದಲಿ
ನಿರ್ವಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ
ನಿರ್ಮಿತ್ರನಿರಲು ಕಲಿ – ಮಂಕುತಿಮ್ಮ"

ಬದುಕಿನ ಹೋರಾಟದಲ್ಲಿ, ಧರ್ಮಸಂಕಟಗಳಲ್ಲಿ, ಮುಕ್ತಿಯ ನೋಂಪಿಯಲ್ಲಿ, ಸಾವಿನ ಸಮಯದಲ್ಲಿ, ಅನೇಕ ಪ್ರಮುಖ ಕ್ಷಣಗಳಲ್ಲಿ ಏಕಾಂಗಿಯಾಗಿ ನಾವು ನಿಲ್ಲಬೇಕಾಗಬಹುದು. ಹಾಗಾಗಿ ಏಕಾಂಗಿಯಾಗಿರುವುದನ್ನು ಕಲಿ ಮಂಕುತಿಮ್ಮ!!

ಅದೆಷ್ಟೋ ಬಾರಿ ನಮ್ಮ ಬೆನ್ನು ತಟ್ಟಿ ಮುಂದಿನ ಹಾದಿ ತೋರಲು ಯಾರೂ ಇರುವುದಿಲ್ಲ, ನಮ್ಮ ಬಾಳಿಗೆ ನಾವೇ ದೀವಿಗೆಯಾಗಿ ಎಚ್ಚರಿಕೆಯಿಂದ ಮುಂದೆ ಸಾಗಬೇಕಾಗುತ್ತದೆ. ಕಂಬನಿಯನ್ನು ನಾವೇ ಒರಸಬೇಕಾಗುತ್ತದೆ; ಖುಷಿಯನ್ನು ನಾವೊಬ್ಬರೇ ಸಂಭ್ರಮಪಡಬೇಕಾಗುತ್ತದೆ. ಇದ್ಯಾವುದಕ್ಕೂ ಗಾಬರಿಗೊಳಗಾಗದೆ, ದುಃಖಪಡದೆ, ಹತಾಶನಾಗದೆ ಒಬ್ಬನೇ ಬದುಕುವುದನ್ನು ಅನುಭವಿಸಬೇಕು; ಆನಂದಿಸಬೇಕು. ಸುಖದುಃಖಗಳನ್ನು ನಿಭಾಯಿಸುವ, ನಮ್ಮನ್ನು ನಾವೇ ಸಲಹುವ ಕಲೆ ಕರಗತಗೊಳಿಸಿದಾಗ ಒಂಟಿತನ ಕಾಡುವುದಿಲ್ಲ. ನಮ್ಮೊಳಗೆಯೇ ಎಲ್ಲವನ್ನೂ ಹಂಚಿಕೊಳ್ಳುವ ಗುಣ ರೂಢಿಯಾಗುತ್ತದೆ. ಇದರಿಂದ ಅಂತರಂಗದ ಆಪ್ತ ಸಮಾಲೋಚನೆ- ಸಮಾಚಾರಗಳು ಎಲ್ಲೂ ಹೊರಹೋಗುವುದಿಲ್ಲ. ಹಾಗಾಗಿ ನಮ್ಮ ಯೋಜನೆ ಯೋಚನೆಗಳಿಗೆ ಹುಳಿ ಹಿಂಡುವ, ಸುಟ್ಟು ಬೂದಿ ಮಾಡುವ ಯಾವುದೇ ದುಷ್ಟಶಕ್ತಿಗಳು ನಮ್ಮ ಸುತ್ತ ಆವರಿಸಲೂ ಸಾಧ್ಯವಿಲ್ಲವಲ್ಲವೇ!?

ಜೀವನ ಪ್ರತಿಕ್ಷಣ ನಮ್ಮೆಡೆಗೆ ಅವಕಾಶಗಳನ್ನು ಎಸೆಯುತ್ತಲೇ ಇರುತ್ತದೆ. ಪ್ರತಿಯೊಂದು ಅವಕಾಶಗಳನ್ನು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ನಮ್ಮ ಭವಿಷ್ಯ ನಿರ್ಧಾರವಾಗುತ್ತದೆ. ವೇದಿಕೆಗಳು ಚಿಕ್ಕದಾಗಿರಲಿ ದೊಡ್ಡದಾಗಿರಲಿ ಸಿಕ್ಕಿದ ಅವಕಾಶಗಳನ್ನು ಕಡೆಗಣಿಸದೆ ಮುನ್ನುಗ್ಗಬೇಕು. ಸಭಾಕಂಪನ, ಅಂಜಿಕೆ, ಸಣ್ಣತನಗಳನ್ನು ತೊರೆದು ನಮ್ಮೊಳಗೆ ಅಡಕವಾಗಿರುವ ಪ್ರತಿಭೆಯನ್ನು ಕ್ರಿಯಾತ್ಮಕವಾಗಿ ಪ್ರದರ್ಶಿಸಬೇಕು. ಯಾಕೆಂದರೆ ಪ್ರತಿಯೊಂದು ವೇದಿಕೆಯಲ್ಲಿಯೂ ಒಂದು ಹೊಸ ಪಾಠವನ್ನು ಕಲಿಯುತ್ತೇವೆ; ವಿನೂತನ ವಿಷಯಗಳು ಗೋಚರವಾಗುತ್ತವೆ. ಒಂದು ವೇಳೆ ವೇದಿಕೆಯಲ್ಲಿ ಅವಮಾನವಾದರೂ ನಿರಾಶರಾಗಬಾರದು. ಸನ್ಮಾನವನ್ನು ಹೇಗೆ ಸ್ವೀಕರಿಸುತ್ತೇವೆಯೋ ಹಾಗೆಯೇ ಅವಮಾನಗಳನ್ನು ಸ್ವೀಕರಿಸುವ ಮನಸ್ಥಿತಿ ನಮ್ಮದಾಗಬೇಕು. ಸುತ್ತಮುತ್ತಲಿನ ಪರಿಸ್ಥಿತಿ ಏನೇ ಇರಲಿ ನಿರ್ಮಲರಾಗಿದ್ದು, ನಮ್ಮೊಳಗಿನ ಚೈತನ್ಯವನ್ನು ಎಂದಿಗೂ ಕಳೆಗುಂದಲು ಬಿಡಬಾರದು.



ನಾಳೆಗಳಲಿ ಭರವಸೆಯನ್ನು ಕಾಣುವ ಆಶಾದಾಯಕ ವ್ಯಕ್ತಿತ್ವ ರೂಪುಗೊಳ್ಳಬೇಕು. ಮುಂದಿನ ಅವಕಾಶಗಳಲ್ಲಿ ಹಿಂದಿನಕ್ಕಿಂತ ಭಿನ್ನವಾಗಿ ಹಾಗೂ ಉತ್ಕೃಷ್ಟವಾಗಿ ನಮ್ಮನ್ನು ನಾವು ಅಭಿವ್ಯಕ್ತಗೊಳಿಸಬೇಕು. ಪ್ರತಿನಿತ್ಯವೂ ಹೊಸತನ್ನು ಕಲಿತು ಪ್ರಬುದ್ಧರಾಗಬೇಕು ಅಷ್ಟೇ!!

ಇಂದು ಇದ್ದಂತೆ ನಾಳೆ ಇರಲು ಸಾಧ್ಯವಿಲ್ಲ; ನಾಳೆ ಇದ್ದಂತೆ ಮುಂದಿರಲು ಸಾಧ್ಯವಿಲ್ಲ. ಪ್ರತಿನಿತ್ಯವೂ ಎಲ್ಲವೂ ನನ್ನ ಇಚ್ಛೆಯಂತೆಯೇ ನಡೆಯಲಿ ಎಂದು ದೇವರಲ್ಲಿ ಬೇಡಿಕೊಳ್ಳುವುದರಲ್ಲಿ ಅರ್ಥವಿಲ್ಲ! ಯಾಕೆಂದರೆ ಕೆಲವೊಮ್ಮೆಯಾದರೂ ಜೀವನದಲ್ಲಿ ಅವಮಾನ, ಅಪಮಾನ, ಸೋಲು,ಸವಾಲುಗಳನ್ನು ಎದುರಿಸುವ ಅವಕಾಶ ನಮಗೊದಗಬೇಕು. ನಮ್ಮ ಗುಣಮಟ್ಟವನ್ನು, ನಮ್ಮೊಳಗೆ ಅಡಕವಾಗಿರುವ ಶಕ್ತಿಯನ್ನು ಅರ್ಥೈಸುವ ಪರೀಕ್ಷೆಗಳು ಶೈಕ್ಷಣಿಕ ಪರೀಕ್ಷೆಗಳಂತೆ ನಿರಂತರ ನಡೆಯುತ್ತಿದ್ದರೆಯೇ ಬದುಕು ಸುಂದರ!

(ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿನಿ, ಅಂಬಿಕಾ ಮಹಾವಿದ್ಯಾಲಯ, ಮತ್ತೂರು)



ನೀವೂ ಬರೆಯಿರಿ

ಮಂದಾರ ಪತ್ರಿಕೆಯಲ್ಲಿ ನೀವೂ ಕೂಡ ಲೇಖನಗಳನ್ನು ಬರೆಯಬಹುದು. ಕತೆ, ಪ್ರಬಂಧ, ನುಡಿಚಿತ್ರ, ಕವನಗಳು ಹೀಗೆ ಎಲ್ಲಾ ರೀತಿಯ ಸಾಹಿತ್ಯಗಳಿಗೂ ಇಲ್ಲಿ ಅವಕಾಶವಿದೆ. ಇನ್ನೇಕೆ ತಡ! ಲೇಖನಿಯನ್ನು ಕೈಗೆತ್ತಿಕೊಳ್ಳಿ.

ನಮ್ಮ ಇಮೇಲ್ ವಿಳಾಸ
editormandara@gmail.com


ವಾಟ್ಸಪ್ ನಂಬರ್
9353223669


ನಮ್ಮ ವಿಳಾಸ:
ಸಂಪಾದಕರು, ಮಂದಾರ ಪತ್ರಿಕೆ
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಎಸ್.ಡಿ.ಎಂ. ಕಾಲೇಜು (ಸ್ವಾಯತ್ತ), ಉಜಿರೆ, ಬೆಳ್ತಂಗಡಿ
ತಾಲೂಕು, ದಕ್ಷಿಣ ಕನ್ನಡ - 574240

ಮಂದಾರ ಟೂನ್

ರಘುಪತಿ ಶೃಂಗೇರಿ
raghupathi.ns@gmail.com










ಉಜಿರೆ ಮತ್ತು ಕಕ್ಕಿಂಜೆಯಲ್ಲಿ
RAMYA
1 GM GOLD • FANCY
ರಮ್ಯಾ
1 ಗ್ರಾಂ ಗೋಲ್ಡ್ & ಫ್ಯಾನ್ಸಿ
ಮದುವೆ ಹಾಗೂ ಇನ್ನಿತರ ಸಮಾರಂಭಗಳಿಗೆ
ಆಭರಣಗಳು ಬಾಡಿಗೆಗೆ ಮತ್ತು ಖರೀದಿಗೆ ಲಭ್ಯ
ಮದುಮಗಳಿಗೆ ಗಾಜಿನ ಬಳೆ ಸೆಟ್ಟಿಂಗ್
ಮಾಡಿಕೊಡಲಾಗುವುದು.
ನಮ್ಮ ಸಹಸಂಸ್ಥೆಗಳು:
ಕಾಲೇಜು ರಸ್ತೆ, ಉಜಿರೆ
ಕೆ.ಕೆ.ಜಿ. ಕಾಂಪ್ಲೆಕ್ಸ್, ಕಕ್ಕಿಂಜೆ
Proprietor:
Prasad B.S. Mob: 9901728588


100%
PURE & NATURAL
SPECIAL
KALPATHARU
Double Filtered
Pure Coconut Oil
• ಗಾಣದಲ್ಲಿ ತಯಾರಿಸಲಾದ ಪರಿಶುದ್ಧ ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಮತ್ತು ಶೇಂಗಾ ಎಣ್ಣೆ
• ಶುದ್ಧವಾಗಿ ತಯಾರಿಸಿದ ಮಸಾಲ ಹುಡಿಗಳು
• ಎಲ್ಲಾ ರೀತಿಯ ಧಾನ್ಯಗಳ ಹಿಟ್ಟು
• ಡ್ರೈ ಫ್ರುಟ್ಸ್
GANESH FLOUR & OIL MILL
College Road, Ujire -574240
Mob: 9480289125


Dealers for Laptops/Branded & Assembled Desktops,
Accessories and IT Consumables, Softwares
Windows 11
Computer Sales & Services
DDR5 RAM LAPTOPS & SYSTEMS AVAILABLE
SCAN ME FOR OFFERS!!
CONTACT US
7204071717
Shenoy Sales Corporation
Indian Complex, College Road, Opp. Panchami Residency, Ujire - 574240
Microsoft
ASUS
intel
DELL
hp

ಇದು ಬ್ಲಾಕ್‌ಚೈನ್ ಕಾಲವಯ್ಯಾ!

ಮುಂದಿನ ದಿನಗಳಲ್ಲಿ ಉನ್ನತ ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನದ ಬಳಕೆ ಮತ್ತಷ್ಟು ಜನಪ್ರಿಯಗೊಳ್ಳಲಿದೆ. ಬ್ಲಾಕ್‌ಚೈನ್ ತಂತ್ರಜ್ಞಾನದ ಇತಿಹಾಸ, ವಿವಿಧ ಕ್ಷೇತ್ರಗಳಲ್ಲಿ ಈ ತಂತ್ರಜ್ಞಾನದ ಬಳಕೆ ಹೇಗೆ?, ಉದ್ಯೋಗಗಳನ್ನು ಪಡೆಯಲು ಬೇಕಾದ ಕೌಶಲ್ಯಗಳು ಹಾಗೂ ಉದ್ಯೋಗಾವಕಾಶಗಳ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಜಾಲ ನುಡಿ
ಡಾ. ಉದಯ ಶಂಕರ ಪುರಾಣಿಕ



ಬ್ಲಾಕ್‌ಚೈನ್ ತಂತ್ರಜ್ಞಾನ ಇಂದು ದಿನದಿಂದ ದಿನಕ್ಕೆ ವಿಶ್ವದಾದ್ಯಂತ ಜನಪ್ರಿಯವಾಗುತ್ತಿರುವ ಬಹುಪಯೋಗಿ ತಂತ್ರಜ್ಞಾನವಾಗಿದೆ. ಬ್ಲಾಕ್‌ಚೈನ್ ಎಂದರೆ ಬಿಟ್‌ಕಾಯಿನ್‌ಗೆ ಮಾತ್ರ ಸೀಮಿತವೆನ್ನುವ ತಪ್ಪು ಕಲ್ಪನೆಯಿಂದ ವಿದ್ಯಾರ್ಥಿಗಳು ಮತ್ತು ಉದ್ಯೋಗಾಂಕ್ಷಿಗಳು ಹೊರಬರುವುದು ಅತ್ಯಗತ್ಯವಾಗಿದೆ.

ಬಹುಪಯೋಗಿ ಬ್ಲಾಕ್‌ಚೈನ್ ತಂತ್ರಜ್ಞಾನದ ಸಂಕ್ಷಿಪ್ತ ಇತಿಹಾಸವನ್ನು ನೋಡುವುದಾದರೆ,

ಬ್ಲಾಕ್‌ಚೈನ್ ಆವೃತ್ತಿ 1.0:
ಈ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು 2009ರಲ್ಲಿ ಬಿಟ್‌ಕಾಯಿನ್ ಕ್ರಿಪ್ಟೋಕರೆನ್ಸಿ ಹಾಗೂ ನಗದುರಹಿತ ವ್ಯವಹಾರಗಳಲ್ಲಿ ಬಳಸಲಾಯಿತು.

ಬ್ಲಾಕ್‌ಚೈನ್ ಆವೃತ್ತಿ 2.0 :
ಈ ಬ್ಲಾಕ್‌ಚೈನ್ ತಂತ್ರಜ್ಞಾನದಲ್ಲಿ ಸ್ಮಾರ್ಟ್ ಕಾಂಟ್ರಾಕ್ಟ್ ಸೌಲಭ್ಯವನ್ನು ನೀಡಲಾಯಿತು.

ಬ್ಲಾಕ್‌ಚೈನ್ ಆವೃತ್ತಿ 3.0 :
ಡಿಆಪ್ಸ್ (ವಿಕೇಂದ್ರಿಕೃತವಾದ ಅನ್ವಯಿಕ ತಂತ್ರಾಂಶಗಳು) ಸೌಲಭ್ಯವನ್ನು ಬ್ಲಾಕ್‌ಚೈನ್ ತಂತ್ರಜ್ಞಾನದಲ್ಲಿ ನೀಡಲಾಯಿತು.

ಬ್ಲಾಕ್‌ಚೈನ್ ಆವೃತ್ತಿ 4.0 :
ರಿಯಲ್‌ಟೈಮ್ ಅನ್ವಯಿಕ ತಂತ್ರಾಂಶಗಳು ಮತ್ತು ಐಓಟಿ 4.0 ತಂತ್ರಜ್ಞಾನಕ್ಕೆ ಪೂರಕವಾಗಿ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಲು ಅಗತ್ಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಮುಂಬರುವ ದಿನಗಳಲ್ಲಿ ಬ್ಲಾಕ್‌ಚೈನ್ ಆವೃತ್ತಿ 5.0 ಬಳಕೆ ಹೆಚ್ಚಾಗುವ ನಿರೀಕ್ಷೆ ಇದೆ. ಇದುವರೆಗಿನ ಬ್ಲಾಕ್‌ಚೈನ್ ತಂತ್ರಜ್ಞಾನ ಆವೃತ್ತಿಗಳಿಗಿಂತ, ಬ್ಲಾಕ್‌ಚೈನ್ ಆವೃತ್ತಿ 5.0 ಹೆಚ್ಚು ಸಮರ್ಥವಾಗಿರಲಿದ್ದು, ನೆಟ್‌ವರ್ಕ್ ವೆಚ್ಚವನ್ನು ಕಡಿಮೆಯಾಗಿಸುವ ನಿರೀಕ್ಷೆ ಇದೆ. ಉನ್ನತ ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳಲ್ಲಿ ಈ ಆವೃತ್ತಿಯ ಬಳಕೆ ಜನಪ್ರಿಯವಾಗುತ್ತದೆ ಎಂದು ಉದ್ಯಮ ತಜ್ಞರು ಅಭಿಪ್ರಾಯಪಡುತ್ತಾರೆ.

ವಿವಿಧ ಕ್ಷೇತ್ರಗಳಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನ

1) ವಿಶ್ವದಾದ್ಯಂತ ವಜ್ರಗಳ ವ್ಯಾಪಾರದಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನ ಮಹತ್ವದ ಪಾತ್ರವಹಿಸುತ್ತಿದೆ. ವಜ್ರಗಳ ಗಣಿಗಳಿಗಿಂದ ಹಿಡಿದು ವಜ್ರಗಳು ಮತ್ತು ವಜ್ರಖಚಿತ ಆಭರಣಗಳನ್ನು ಮಾರಾಟ ಮಾಡುವ ವಾಣಿಜ್ಯ ಮಳಿಗೆಗಳವರೆಗೂ, ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಹೈಪರ್‌ಲೆಡ್ಜರ್ ತಂತ್ರಜ್ಞಾನವನ್ನು ಬಳಸಿ ಎವರ್‌ಲೆಡ್ಜರ್ ಸಂಸ್ಥೆಯು ಅಭಿವೃದ್ಧಿಪಡಿಸಿರುವ ಬ್ಲಾಕ್‌ಚೈನ್ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯಿಂದ, ವಜ್ರಗಳ ವ್ಯಾಪಾರದಲ್ಲಿ ಮೋಸ ಮತ್ತು ಅನಧಿಕೃತ ವ್ಯವಹಾರವನ್ನು ತಕ್ಷಣ ಗುರುತಿಸಲು ಸಾಧ್ಯವಾಗುತ್ತಿದೆ. ಮಾರ್ಚ್ 2018ರಲ್ಲಿ ವಿಶ್ವದಲ್ಲಿ ಅಸಲಿ ವಜ್ರಗಳೆಂದು ಪ್ರಮಾಣೀಕೃತವಾದ 2 ಕೋಟಿ 20 ಲಕ್ಷ ವಜ್ರಗಳ ಸಮಗ್ರ ವಿವರಗಳನ್ನು ಈ ಬ್ಲಾಕ್‌ಚೈನ್ ಆಧಾರಿತ ವ್ಯವಸ್ಥೆಯಲ್ಲಿ ದಾಖಲು ಮಾಡಲಾಗಿತ್ತು. ನಂತರದ ಪ್ರತಿ ತಿಂಗಳು ಸರಾಸರಿ ಒಂದು ಲಕ್ಷ ಅಸಲಿ ಮತ್ತು ಪ್ರಮಾಣೀಕೃತ ವಜ್ರಗಳ ಮಾಹಿತಿಯನ್ನು ಈ ವ್ಯವಸ್ಥೆಯಲ್ಲಿ ದಾಖಲು ಮಾಡಲಾಗುತ್ತಿದೆ. ಹೀಗೆ ಅಸಲಿ ಮತ್ತು ಪ್ರಮಾಣಿಕೃತ ವಜ್ರಗಳ ಮಾಹಿತಿ ಒಂದು ಕಡೆ ದೊರೆಯುವುದರಿಂದ, ವಜ್ರಗಳ ವ್ಯಾಪಾರಿಗಳಿಗೆ ಮತ್ತು ಗ್ರಾಹಕರಿಗೆ ಸಹಾಯವಾಗುತ್ತಿದೆ.



ಯಾವ ವಜ್ರವನ್ನು ಯಾವ ವರ್ಷದಲ್ಲಿ ಯಾವ ದೇಶದ ಗಣಿಯಿಂದ ಹೊರತೆಗೆಯಲಾಯಿತು ಎನ್ನುವುದರಿಂದ ಈ ವಜ್ರ ಅಥವಾ ವಜ್ರಖಚಿತ ಆಭರಣ ಮಾರಾಟವಾಗುವ ಮಳಿಗೆಗೆ ಹೇಗೆ ತಲುಪಿತು ಎನ್ನುವ ಸಮಗ್ರ ವಿವರಗಳನ್ನು ಪಡೆಯಲು ಸಾಧ್ಯವಾಗುವುದರಿಂದ, ನಕಲಿ ಅಥವಾ ಕಳಪೆ ಗುಣಮಟ್ಟದ ವಜ್ರಗಳನ್ನು ಮಾರಾಟ ಮಾಡುವುದಕ್ಕಾಗಲಿ ಅವಕಾಶವಿರುವುದಿಲ್ಲ. ಇದಲ್ಲದೆ, ಕೆಲವು ಅಪರಾಧ ಮಾಫಿಯಾ ಮತ್ತು ಭಯೋತ್ಪಾದಕ ಸಂಘಟನೆಗಳು, ಅನಧಿಕೃತವಾಗಿ ವಜ್ರಗಳ ಮಾರಾಟ ಮಾಡುವುದನ್ನು ಗುರುತಿಸಿ, ಇಂತಹ ವ್ಯಾಪಾರವನ್ನು ಹತ್ತಿಕ್ಕಲು ಪೋಲಿಸರಿಗೆ ಸಹಾಯವಾಗುತ್ತಿದೆ.

2) ವಾಣಿಜ್ಯ ಹಡಗು ಉದ್ಯಮದಲ್ಲಿ ಅಗ್ರಸ್ಥಾನದಲ್ಲಿರುವ ಬಹುರಾಷ್ಟ್ರೀಯ ಸಂಸ್ಥೆ ಮರ್ಕ, ತನ್ನ ದೈನಂದಿನ ವಹಿವಾಟಿನಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನ ಬಳಸಲಾರಂಭಿಸಿದೆ. ಮೊದಲು ಈ ಸಂಸ್ಥೆಯು ಸರಕು ಸಾಗಾಣಿಕೆಗೆ ಬಳಸುವ ನೂರಾರು ಹಡಗುಗಳ ವಿಮೆ ಪಾಲಿಸಿ ನಿರ್ವಹಣೆಗಾಗಿ ಯಶಸ್ವಿಯಾಗಿ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಿತು. ನಂತರ ವಿಶ್ವದಾದ್ಯಂತ ಸರಕು ಸಾಗಾಣಿಕೆ, ದಾಸ್ತಾನು ಮತ್ತು ಬಂದರು ಚಟುವಟಿಕೆಗಳನ್ನು ಕೂಡಾ ಬ್ಲಾಕ್‌ಚೈನ್ ತಂತ್ರಜ್ಞಾನ ಬಳಸಿ ಮಾಡಲು ಮರ್ಕ ಸಂಸ್ಥೆಯು, ಬಹುರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯೊಂದರ ಜೊತೆಯಲ್ಲಿ ಕೆಲಸ ಮಾಡುತ್ತಿದೆ. ಗ್ರಾಹಕರು, ಹಡಗು ಸಂಸ್ಥೆಗಳು, ವಿಮಾ ಸಂಸ್ಥೆಗಳು, ಸರಕು ನಿರ್ವಹಣೆ ಸಂಸ್ಥೆಗಳು, ಸರಕು ಸಾಗಾಣಿಕೆ ಮತ್ತು ದಾಸ್ತಾನು ಸಂಸ್ಥೆಗಳು, ಹೀಗೆ ಪ್ರತಿಯೊಂದು ಸಂಸ್ಥೆ ಜೊತೆಗೂಡಿ, ಪಾರದರ್ಶಕವಾಗಿ ವ್ಯವಹರಿಸಲು ಬ್ಲಾಕ್‌ಚೈನ್ ತಂತ್ರಜ್ಞಾನ ಸಹಾಯ ಮಾಡುತ್ತಿದೆ. ಅಪನಂಬಿಕೆ, ವಂಚನೆ, ವಿಳಂಬ ಮೊದಲಾದ ಸಮಸ್ಯೆಗಳಿಗೆ ಅವಕಾಶವಿಲ್ಲದಂತೆ ವಿಶ್ವಾದಂತ್ಯ ಈ ಉದ್ಯಮವನ್ನು ನಡೆಸಲು ಬ್ಲಾಕ್‌ಚೈನ್ ತಂತ್ರಜ್ಞಾನ ಸಹಾಯ ಮಾಡಲಿದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

3) ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಕೂಡಾ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಲಾಗುತ್ತಿದೆ. ಉದಾಹರಣೆಗೆ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆಗೆ ಮೀಸಲಾದ ಸಿಡಿಸಿ ಸಂಸ್ಥೆಯು ಸಾರ್ವಜನಿಕರಿಗೆ ಅಗತ್ಯ ನೆರವು ಮತ್ತು ಜಾಗೃತಿಯನ್ನುಂಟು ಮಾಡಲು ಬ್ಲಾಕ್‌ಚೈನ್ ಆಧಾರಿತ ತಂತ್ರಾಂಶಗಳನ್ನು ಬಳಸುತ್ತಿದೆ. ಡೆಂಗ್ಯೂ, ಮಲೇರಿಯಾ, ಕಾಲರಾ ಮೊದಲಾದ ರೋಗಗಳು ಬಾರದಂತೆ ಏನು ಕ್ರಮಕೈಗೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಲವಾರು ಯೋಜನೆಗಳನ್ನು ಈ ಸಂಸ್ಥೆ ಅನುಷ್ಠಾನಗೊಳಿಸುತ್ತಿದೆ. ಬ್ಲಾಕ್‌ಚೈನ್ ತಂತ್ರಜ್ಞಾನ ಬಳಸುವುದರಿಂದ ಈ ಯೋಜನೆಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಈ ಯೋಜನೆಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಅಥವಾ ಸಾರ್ವಜನಿಕರಲ್ಲಿ ಜಾಗೃತಿಯನ್ನುಂಟು ಮಾಡಲು ವಿಫಲವಾಗಿವೆ ಎಂದು ತಿಳಿಯಲು ಸಹಾಯವಾಗುತ್ತಿದೆ. ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಯಲ್ಲಿ ಭ್ರಷ್ಟಾಚಾರ ಮತ್ತು ತಪ್ಪು ಮಾಹಿತಿಯ ಬಳಕೆಯನ್ನು ತಡೆಯಲು ಸಾಧ್ಯವಾಗುತ್ತಿದೆ.

ಉದ್ಯೋಗಾವಕಾಶ

ಇಂಜಿನಿಯರಿಂಗ್ ಪದವಿ ಹೊಂದಿಲ್ಲದರಿಗೂ ಬ್ಲಾಕ್‌ಚೈನ್ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗವಕಾಶಗಳು ಲಭ್ಯವಿದೆ. ಉದಾಹರಣೆಗೆ ತ್ರಿಪಲ್ ಎಂಟ್ರಿ ಅಕೌಂಟಿಂಗ್ ಕೌಶಲ್ಯ ಹೊಂದಿರುವವರಿಗೆ ಬೇಡಿಕೆ ಇದೆ. ಮ್ಯಾನೇಜ್‌ಮೆಂಟ್ ಪದವಿ ಪಡೆದವರಿಗೂ ಹೊಸ ಉದ್ಯೋಗವಕಾಶಗಳು ದೊರೆಯುತ್ತಿವೆ. ದೇಶವಿದೇಶಗಳಲ್ಲಿ ಈ ಕ್ಷೇತ್ರದಲ್ಲಿ ದೊರೆಯುತ್ತಿರುವ ಸಾವಿರಾರು ಹೊಸ ಉದ್ಯೋಗವಕಾಶಗಳನ್ನು ಕನ್ನಡಿಗರು ಪಡೆಯಲು ಅಗತ್ಯವಾದ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡಲು ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಮುಂದಾಗಬೇಕಾಗಿದೆ.

ಡಾ. ಉದಯ ಶಂಕರ ಪುರಾಣಿಕ ಕೊಪ್ಪಳದವರು. ಅಮೇರಿಕ, ಯೂರೋಪ್, ಆಸ್ಟ್ರೇಲಿಯಾ, ಜಪಾನ್ ಮೊದಲಾದ ದೇಶಗಳ ಪ್ರಮುಖ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಲ್ಲಿ ಕೆಲಸ ಮಾಡಿರುವ ಇವರು, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸುಮಾರು 35 ವರ್ಷಗಳ ಅನುಭವ ಹೊಂದಿದ್ದಾರೆ.

ಬ್ಲಾಕ್‌ಚೈನ್ ತಂತ್ರಜ್ಞಾನ ಆಧಾರಿತ ಪ್ರಾಜೆಕ್ಟ್‌ಗಳಲ್ಲಿ ಮಾಹಿತಿ ತಂತ್ರಜ್ಞಾನ ಸಂಬಂಧಿಸಿದ ಉದ್ಯೋಗಗಳನ್ನು ಪಡೆಯಲು ಕೆಲವು ಕೌಶಲ್ಯಗಳು ಸಹಾಯ ಮಾಡುತ್ತವೆ.



1 ಬ್ಲಾಕ್‌ಚೈನ್ ತಂತ್ರಜ್ಞಾನ ಕುರಿತು ತಿಳಿದುಕೊಂಡಿರುವುದು ಅತ್ಯಗತ್ಯವಾಗಿದೆ. ಉದಾಹರಣೆಗೆ ವಿಕೇಂದ್ರಿಕೃತ ಅನ್ವಯಿಕ ತಂತ್ರಾಂಶಗಳು, ಸ್ಮಾರ್ಟ್ ಕಾಂಟ್ರಾಕ್ಟ್‌ಗಳು, ಕ್ರಿಪ್ಟೋಕರೆನ್ಸಿ ಮೊದಲಾದ ವಿಷಯಗಳನ್ನು ಕುರಿತು ಗೊತ್ತಿರುವುದು ಅಗತ್ಯವಿದೆ.

2 ಸಿ++, ಸಾಲಿಡಿಟಿ ಮೊದಲಾದ ಪ್ರೋಗ್ರಾಮಿಂಗ್ ತಂತ್ರಜ್ಞಾನಗಳಲ್ಲಿ ಅಗತ್ಯ ಕೌಶಲ್ಯ ಮತ್ತು ಅನುಭವ ಹೊಂದಿರುವುದು ಅಗತ್ಯವಿದೆ.

3 ಬ್ಲಾಕ್‌ಚೈನ್‌ನಲ್ಲಿ ಮಾಹಿತಿ ಸುರಕ್ಷತೆಗೆ ಅದ್ಯತೆ ನೀಡಲಾಗುತ್ತಿದೆ. ಹೀಗಾಗಿ ಕ್ರಿಪ್ಟೋಗ್ರಾಫಿ, ಡೇಟಾ ಸೆಕ್ಯೂರಿಟಿ, ಡೇಟಾ ಸ್ಟ್ರಕ್ಚರ್ಸ್ ಮೊದಲಾದ ವಿಷಯಗಳಲ್ಲಿ ಕೌಶಲ್ಯ ಹೊಂದಿರುವುದು ಅವಶ್ಯವಾಗಿದೆ.

4 ಉದ್ಯಮಗಳು, ಬ್ಯಾಂಕುಗಳು, ವಾಣಿಜ್ಯ ಸಂಸ್ಥೆಗಳು, ಮೊದಲಾದ ಕ್ಷೇತ್ರಗಳಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಲು, ಈ ಉದ್ಯಮಗಳು ಹೇಗೆ ಕೆಲಸ ಮಾಡುತ್ತವೆ ಎಂದು ಆಳವಾದ ಅರಿವು ಇರುವುದು ಅಗತ್ಯವಿದೆ.

5 ಬ್ಲಾಕ್‌ಚೈನ್ ತಂತ್ರಜ್ಞಾನದಲ್ಲಿ ಅಗತ್ಯ ಅನುಭವ ಹೊಂದಿರುವ ತಂತ್ರಜ್ಞರ ಕೊರತೆ ಇದೆ. ಹೀಗಾಗಿ ಹಲವಾರು ಬಾರಿ ಕಡಿಮೆ ಅನುಭವ ಅಥವಾ ಅನುಭವ ಇಲ್ಲದ ತಂತ್ರಜ್ಞರ ಜೊತೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನಿರ್ದಿಷ್ಟ ಸಮಯದಲ್ಲಿ, ಗುಣಮಟ್ಟದ ಬ್ಲಾಕ್‌ಚೈನ್ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವುದು ಸವಾಲಿನ ಕೆಲಸವಾಗುತ್ತದೆ. ಇಂತಹ ವೃತ್ತಿಪರ ಸವಾಲುಗಳನ್ನು ಎದುರಿಸಿ, ಯಶಸ್ವಿಯಾಗಲು ಅಗತ್ಯವಾದ ನಾಯಕತ್ವ, ಸಂವಹನ ಕೌಶಲ್ಯಗಳನ್ನು ಹೊಂದಿರುವುದು ಅಗತ್ಯವಾಗಿದೆ.

ಚಾಟ್ ಜಿಪಿಟಿ ಎಂಬ ಹೊಸ ಸಂಚಲನ

ಚಾಟ್ ಜಿಪಿಟಿ ವೆಬ್‌ಸೈಟ್

ನಾವು ತಂತ್ರಜ್ಞಾನವನ್ನ ಭಾವನಾತ್ಮಕವಾಗಿ ಹಚ್ಚಿಕೊಳ್ಳಬಾರದು. ಅವುಗಳ ಮೇಲೆ ಅವಲಂಬಿತರಾಗಬಾರದು. ಅರೆಮರುಳ ಮನುಷ್ಯರು ನಾವು. ತಂತ್ರಜ್ಞಾನದ ನಿತ್ಯಲೀಲೆಗೆ ಸಿಲುಕಿದ್ದೇವೆ. ಚಾಟ್‌ಬಾಟ್‌ಗಳು ನಮ್ಮ ಸಮಸ್ಯೆಯನ್ನು ಪರಿಹರಿಸಲಿಕ್ಕಾದರೆ ಒಳ್ಳೆಯದು. ಆದರೆ ಮಾನವನ ಕೆಲಸವನ್ನೂ ಕಿತ್ತುಕೊಳ್ಳುವವಾದರೆ ಕಷ್ಟ.

ಹೊಸ ತಂತ್ರಜ್ಞಾನ
ನಿಖಿಲ್ ಎನ್ ಜಿ



ಗೊತ್ತಿರದ್ದನ್ನು ತಿಳಿದುಕೊಳ್ಳಲು, ಗೊತ್ತಿರುವುದನ್ನು ಅಥವಾ ಭಾಗಶಃ ತಿಳಿದಿರುವುದನ್ನು ಪೂರ್ಣವಾಗಿ ಖಾತರಿಪಡಿಸಿಕೊಳ್ಳಲು ನಾವು ನಂಬಿರುವುದು ನಮ್ಮ ಕರಸ್ಥಲದ ಮೇಲಣ ಪರಬ್ರಹ್ಮದಂತಿರುವ ಮೊಬೈಲನ್ನೂ ಹಾಗೂ ಅದರೊಳಗಿನ ಗೂಗಲನ್ನೇ. ಕೈಗೆಟುಕುವ ದರದಲ್ಲಿ ಸಿಗುವ ಇಂಟರ್ನೆಟ್, ಜ್ಞಾನಸಂಚಯ ಯಜ್ಞಕ್ಕೆ ಹವಿಸ್ಸಾಗಿದೆ. ಗೂಗಲ್‌ನಲ್ಲಿ ಹುಡುಕುತ್ತೀರಿ, ಅದು ನೀವು ಹುಡುಕಿದ ಕೀವರ್ಡ್‌ಗಳನ್ನು ಪ್ರತ್ಯೇಕವಾಗಿ ಹಾಗೂ ಗುಂಪಾಗಿ ಹುಡುಕಿ ಲಭ್ಯವಿರುವ ವೆಬ್‌ಪೇಜ್‌ಗಳನ್ನ ತೋರಿಸುತ್ತದೆ. ಅದರಲ್ಲಿ ನೀವು ಹೆಚ್ಚೆಂದರೆ ಎರಡೋ ಮೂರೋ ಓದುತ್ತೀರಿ. ಅಲ್ಲಿ ಓದಿದ್ದೆಲ್ಲವೂ ಸತ್ಯವಾ? ಅದು ನಿಮ್ಮ ಬೌದ್ಧಿಕ ವಿವೇಚನೆಗೆ ಬಿಟ್ಟದ್ದು. ಗೂಗಲ್, ಮೊಝಿಲ ಹಾಗೂ ಇನ್ನಿತರ ಸರ್ಚ್ ಎಂಜಿನ್‌ಗಳು ಕೆಲಸ ಮಾಡುವುದು ಹೀಗೆಯೇ. ಆದರೆ ನಾವು ಹುಡುಕುವ ಎಲ್ಲದೂ ಸಿಗುತ್ತೆಯೇ ಅಲ್ಲಿ? ಉಹ್ಞೂಂ. ನಾವು ಹುಡುಕುತ್ತಿರುವ ವಿಷಯದ ಕೆಲ ಭಾಗ ಒಂದು ವೆಬ್‌ಸೈಟ್‌ನಲ್ಲಿರಬಹುದು, ಉಳಿದ ಭಾಗ ಮತ್ತೊಂದರಲ್ಲಿ, ಆದರೆ ಇದನ್ನು ಹುಡುಕಿ ಒಂದು ಸಂಗ್ರಹಯೋಗ್ಯ ಸಾರಾಂಶವನ್ನಾಗಿಸುವುದು ಕಷ್ಟದ ಕೆಲಸ. ಆದರೆ ಇದನ್ನೂ ಒಂದು ತಂತ್ರಾಂಶ ಮಾಡಿದರೆ? ನಮ್ಮ ಕೆಲಸ ಸುಲಭವಲ್ಲವೇ? ಇಂಥದ್ದೊಂದು ತಂತ್ರಾಂಶ ಕೃತಕ ಬುದ್ಧಿಮತ್ತೆಯ ಕೂಸು 'ಚಾಟ್ ಬಾಟ್'ಗಳು.

ಏನಿದು ಚಾಟ್‌ಬಾಟ್?

ಈ ಚಾಟ್‌ಬಾಟ್‌ಗಳು ನಾವು ಕೇಳಿದ ಪ್ರಶ್ನೆಗೆ ತಾನೇ ಅಂತರ್ಜಾಲವನ್ನೆಲ್ಲಾ ಜಾಲಾಡಿ ಸಾರಾಂಶ ರೂಪದಲ್ಲಿ ಉತ್ತರಿಸುತ್ತದೆ. ಈಚಿನ ವರ್ಷಗಳಲ್ಲಿ ಚಾಟ್‌ಬಾಟ್‌ಗಳು ಸಕ್ರಿಯವಾಗಿದ್ದರೂ, ಹೆಚ್ಚೇನೂ ಚಾಲ್ತಿಯಲ್ಲಿರಲಿಲ್ಲ. ಆದರೆ ಕಳೆದ ತಿಂಗಳ ಡಿಸೆಂಬರ್‌ನಲ್ಲಿ 'ಓಪನ್ ಎಐ' ಎಂಬ ಕಂಪೆನಿಯು 'ಚಾಟ್ ಜಿಪಿಟಿ' ಎಂಬ ಚಾಟ್‌ಬಾಟ್ ಅನ್ನು ಪ್ರಾಯೋಗಿಕವಾಗಿ ಸಾರ್ವಜನಿಕ ಬಳಕೆಗೆಂದು ಬಿಡುಗಡೆ ಮಾಡಿತು. ಈ ಹೊಸ ತಂತ್ರಜ್ಞಾನಗಳ ಹಾವಳಿ ನಾಲ್ಕು ದಿನದ್ದು, ಆಮೇಲೆ ತಾನೇತಾನಾಗಿ ತಣ್ಣಗಾಗುತ್ತೆ ಎಂದು ಅದರ ಬಗ್ಗೆ ಆಸಕ್ತಿಯನ್ನೂ ತೋರಿಸಿರಲಿಲ್ಲ ನಾನು. ಆದರೆ ಬಿಡುಗಡೆಯಾದ ಒಂದೇ ವಾರದಲ್ಲಿ ಒಂದು ಮಿಲಿಯನ್ ಸಕ್ರಿಯ ಬಳಕೆದಾರರನ್ನು ಕಂಡದ್ದು ನನ್ನನ್ನೂ ಸೆಳೆಯಿತು. ಹಿಂದಿನ ಚಾಟ್‌ಬಾಟ್‌ಗಳಂತೆ ಚಾಟ್ ಜಿಪಿಟಿ ಇರುವ ವಿಷಯವನ್ನೇ ಹೇಳುವ ಬದಲು, ತಾನೇ ಅಧ್ಯಯನ ಮಾಡಿ ಹೊಸದಾಗಿ ಬರೆಯುತ್ತದೆ. ಹಲವಾರು ಮಶೀನ್ ಲರ್ನಿಂಗ್ ಮಾಡೆಲ್‌ಗಳನ್ನು ಟ್ರೈನ್ ಮಾಡಿ, ಚಾಟ್ ಜಿಪಿಟಿಗೆ ಕಲಿಸಲಾಗುತ್ತಿದೆ. ಪ್ರತಿಕ್ಷಣ ಮೊಳಕೆಯೊಡೆಯುವ ಹೊಸ ಬಿಸಿ ಸುದ್ದಿಗಳು, ಹಳತಾಗಿ ಧೂಳಿಡಿದು ಆರ್ಕೈವ್‌ಗಳಲ್ಲಿರುವ ಸುದ್ದಿ ಸಮಾಚಾರಗಳನ್ನೂ ಹುಡುಕಿ ಹೆಕ್ಕಿ ತೆಗೆದು ಉತ್ತರಿಸಬಲ್ಲ ಸಾಮರ್ಥ್ಯ ಬರುವಷ್ಟು ಚೆನ್ನಾಗಿ ಇದಕ್ಕೆ ತಂತ್ರಾಶ ಬರೆಯಲಾಗಿದೆ.

ಕೋಡಿಂಗೂ ಬರೆಯುತ್ತೆ!

ಆದರೆ ಇದೂ ಸುಳ್ಳು ಹೇಳಬಹುದು, ಅಥವಾ ಪೂರ್ಣ ಸತ್ಯವನ್ನೂ ಹೇಳದಿರಬಹುದು. ಆದರೆ ಇದು ನನಗೆ ಇಷ್ಟವಾದದ್ದು ನನ್ನ ಕೊಂಡಿಂಗ್ ಅಸೈನ್‌ಮೆಂಟ್‌ಗಳನ್ನು, ನನ್ನ ಪ್ರಾಜೆಕ್ಟಿನ ಸರ್ಕ್ಯೂಟ್ ಡಿಸೈನುಗಳನ್ನೂ ಅದು 80% ಮಾಡಬಲ್ಲದು! ನನಗೊಂದು ಸುಂದರ ರೊಮ್ಯಾಂಟಿಕ್ ಪದ್ಯ ಬರೆದುಕೊಡು ಅಂದರೆ ಕವಿಯಾಗಬಲ್ಲದು. ತಮ್ಮನೋ ತಂಗಿಯೋ ಬಂದು ಈ ಗಣಿತದ ಸೂತ್ರ ಬಿಡಿಸಿಕೊಡು ಅಂದರೆ ಚಾಟ್‌ಜಿಪಿಟಿನೇ ನನ್ನನ್ನುಳಿಸಬಲ್ಲ ದೇವರೀಗ!



ಹೀಗಾಯಿತು. ಹೊಸದೊಂದು ಚಿಕ್ಕ ಪ್ರಾಜೆಕ್ಟಿನ ಪ್ರಾಬ್ಲೆಮ್ ಸ್ಟೇಟ್‌ಮೆಂಟ್ ಕೊಟ್ಟು ಇದಕ್ಕೆ ಪರಿಹಾರ ಹುಡುಕಿ ಅಂತಂದ್ರು. ಮೊಸರು ಗಡಿಗಿಯಂತಹ ತಲೆಗಳು ನಮ್ಮವು. ಮಂದಗತಿಯಲ್ಲಿ ಯೋಚಿಸಿ ಉತ್ತರ ಕಂಡುಹಿಡಿಯೂ ಹೊತ್ತಿಗೆ ಆ ಪ್ರಾಜೆಕ್ಟೇ ಸತ್ತು ಹೋಗಬಹುದು. ಚಾಟ್‌ಜಿಪಿಟಿಯ ಬಗ್ಗೆ ತಿಳಿದಿದ್ದ ನಾನು ಅದೇ ಪ್ರಾಬ್ಲೆಮ್ ಸ್ಟೇಟ್‌ಮೆಂಟ್‌ನ್ನು ಸಂಕ್ಷಿಪ್ತವಾಗಿ ಬರೆದು ಅದಕ್ಕೆ ಕೇಳಿದೆ. ನಾವು ಯೋಚಿಸಿದರೆ ಒಮ್ಮೆಗೆ ಹೆಚ್ಚೆಂದರೆ ಒಂದೆರಡು ಆಯಾಮದಿಂದ ಯೋಚಿಸಬಹುದು. ಆದರೆ ಅದು ಹಲವಾರು ಆಯಾಮದಿಂದ ಯೋಚಿಸಿ, ಹೀಗಾದರೆ ಹೀಗೆ ಎಂದು ವಿಸ್ತೃತವಾಗಿ ಬರೆಯಿತು. ಇನ್ನು ನಮ್ಮಷ್ಟಕ್ಕೆ ನಾವೇ ಓದಿಕೊಳ್ಳಬೇಕಾದ ಕಾಲೇಜುಗಳಲ್ಲಿ ಇದು ಸಹಾಯವಾಗಬಲ್ಲದು.

ಒಂದು ವೆಬ್‌ಪೇಜಿಗೆ ಬೇಕಾದ ಬೇಸಿಕ್ ಕಂಟೆಂಟನ್ನೂ ತಾನು ಬರೆಯಬಲ್ಲದು. ಇಷ್ಟೇ ಅಲ್ಲ, ಓಪನ್ ಎಐ ಫೌಂಡೇಷನ್‌ನ ಇನ್ನೊಂದು ಪ್ರಾಡಕ್ಟ್ ಇದೆ. ಡಾಲ್-ಇ ಅಂತ. ಅದು ನೀವು ಕೊಟ್ಟ ಇನ್‌ಪುಟ್‌ಗೆ ತಕ್ಕನಾಗಿ ಚಿತ್ರ ತಯಾರಿಸುತ್ತದೆ!

2013ರಲ್ಲಿ 'ಹರ್' ಎಂಬ ಸಿನೆಮಾವೊಂದು ಬಂದಿತ್ತು. ಅದರಲ್ಲಿ ಒಂದು ಆಪರೇಟಿಂಗ್ ಸಿಸ್ಟಮ್, ಟಿಸಂಮಂತಟಿ. ಅದರ ಕೆಲಸವೇನು? ಮನುಷ್ಯನೊಂದಿಗೆ ಮಾತನಾಡೋದು, ಅವನ ಸಮಸ್ಯೆಗೆ ಪರಿಹಾರ ಹುಡುಕೋದು, ಅವನು ಹೇಳಿದ ಕೆಲಸ ಮಾಡೋದು. ಆದರೆ ಇಲ್ಲಿ ಮುಖ್ಯ ಪಾತ್ರಧಾರಿ ಈ ಎಐ ಓಸ್‌ನ ತೀರಾ ಅಂದರೆ ತೀರಾ ಗರ್ಲ್‌ಫ್ರೆಂಡ್‌ಗಿಂತಲೂ ಹೆಚ್ಚಿಗೆ ಹಚ್ಚಿಕೊಳ್ತಾನೆ. ಆದರೆ ಎಷ್ಟಾದರೂ ಅದು 0 ಮತ್ತು 1 ರಲ್ಲಿ ಮಾತನಾಡುವ ಮಶೀನು, ಈತ ಮನುಷ್ಯ. ಈ ಚಿತ್ರ ಮಾನವ ಕೃತಕ ಬುದ್ಧಿಮತ್ತೆಗೆ, ಆಟೋಮೇಟೆಡ್ ಮಶೀನುಗಳಿಗೆ ಎಷ್ಟು ಅವಲಂಬಿತನಾಗಬಲ್ಲ ಎಂಬುದನ್ನ ತೋರಿಸಿತ್ತು. ಅದೆಷ್ಟೇ ಆದರೂ ನಾವು ತಂತ್ರಜ್ಞಾನವನ್ನ ಭಾವನಾತ್ಮಕವಾಗಿ ಹಚ್ಚಿಕೊಳ್ಳಬಾರದು. ಅವುಗಳ ಮೇಲೆ ಅವಲಂಬಿತರಾಗಬಾರದು.

ಅರೆಮರುಳ ಮನುಷ್ಯರು ನಾವು. ತಂತ್ರಜ್ಞಾನದ ನಿತ್ಯಲೀಲೆಗೆ ಸಿಲುಕಿದ್ದೇವೆ. ಚಾಟ್‌ಬಾಟ್‌ಗಳು ನಮ್ಮ ಸಮಸ್ಯೆಯನ್ನು ಪರಿಹರಿಸಲಿಕ್ಕಾದರೆ ಒಳ್ಳೆಯದು. ಆದರೆ ಮಾನವನ ಕೆಲಸವನ್ನೂ ಕಿತ್ತುಕೊಳ್ಳುವವಾದರೆ ಕಷ್ಟ ಎಲ್ಲದರ ಬಳಕೆಗೂ ಒಂದು ಆವಾರವಿರಲಿ.

(ಲೇಖಕರು ಎಂಸಿಎ ವಿದ್ಯಾರ್ಥಿ ಮತ್ತು ಹವ್ಯಾಸಿ ಬರಹಗಾರರು)

ಚಳಿ ಚಳಿ ತಾಳೆನು ಈ ಚಳಿಯಾ!

ಇಬ್ಬನಿ ಕರಗುವಾಗ ಮಳೆಯೇ ಬರುತ್ತಿದೆಯೇನೋ ಎನ್ನುವಂತೆ ಪರಿಸರ ತನ್ನನ್ನು ಮಂಜಿನ ಹನಿಯಿಂದ ಬಿಡಿಸಿಕೊಳ್ಳುತ್ತದೆ. ಆ ಸಮಯದಲ್ಲಿ ಹೊರನಿಂತು ಪ್ರಕೃತಿಯ ಆಗು-ಹೋಗುಗಳನ್ನು ಕಾಣುವುದು ನಿಜಕ್ಕೂ ಮಜವಾದ ಸಂಗತಿ.

ಪ್ರಬಂಧ





ಕತ್ತಲು ಕಳೆದು ಆದಾಗಲೇ ಸೂರ್ಯ ತನ್ನ ಮೂಡಣ ಮನೆಯ ಬಾಗಿಲ ತೆಗೆದು ಹೊರಬಂದಾಗಿದೆ. ಆದರೆ ಆ ಪ್ರದೇಶದಲ್ಲಿ ಸೂರ್ಯನ ಕಿರಣವೇ ಮಾಯ ಎನ್ನುವಂತಿದೆ! ಸಹಜ ಪ್ರಶ್ನೆಯೇ ಇರಬಹುದು, ಅದ್ಯಾವುದೆಂದು? ಮಲೆನಾಡು ಪ್ರದೇಶಗಳಲ್ಲಿ, ಅದರಲ್ಲೂ ಚಳಿಗಾಲದಲ್ಲಿ ಸೂರ್ಯರಶ್ಮಿ ಭುವಿಯನ್ನು ಸ್ಪರ್ಶಿಸುವುದೇ ಎಷ್ಟೋ ಸಮಯವಾದ ನಂತರ.

ಪ್ರಕೃತಿ ಎಂದರೆ ಮೊದಲು ನೆನಪಾಗುವುದೇ ಮಲೆನಾಡು ಅಲ್ಲವೇ!? ಕಣ್ಣು ಹಾಯಿಸಲಾಗುವಷ್ಟು, ಅದಕ್ಕೂ ಮೀರಿಯೂ ಅಲ್ಲಿ ತುಂಬಿರುವುದೇ ಹಸಿರು. ಅಂತಹ ಮಲೆನಾಡಿನಲ್ಲಿ ಚಳಿಗಾಲದಲ್ಲಿ, ಚಳಿ ಒಂದು ಮಟ್ಟಿಗೆ ಜಾಸ್ತಿ ಎಂದೇ ಹೇಳಬಹುದು. ಅಲ್ಲಿಯ ಚಳಿಗಾಲದ ಬೆಳ್ಳಂಬೆಳಗಿನ ವಾತಾವರಣವೇ ಅದೆಷ್ಟು ಚಂದವೆಂದರೆ, ಇಬ್ಬನಿಯ ಸರ್ವಾಧಿಪತ್ಯದಲ್ಲಿ ಗೋಚರವಾಗುವುದು ಏನೂ ಇಲ್ಲ! ಹೌದು. ಮಂಜಿನ ಮಧ್ಯದಲ್ಲಿ ತಣ್ಣನೆಯ ಅನುಭವವೇ ಚಂದ! ದೇಹವೇ ಮರಗಟ್ಟುವಂತಹ ಆ ಚಳಿಯಲ್ಲಿ, ವಾತಾವರಣದ ಸುಂದರ ಅನುಭೂತಿ ಅತ್ಯದ್ಭುತವಾದದ್ದು. ಬೆಳಿಗ್ಗೆ ಬೇಗ ಏಳುವುದಂತೂ ದೂರದ ಮಾತು. ಒಂದು ಪಕ್ಷ ಎದ್ದೆವೂ ಅಂತಾದರೆ ಚಳಿಯಲ್ಲಿ ನಡುಗುತ್ತಾ ಕೂರುವುದಕ್ಕೇನು ಅಡ್ಡಿಯಿಲ್ಲ. ಇಬ್ಬನಿ ಕರಗುವಾಗ ಮಳೆಯೇ ಬರುತ್ತಿದೆಯೇನೋ ಎನ್ನುವಂತೆ ಪರಿಸರ ತನ್ನನ್ನು ಮಂಜಿನ ಹನಿಯಿಂದ ಬಿಡಿಸಿಕೊಳ್ಳುತ್ತದೆ. ಆ ಸಮಯದಲ್ಲಿ ಹೊರನಿಂತು ಪ್ರಕೃತಿಯ ಆಗು-ಹೋಗುಗಳನ್ನು ಕಾಣುವುದು ನಿಜಕ್ಕೂ ಮಜವಾದ ಸಂಗತಿ.

ಬಾಲ್ಯದಲ್ಲಿ ಚಳಿಗಾಲವೆಂದರೆ ಖುಷಿ! ಅಪ್ಪನೋ, ಅಮ್ಮನೋ ಬೇಗ ಎಬ್ಬಿಸುವುದಕ್ಕಂತೂ ಆ ಸಮಯದಲ್ಲಿ ಬರುತ್ತಿರಲಿಲ್ಲ ಕಾರಣ, ಚಳಿ! "ದೊಡ್ಡವರಿಗೇ ಈ ಚಳಿಯಲ್ಲಿ ಏಳುವುದು ಕಷ್ಟ ಇನ್ನು ಮಕ್ಕಳು ಎದ್ದಾರೆಯೇ?!" ಎಂಬ ಅವರವರ ಮಾತು ಎಷ್ಟಾದರೂ ಸತ್ಯವೆ. ಶಾಲೆಗೆ ಹೋಗುವಾಗಲೂ ಸ್ವೆಟ್ಟರ್ ಧರಿಸಿ ಓಡುವುದು ರೂಢಿಯಾಗಿತ್ತಲ್ಲದೇ ಅಮ್ಮನ ಒತ್ತಾಯದ ಮೇರೆಗೆ, ಒತ್ತಾಯ ಎನ್ನುವುದಕ್ಕಿಂತಲೂ ಮಿಗಿಲಾಗಿ ಬೈಯ್ಯಿಸಿಕೊಳ್ಳುವುದೊಂದು ಪದ್ಧತಿಯಾಗಿ, ಕಿವಿಗೆ ಹತ್ತಿಯನ್ನೂ ತಲೆ ಇಬ್ಬನಿಯಿಂದ ವದ್ದೆಯಾಗಬಾರದು ಎಂಬ ಹಿತದೃಷ್ಟಿಯಿಂದ ಕರ್ಚಿಪ್ಪನ್ನೋ ಅಥವಾ ಮಫ್ಲರ್ ಅನ್ನೋ ಕಟ್ಟಿ ಕಳುಹಿಸುವುದು ಅಭ್ಯಾಸವಾಗಿ ಹೋಗಿತ್ತು. ಕೊರೆಯುವ ಚಳಿಯಲ್ಲಿ ಕೈ ಮರಗಟ್ಟಿ ಅದನ್ನು ಮಿತ್ರರೊಂದಿಗೆ ಏನೋ ವಿಶೇಷವೆಂಬಂತೆ ಹಂಚಿಕೊಂಡದ್ದು ಸಹ ಇದೆ! ತಣ್ಣಗಿರುವ ಕೈಯನ್ನು ಗೆಳೆಯರ ಕೆನ್ನೆಗೆ ಬೇಕೆಂದೇ ಇಡುವಾಗ, ಅವರ ವಿರೋಧವೂ ಸಹ ಕಣ್ಣಿಗೆ ಕಟ್ಟಿದಂತಿದೆ!

ಮಲೆನಾಡಿನ ಭಾಗದಲ್ಲಿರುವವರಿಗೆ ಚಳಿಗಾಲದ ಇಂತಹ ಅನುಭವಗಳು ಸದಾ ನೆನಪಿನಲ್ಲಿರುವಂತದ್ದು ಎಂದರೆ ಸರಿಯಾದೀತು. ಈಗಲೂ ಸಹ ಚಳಿಯಿಂದ ರಕ್ಷಿಸಿಕೊಳ್ಳಲು ಹಾಕಿದ ಸ್ವೆಟ್ಟರ್ ಅನ್ನು ತೆಗೆಯುವುದು ಮಧ್ಯಾಹ್ನದ ಸಮಯದಲ್ಲೆ! ಮಳೆಗಾಲದಲ್ಲೂ ಚಳಿಯ ಅನುಭವವಾಗುತ್ತದಾದರೂ, ಚಳಿಗಾಲದ ಚಳಿಯಷ್ಟು ಪ್ರಖರತೆ ಅದಕ್ಕಿರುವುದಿಲ್ಲ. ಮನೆಯಲ್ಲಿ ಮಕ್ಕಳನ್ನು ದೇವರ ಪೂಜೆಗೆಂದು, ಬೆಳಿಗ್ಗೆ ಹೂವು ಕೊಯ್ಯಲಟ್ಟುವುದು ಸಾಮಾನ್ಯದ ಸಂಗತಿ. ಅಂತಹ ಚಳಿಗಾಲದಲ್ಲಿ ಹೂವುಗಳೂ ಕೂಡಾ "ಇಂದು ಸ್ವಲ್ಪ ತಡವಾಗಿ ಅರಳೋಣ" ಎಂದು ನಿರ್ಧರಿಸಿದಂತೆ, ಗಿಡಗಳೆಲ್ಲಾ ಖಾಲಿ ಖಾಲಿ! ಆಗೊಂತರ ಖುಷಿ. ಏಕೆಂದರೆ ಉಳಿದ ದಿನಗಳಲ್ಲಿ ಅದೆಷ್ಟು ಹೂವು ಕೊಯ್ಯಬೇಕಿತ್ತು ಆದರೆ ಚಳಿ ಎಂಬ ಕಾರಣಕ್ಕೆ ಆ ಕೆಲಸ ಸುಗಮ. ಮೂರು ಮತ್ತೊಂದು ಹೂ ಕೊಯ್ದು "ಹೂವಿಲ್ಲ ಗಿಡದಲ್ಲಿ" ಎಂದರೆ ಅಂದಿನ ಆ ಕಾರ್ಯ ಚಳಿಗೆ ಧನ್ಯವಾದ ಸಮರ್ಪಿಸುವುದರೊಂದಿಗೆ ಸಮಾಪ್ತಿ.



ಸ್ನೇಹಾ ಡಿ.ಎಸ್

ಮಳೆಗಾಲ ಹಾಗೂ ಚಳಿಗಾಲದ ಸಮಯದಲ್ಲಿ, ಅದರಲ್ಲೂ ಮಲೆನಾಡಿನ ಪ್ರದೇಶಗಳಲ್ಲಿ ಕಾಣಸಿಗುತ್ತಿದ್ದದ್ದು ಕಂಬಳಿ. ಬಿಳಿ ಕಂಬಳಿ, ಕಪ್ಪು ಕಂಬಳಿ, ಪಟ್ಟೆ ಕಂಬಳಿ ಎಂಬ ತರಹೇವಾರಿ ವಿಧಗಳನ್ನು ಆಗಿನ ದಿನಗಳಲ್ಲಿ ಕಾಣಬಹುದಿತ್ತು. ನಿಜಕ್ಕೂ ಕಂಬಳಿಯಷ್ಟು ಬೆಚ್ಚನೆಯ ಅನುಭವ ನೀಡುವುದು ಬೇರೊಂದಿರಲಿಲ್ಲ! ಆರೋಗ್ಯದ ದೃಷ್ಟಿಯಿಂದಲೂ ಅದು ಪ್ರಚಲಿತದಲ್ಲಿತ್ತು. ದೊಡ್ಡವರು ಮಕ್ಕಳನ್ನು ಬೇಗ ಕಂಬಳಿ ಹೊದೆಸಿ ಮಲಗಿಸಿ, ಅವರಿಗೆ ನಿದ್ದೆ ಬಂದ ನಂತರ ತಾವು ಹೊದ್ದು ಮಲಗಿ ಬಿಡುತ್ತಿದ್ದರಂತೆ, ಮಕ್ಕಳಿಗೆ "ನಿನಗೆ ಕಪ್ಪು ಕಂಬಳಿ ಹೊದೆಸುತ್ತೇನೆ" ಎಂಬ ಹಾರಿಕೆಯ ಉತ್ತರವೂ ಅಲ್ಲಿ ಲಭ್ಯ! ಕಪ್ಪು ಕಂಬಳಿ ಎಂದರೆ ಕತ್ತಲೆಯೇ ಕಂಬಳಿಯಂತೆ. ಆದರೆ ಈಗೀಗ ಆ ಕಂಬಳಿಗಳನ್ನು ಕಾಣುವುದು ಅಲ್ಲೋ ಇಲ್ಲೋ ಎಂಬಂತಾಗಿದೆ. ಬದಲಿಗೆ ಉರಿ ಬೆಚ್ಚನೆ ಅನ್ನಿಸುವ ಬ್ಲಾಂಕೇಟ್‌ಗಳು ಮೇಲೆದ್ದು ಬರುತ್ತಿವೆ. ಕಂಬಳಿಯ ಆ ಬೆಚ್ಚಗಿನ ಅನುಭವ ಅನುಭವಿಸಿದವರಿಗಷ್ಟೇ ಗೊತ್ತಿರಲು ಸಾಧ್ಯ!

ಬೇರೆ ಕಡೆಯವರಿಗೆ ಮಲೆನಾಡಿನ ಚಳಿ ಮೈ ನಡುಗಿಸುತ್ತದೆ. ಎಷ್ಟೋ ಮಂದಿ "ಎಂಥಾ ಚಳಿ ಇಲ್ಲಿ" ಎಂದು ನಡುಗುತ್ತಾ ಹೇಳಿದ್ದೂ ಇದೆ. ಅಂಥಹಾ ಚಳಿಯಲ್ಲಿ ಒಂದು ಕಪ್ ಕಾಫಿಯೋ, ಕಷಾಯವೋ ಕೊಡುವ ಬೆಚ್ಚನೆಯ ಅನುಭೂತಿ ಸ್ವರ್ಗವೇ ಕೈಗೆ ಸಿಕ್ಕಿದಂತೆ! ಮಲೆನಾಡು ಪ್ರವಾಸಿ ತಾಣಗಳಿಗೆ ಹೆಸರುವಾಸಿಯೂ ಹೌದು. ಒಂದು ಪಕ್ಷ ಚಳಿಗಾಲದ ಸಮಯದಲ್ಲಿ ಪ್ರವಾಸ ಬಂದರೆಂದಾದರೆ, ಫೈರ್ ಕ್ಯಾಂಪ್ ಮಾಡದೆ ಪ್ರವಾಸಿಗರು ಅಲ್ಲಿಂದ ತೆರಳುವುದೇ ಇಲ್ಲ. ಮತ್ತೊಂದು ವಿಶೇಷ ಮಲೆನಾಡಿನ ಭಾಗಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ನಲ್ಲಿನೀರಾಗಲಿ ಅಥವಾ ಟ್ಯಾಂಕಿನ

ಬಾಲ್ಯದಲ್ಲಿ ಚಳಿಗಾಲವೆಂದರೆ ಖುಷಿ ! ಅಪ್ಪನೋ, ಅಮ್ಮನೋ ಬೇಗ ಎಬ್ಬಿಸುವುದಕ್ಕಂತೂ ಆ ಸಮಯದಲ್ಲಿ ಬರುತ್ತಿರಲಿಲ್ಲ ಕಾರಣ, ಚಳಿ ! ದೊಡ್ಡವರಿಗೇ ಈ ಚಳಿಯಲ್ಲಿ ಏಳುವುದು ಕಷ್ಟ ಇನ್ನು ಮಕ್ಕಳು ಎದ್ದಾರೆಯೇ?! ಎಂಬ ಅವರವರ ಮಾತು ಎಷ್ಟಾದರೂ ಸತ್ಯವೆ.

ನೀರಾಗಲಿ ಅಲ್ಲಿ ಬಳಕೆಯಲ್ಲಿಲ್ಲ, ನೈಸರ್ಗಿಕವಾಗಿ ಭೂಮಿಯಲ್ಲೇ ಉದ್ಭವಿಸುವ (ಅಬ್ಬಿ ನೀರು) ನೀರನ್ನು ಬಳಸುತ್ತಾರೆ. ಆ ನೀರು ಸಾಮಾನ್ಯವಾಗಿ ತಣ್ಣಗೆ ಇರುತ್ತದೆ. ಚಳಿಗಾಲದ ಅವಧಿಯಲ್ಲಿ ಆ ನೀರು ಇನ್ನೂ ತಣ್ಣಗಾಗಿರುತ್ತದೆ. ಅದೇ ನೀರನ್ನು ಹಂಡೆಯಲ್ಲಿ ಶೇಖರಿಸಿ, ಕಟ್ಟಿಗೆಯ ಬೆಂಕಿ ಕೊಟ್ಟರೆ, ಆ ಬೆಚ್ಚನೆಯ ನೀರು ಸರ್ವಸ್ವವೆನಿಸಿ ಬಿಡುತ್ತದೆ! ಹಲವರು ಒಂದು ದೊಡ್ಡ ಹಂಡೆಯ ನೀರನ್ನೇ, ಚಳಿಯ ತೆಕ್ಕೆಯಿಂದ ತಪ್ಪಿಸಿಕೊಳ್ಳಲೋಸುಗವಾಗಿ ಖಾಲಿ ಮಾಡಿಬಿಡುತ್ತಾರೆ. ಹಂಡೆಯ ಅಡಿ ಹಾಕಿದ ಬೆಂಕಿಯಿಂದ ಚಳಿ ಕಾಯಿಸುವುದು ಮಲೆನಾಡಿನ ಹಳ್ಳೀಮನೆಗಳಲ್ಲಿ ಪ್ರತಿನಿತ್ಯ ಕಾಣುವ ದೃಶ್ಯ. ಮಲೆನಾಡಿನ ಜೀವನಾಡಿಯೆಂದೇ ಅಡಿಕೆ ತೋಟಗಳನ್ನು ಹೇಳಲಾಗುತ್ತದೆ. ಸಾಮಾನ್ಯವಾಗಿ ಕೊನೆಕೊಯ್ಲು ಚಳಿಗಾಲದಲ್ಲೇ ಆಗುವುದರಿಂದ, ತಡರಾತ್ರಿಯವರೆಗೆ ಊರಿನ ಜನರು ಜಗತ್ತಿನ ಸುದ್ದಿಗಳನ್ನು ಹರಟೆ ಹೊಡೆಯುತ್ತಾ, ಅಡಿಕೆ ಸುಲಿಯುವುದು ಚಳಿಗಾಲದ ಪ್ರಮುಖ ಆಕರ್ಷಣೆಯಾಗಿರುತ್ತದೆ.

ಚಳಿ ಎಷ್ಟು ಚಂದವೋ ಅಷ್ಟೇ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಈ ಮೊದಲೇ ತಿಳಿಸಿದಂತೆ ಮಲೆನಾಡಿನ ಚಳಿ ಕೆಲವೊಮ್ಮೆ ವಿಪರೀತವಾದರೆ ಅದನ್ನು ಸಹಿಸುವುದು ಕಷ್ಟ! ವಯಸ್ಸಾದವರಿಗೆ ಆ ಸಮಯದಲ್ಲಿ, ದೇಹದಲ್ಲಿರಕ್ತ ಹೆಪ್ಪುಗಟ್ಟುತ್ತದೆ. ಇದು ಜೀವವನ್ನು ಕಸಿಯುವ ಕಾರಣವೂ ಆಗಬಹುದು! ಹೃದಯಸ್ತಂಭನದಂತಹ ಘಟನೆಗಳೂ ಚಳಿಗಾಲದ ಸಮಯದಲ್ಲಿ ಜಾಸ್ತಿಯೆಂದೇ ಹೇಳಬಹುದು. ಬೇಸಿಗೆಯಲ್ಲಿ ಸೆಕೆಯೆಂದು ಬೊಬ್ಬಿಡುವವರು, ಚಳಿಗಾಲದ ಸಮಯದಲ್ಲಿ ಬೇಸಿಗೆಯೇ ಆಗಬಹುದಿತ್ತೇನೋ? ಎಂದು ಪಿಸುಗುಡುವುದುಂಟು. ಇದೆಲ್ಲವನ್ನೂ ಮೀರಿ ಬಹುಶಃ



ಮಲೆನಾಡಿನ ಚಳಿಯ ಅನುಭವ ಬೇರೆಲ್ಲೂ ಆಗುವುದಿಲ್ಲ. ಹಲವರಿಗೆ ಬೆಳಿಗ್ಗೆ ವಾಕಿಂಗ್ ಎಂಬ ಅಭ್ಯಾಸವಿರುತ್ತದೆ. ಆದರೆ ಚಳಿಗಾಲದ ಆ ಬೆಳಗಿನಲ್ಲಿ ನೆಲದ ಮೇಲೆ ಕಾಲೂರುವುದೇ ಕಷ್ಟವೆನ್ನುವ ಮಂದಿ, ಚಳಿಗಾಲ ಮುಗಿಯುವವರೆಗೆ ತಮ್ಮ ವಾಕಿಂಗ್ ಅಭ್ಯಾಸವನ್ನು ಬದಿಗಿಡುತ್ತಾರೆ. ಬರೀ ವಾಕಿಂಗ್ ಎಂದಲ್ಲದೇ ಪ್ರತಿನಿತ್ಯದ ಚಟುವಟಿಕೆಗಳು ತಡವಾಗುತ್ತಲೇ ಹೋಗುತ್ತದೆ. ಚಳಿಗಾಲವೆಂದರೆ ಹೀಗೆಯೇ! ಒಂದು ಬಗೆಯ ಆಲಸಿತನ, ಬಿಸಿ ಬಿಸಿ ಪದಾರ್ಥಗಳೇ ಬೇಕು ಎನ್ನುವುದು ಹೆಚ್ಚು. ಹಾಸಿಗೆ ಬಿಟ್ಟು ಮೇಲೆಳುವುದೇ ಬೇಡ ಎನ್ನುವ ಮನದ ತುಡಿತ ಒಂದು ಕಡೆ. ಬೇಸಿಗೆಯಲ್ಲಿ ಬಹುಬೇಗನೆ ಹಾಳಾಗುವ ಆಹಾರ ಪದಾರ್ಥಗಳು, ಚಳಿಗಾಲದಲ್ಲಿ ಹಾಗಾಗುವುದಿಲ್ಲ. ರಾತ್ರಿ ಹೆಪ್ಪು ಹಾಕಿಟ್ಟ ಹಾಲು, ಬೆಳಿಗ್ಗೆಯೂ ಯಾವುದೇ ಬದಲಾವಣೆಯಾಗದೆ ಹಾಗೆಯೇ ಇದ್ದೀತು ! ಇದೆಲ್ಲವೂ ಭಾಸ್ಕರನ ಕಿರಣ ಪ್ರಪಂಚವನ್ನು ತಲುಪುವವರೆಗೆ. ನಂತರ ಯಥಾ ಸ್ಥಿತಿಯಾದರೂ, ಮತ್ತೆ ಸಂಜೆಯಾದಾಗ ಮಲೆನಾಡಿನಲ್ಲಿ ಅದೇ ಚುಮು ಚುಮು ಚಳಿ ಮತ್ತೆ ತನ್ನ ಇರುವಿಕೆನ್ನೂ ಪ್ರಚುರಪಡಿಸುತ್ತದೆ. ಮತ್ತೆ ಚಳಿಯಲ್ಲಿ ಒಳಗೆ ಹೊದ್ದು ಕೂರುವುದೇ ಲೇಸು ಎನಿಸುತ್ತದೆ. ಚಳಿಯ ಪ್ರತಾಪ ಸಹಿಸಲು ಮತ್ತೆ ಸಜ್ಜಾಗುವ ಸಮಯ ಬಂದೇ ಬಿಡುತ್ತದೆ. ಇದೇ ಮಲೆನಾಡಿನ ಚಳಿಗಾಲ!

(ಅಂತಿಮ ವರ್ಷದ ಬಿಸಿಎ ವಿದ್ಯಾರ್ಥಿನಿ, ಎಸ್ ಡಿ ಎಂ ಕಾಲೇಜು ಉಜಿರೆ)

ಬಾಲ್ಯ ಮತ್ತು ನಮ್ಮೂರೆಂಬ ಬಿಸಿಲೂರು

ಬಾಲ್ಯ ಎಂದ ತಕ್ಷಣ ಕಣ್ಮುಂದೆ ಬರುವುದೇ ನಮ್ಮೂರು. ನಮ್ಮೂರು ಎಂದ ತಕ್ಷಣವೇ ಕಣ್ಮುಂದೆ ಬರುವುದು ಬಾಲ್ಯ. ನನ್ನ ಪಾಲಿಗೆ ಇವೆರಡಕ್ಕೂ ಬಾರಿ ನಂಟಿದೆ. ಎಷ್ಟೆಂದರೆ ಒಂದನ್ನು ಬಿಟ್ಟರೆ ಇನ್ನೊಂದು ಅಪೂರ್ಣ ಎನ್ನುವಷ್ಟು. ಏಕೆಂದರೆ ನಾನು ಹೆಚ್ಚು ಸಮಯ ನಮ್ಮೂರಿನಲ್ಲಿ ಕಳೆದಿದ್ದು ಬಾಲ್ಯದಲ್ಲೇ. ನಂತರ ಏನಿದ್ದರೂ ವರ್ಷಕ್ಕೊಮ್ಮೆ ಬರುವ ಬೇಸಿಗೆ ರಜ, ದಸರ ರಜಾದಲ್ಲಿ ಅಷ್ಟೇ ಊರಿನ ದರ್ಶನ ಭಾಗ್ಯ.

ಇನ್ನೂ ನಮ್ಮೂರ ವಿಷ್ಯಕ್ಕೆ ಬಂದರೆ, ಪಕ್ಕಾ ಬಯಲುಸೀಮೆಯ ಪುಟ್ಟದು ಎಂದರೆ ತುಂಬಾ ಪುಟ್ಟದು ಅಲ್ಲದ, ದೊಡ್ಡದು ಎನ್ನಲು ಮನಸೂ ಆಗದ ಊರು. ನೂರರ ಮೇಲೆ ಮತ್ತೊಂದಿಷ್ಟು ಮನೆಗಳು, ಅದರಲ್ಲಿ ಅರ್ಧ ಮನೆಗಳ ಬಾಗಿಲಿಗೆ ವರ್ಷದ ಮುನ್ನೂರು ದಿನಗಳಂತೂ ಪಕ್ಕಾ ಬೀಗ ಬಿದ್ದಿರುತ್ತದೆ. ಇನ್ನೂ ಅತ್ತ ಆಂಧ್ರದ ಗಡಿ ಇತ್ತ ಬಳ್ಳಾರಿ ಗಡಿ. ವಾತಾವರಣದ ಬಗ್ಗೆ ಹೆಚ್ಚಿನ ವಿವರಣೆ ಬೇಕಿಲ್ಲ ಅಲ್ಲವೇ. ಊರಿನ ಪಕ್ಕದಲ್ಲಿರುವ ನದಿ ಎನ್ನಲಾಗದೆ ಹಳ್ಳ ಎಂದು ಕರೆಯುವ ಅದರಲ್ಲಿ ನೀರು ಹರಿದೇ ಎಷ್ಟೋ ದಶಕಗಳು ಕಳೆದು ಬಿಟ್ಟಿವೆ. ಇಂತಹ ಸ್ಥಳದಲ್ಲಿಯೇ ಬಾಲ್ಯವೆಂಬ ಅದ್ಭುತವನ್ನು ನಾನು ಕಳೆದಿದ್ದು. ಚಿತ್ರದುರ್ಗ ಜಿಲ್ಲೆಗೆ ಸೇರಿದ ಬಳ್ಳಾರಿಯ ಬಗಲಲ್ಲಿ ಇರುವ ಈ ಪುಟ್ಟ ಊರಿನಲ್ಲೇ.

ಬಾಲ್ಯದ ದಿನಗಳಿಗೆ ತಕ್ಕಂತೆ ವಿಶಾಲವಾದ ಮನೆ, ಆ ಮನೆಯ ಜಾಗವೂ ಸಾಲದಷ್ಟು ಜನ. ಅಜ್ಜ ಅಜ್ಜಿ ಅಪ್ಪ ಅಮ್ಮ ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ ಚಿಕ್ಕಮ್ಮ ಅಣ್ಣ ಅಕ್ಕ, ತಮ್ಮ , ತಂಗಿ ಇನ್ನೂ ಏನೇನೆಲ್ಲಾ ಸಂಬಂಧಗಳು ಇವೆಯೋ ಎಲ್ಲವೂ ಒಂದೇ ಸೂರಿನಡಿಯಲ್ಲಿ ಬದುಕಿನ ಬಂಡಿ ಎಳೆಯುತ್ತಿದ್ದೆವು.

ಮನೆಯ ಅಷ್ಟೂ ಹಿರಿಯರಿಗೆ ಸದಾ ಕೆಲಸ ಕೊಡುವಷ್ಟು ಮಕ್ಕಳಿದ್ದ ನಮ್ಮ ಮನೆಯಲ್ಲಿ, ನಮ್ಮ ಅಣ್ಣ– ಅಕ್ಕಂದಿರೇ ನಮಗೆ ಅಪ್ಪ ಅಮ್ಮನಂತೆ. ಏನಾದರೂ ತುಂಟಾಟ ಮಾಡಿ, ಜಗಳ ಮಾಡಿಕೊಂಡರೆ ಮೊದಲು ದೂರು ಮುಟ್ಟುತ್ತಿದ್ದದ್ದು ಅಕ್ಕನ ಬಳಿಯೇ. ಅಜ್ಜನ ಬಳಿ ದೂರು ಹೊದರೆ ಇಬ್ಬರಿಗೂ ಬಾರುಕೋಲಿನ ಏಟಿನ ರುಚಿ ಖಾಯಂ! ಇನ್ನು ಅಜ್ಜಿಯ ಬಳಿ ಹೋದರಂತೂ ಪಕ್ಕದ ಮೂರು ಮನೆಯವರು ಹಾಜರಾಗುವಂತೆ ತಮ್ಮ ಬಾಯಿ ಚಳಕ ತೋರಿಸಿ ಬಿಡುತ್ತಿದ್ದರು. ಇನ್ನು ಅಪ್ಪ, ದೊಡ್ಡಪ್ಪರ ಬಳಿ ಹೋದರೆ ಅವರು ನಮಗೆ ಬಯ್ಯುವ ಬದಲಿಗೆ ಅಣ್ಣ ಅಕ್ಕರಿಗೆ ಬೆವರಿಳಿಸುತ್ತಿದ್ದರಿಂದ ನಮ್ಮ ತುಂಟಾಟಗಳನ್ನು, ನಮ್ಮನ್ನು ನಿಭಾಯಿಸುವ ಹೊಣೆಯೂ ಅಕ್ಕ ಮತ್ತು ಅಣ್ಣನ ಹೆಗಲಿನ ಮೇಲೆ ಇರುತ್ತಿತ್ತು. ಬೆಳಗ್ಗೆ ನಮ್ಮನ್ನು ಎಬ್ಬಿಸಿ, ಸ್ನಾನ – ತಿಂಡಿಯ ಶಾಸ್ತ್ರ ಮುಗಿಸಿ, ಅವರ ಜೊತೆಯಲ್ಲೇ ಬಸ್ಸಿನಲ್ಲಿ ಪಕ್ಕದ ಊರಿನ ಶಾಲೆಗೆ ಕರೆದುಕೊಂಡು ಹೋಗುವುದರಿಂದ ಹಿಡಿದು, ಶಾಲೆಯಲ್ಲಿ ನಾವು ತುಂಟಾಟ ಮಾಡಿದರೆ ಮಾಸ್ತರರ ಕೈಯಲ್ಲಿ ಬೈಸಿಕೊಳ್ಳುವ ಭಾಗ್ಯವೂ ಅವರಿಗೆ ಸಿಗುತ್ತಿತ್ತು. ನಾವು ಗಲೀಜು ಮಾಡಿದರೆ ಅದನ್ನು ಸ್ವಚ್ಛ ಮಾಡುವುದೂ ಅವರೇ. ನಾವು ಶಾಲೆಯಲ್ಲಿ ಹೋಂವರ್ಕ್ ಮಾಡಿಲ್ಲವೆಂದರೆ ಮೊದಲು ದೂರು ಮುಟ್ಟುತ್ತಿದ್ದದ್ದೇ ಅಣ್ಣನಿಗೆ ಇಲ್ಲವೇ ಅಕ್ಕನಿಗೆ. ಹಾಗಾಗಿ ನಮ್ಮ ಪಾಲಿಗೆ ಅಪ್ಪ ಅಮ್ಮನನ್ನೂ ಮೀರಿಸಿ ಪೋಷಕರ ಪಾತ್ರವನ್ನು ಅವರು ಹೊತ್ತುಕೊಂಡು ಬಿಟ್ಟಿದ್ದರು.



ಉನ್ನತ ಶಿಕ್ಷಣದ ಹೆಸರಿನಲ್ಲಿ ದೂರದೂರಿನಲ್ಲಿ ಏನೋ ದಬಾಕ್ತಿವಿ ಅಂತ ಬಂದ ನಮಗೆ, ಒಮ್ಮೆ ಊರಿನ ನೆನಪಾದರೆ ಸಾಕು, ಬಾಲ್ಯ ಅನ್ನೊದು ಬಾಲ್ಯದಲ್ಲಿ ನಾವು ಹಳಿಯಿಲ್ಲದೆ ಬಿಟ್ಟ ರೈಲಿನಂತೆ ಕಣ್ಮುಂದೆ ಸಾಗಿಬಿಡುತ್ತದೆ



ಊರ ದಾರಿ
ಸಂಜಯ ಚಿತ್ರದುರ್ಗ

ನಾವು ಶಾಲೆ ಬಿಟ್ಟು ಬರುವುದನ್ನೇ ಕಾಯುತ್ತಿದ್ದ ಅಜ್ಜಿ, ನಮಗೆಲ್ಲಾ ಒಂದು ದೊಡ್ಡ ತಟ್ಟೆಯಲ್ಲಿ ತಿಂಡಿ ಕೊಡುತ್ತಿದ್ದರು. ಹೂವಿನ ಮಕರಂದಕ್ಕೆ ಬರುವ ಜೇನಿನಂತೆ ನಾವೆಲ್ಲರೂ ಅದಕ್ಕೆ ಮುತ್ತಿಗೆ ಹಾಕುತ್ತಿದ್ದೆವು.

ನಂತರ ಆಟದ ಹೆಸರಿನಲ್ಲಿ ಊರಿಡೀ ಸುತ್ತಿ, ತಲೆಯಿಂದ ಬುಡದವರೆಗೂ ನಮ್ಮೂರಿನ ಕೆಂಪು ಮಣ್ಣಿನ ಹಿಂದೆ ನಾವುಗಳು ಮಾಯ. ನಮಗೆ ಮೆತ್ತಿದ್ದ ಮಣ್ಣನ್ನು ಮೂರು ಮೂರು ಬಾರಿ ತಿಕ್ಕಿ ತೊಳಿಯುವಷ್ಟರಲ್ಲಿ ನಮ್ಮಮ್ಮನಿಗೆ ಮೂರು ಜನ್ಮ ಹಿಂದಕ್ಕೂ – ಮುಂದಕ್ಕೂ ಹೋಗಿ ಬಂದಂತೆ ಆಗುತಿತ್ತು. ಅದು ನಮ್ಮ ಆಟದ ಮಹಿಮೆಯೋ ಅಥವಾ ನಮ್ಮೂರ ಮಣ್ಣಿನ ಗುಣವೋ ಇನ್ನೂ ಸರಿಯಾಗಿ ನನಗೆ ಗೊತ್ತಿಲ್ಲ. ಆದರೆ ಒಂದಂತೂ ಸತ್ಯ, ಆ ಅವತಾರದಲ್ಲಿ ನಮ್ಮನ್ನು ಯಾರಾದರೂ ಅಪರಿಚಿತರು ನೋಡಿದ್ದಿದ್ದರೆ ದೇವರಾಣೆಗೂ ಅದು ನಾವು ಎಂದು ಕಂಡು ಹಿಡಿಯಲು ಸಾಧ್ಯವೇ ಇರುತ್ತಿರಲಿಲ್ಲ.

ಇನ್ನೂ ನಮ್ಮೂರಿನ ದಸರಾ. ನಮ್ಮೂರಿನಲ್ಲಿ ಯಾವುದಾದರೂ ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡ್ತಾರೆ ಅಂದ್ರೆ ಅದು ದಸರಾ ಮಾತ್ರ. ಊರಿನ ಕೊಂಡಿ ಕಳೆದುಕೊಂಡು ರಾಜ್ಯದ ಯಾವುದ್ಯಾವುದೋ ಮೂಲೆಯಲ್ಲಿ ಜೀವನ ತಳ್ಳುತ್ತಿರುವವರು ಕೂಡ ದಸರಾ ಸಮಯಕ್ಕೆ ಊರಿನಲ್ಲಿ ಹಾಜರಾಗಿರುತ್ತಾರೆ. ಆ ಸಮಯದಲ್ಲಂತೂ ನಮಗೆಲ್ಲಾ ಹೊಸ ಬಟ್ಟೆಯ ಸಂಭ್ರಮ! ಅಷ್ಟು ದಿನವೂ ನೋಡಿರದ ಮುಖಗಳೆಲ್ಲಾ ಎದುರಿಗೆ ಬಂದು ನಾನು ನಿನ್ನ ಚಿಕ್ಕಪ್ಪ, ಮಾವ , ಅತ್ತೆ ಎಂದು ಹೇಳಿಕೊಳ್ಳುತ್ತಿದ್ದರೆ ಅವರನ್ನು ನಾವು ಯಾವುದೊ ಅನ್ಯಗ್ರಹದ ಪ್ರಾಣಿಗಳಂತೆ ಪಿಳಿ ಪಿಳಿ ಕಣ್ಣುಗಳನ್ನು ಬಿಟ್ಟುಕೊಂಡು ನೋಡುತ್ತಿದ್ದೆವು.

ಅದರಲ್ಲೂ ನಮಗೆ ದಸರಾದಲ್ಲಿ ಮಜಾ ಎಂದರೆ ಬಯಲಾಟ. ಕರಾವಳಿ ಭಾಗದಲ್ಲಿ ಯಕ್ಷಗಾನದಂತೆ , ನಮ್ಮೂರಿನಲ್ಲಿ ಬಯಲಾಟ. ಊರ ಹೊರಗಿನ ಹೊಲದಲ್ಲಿ ಸೀರಿಯಲ್ ಸೆಟ್ಟಿನ ತರದ ಸ್ಟೇಜ್ ಮಾಡಿ, ಅದರ ಮೇಲೆ ಚಪ್ಪರ ಹಾಕಿ ಅಲಂಕಾರ ಮಾಡಿ, ಅದರ ಹಿಂದೆ ಚೌಕಿ ಮನೆ ಸಂಜೆಯ ವೇಳೆಗೆ ರೆಡಿಯಾಗಿರುತ್ತಿತ್ತು. ರಾತ್ರಿಯ ವೇಳೆಯಲ್ಲಿ ಬಣ್ಣ ಬಳಿದ ಬಯಲಾಟ ಕಲಾವಿದರು ಕುಣಿತ ಶುರು ಮಾಡಿದರೆ ನಾವುಗಳು ಯಾವುದೋ ಜಗದ್ ವಿಸ್ಮಯವೇ ನಮ್ಮೆದುರು ನಡೆಯುತ್ತಿದೆಯೋ ಎನ್ನುವಂತೆ ಬಿಟ್ಟಗಣ್ಣುಗಳನ್ನು ಬಿಟ್ಟೇ ಇರುತ್ತಿದ್ದೆವು. ಇನ್ನೇನು ನಿದ್ದೆಯ ಮಂಪರು ಆವರಿಸಬೇಕು ಎನ್ನುವಷ್ಟರಲ್ಲಿಯೇ, ಸಭಿಕರ ಮಧ್ಯದಿಂದಲೇ ಭಯಂಕರ ಎಂಟ್ರಿ ಕೊಡುವ ರಾಕ್ಷಸರ ಪಾತ್ರಗಳಿಗೆ ಜೀವ ಬರುತ್ತಲೂ ನಮ್ಮ ನಿದ್ದೆ ಮಂಪರು ಹೋಗಿ, ಭಯದಲ್ಲಿ ಆಗಿದ್ದೂ ಒಂದೋ ಎರಡೂ ಎಂಬ ಪರಿವೆಯೇ ಇಲ್ಲದೇ ಮನೆಯ ಹಿತ್ತಲಿನ ಕಡೆಗೆ ಹನುಮಂತನಂತೆ ಹಾರಿಬಿಡುತ್ತಿದ್ದೆವು.


ನೋಡ ನೋಡುತ್ತಿದ್ದಂತೆ ಬಾಲ್ಯದ ತುಂಟಾಟಗಳಿಗೆ ವಿರಾಮ ಬಿತ್ತು. ಊರಿನ ಕಡೆ ಬೆನ್ನು ತಿರುಗಿಸಿ ಉನ್ನತ ಶಿಕ್ಷಣದ ಹೆಸರಿನಲ್ಲಿ ದೂರದೂರಿನಲ್ಲಿ ಏನೋ ದಬಾಕ್ತಿವಿ ಅಂತ ಬಂದ ನಮಗೆ, ಒಮ್ಮೆ ಊರಿನ ನೆನಪಾದರೆ ಸಾಕು, ಬಾಲ್ಯ ಅನ್ನೊದು ಬಾಲ್ಯದಲ್ಲಿ ನಾವು ಹಳಿಯಿಲ್ಲದೆ ಬಿಟ್ಟ ರೈಲಿನಂತೆ ಕಣ್ಮುಂದೆ ಸಾಗಿಬಿಡುತ್ತದೆ...!

(ಅಂತಿಮ ವರ್ಷದ ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿ, ಎಸ್‌ಡಿ.ಎಂ ಕಾಲೇಜು ಉಜಿರೆ)



ಅಂಜನಾ ಹೆಗಡೆ

ಸಂಚಿಯ ಆತ್ಮಚರಿತ್ರೆ



"ಎಮ್ಮನೆ ಮಾಣಿ ಶಾಲಿಗೋಗ್ತಾ ಎಂತದೂ ಬತ್ತಿಲ್ಲೆ, ತ್ವಾಟಕ್ಕೋಕ್ಯ ಬೀಡಿ ಸೇದ್ತಾ ಹೊಗೆನೇ ಬತ್ತಿಲ್ಲೆ"

ಜೋರಾಗಿ ಹಾಡುತ್ತ ಸಂಚಿಮಳ್ಳು ಒಡ್ಡೆತಲೆ ಇಳಿಯುವ ಹೊತ್ತಿಗೆ ಸರಸತ್ಗೆ ಊಟ ಮುಗಿಸಿ ಪಾತ್ರೆ ತೊಳೆದು ದೇವರಮನೆಯಲ್ಲಿ ಕವುಚಿಟ್ಟು ಅಲ್ಲೇ ಒಂದು ಕಂಬಳಿ ಹಾಸಿಕೊಂಡು ಅಡ್ಡಾಗಿದ್ದಳು. "ಬ್ಯಾಶ್ಗೆ ಬಂದ್ರೆ ಸಾಕು ಈ ನೊಣದ ಕಾಟ ತಾಳಲಾಗ್ತಿಲ್ಲೆ" ಎಂದು ಗೊಣಗುತ್ತ ಹೆಗಲಮೇಲಿದ್ದ ಟವೆಲ್ಲನ್ನೇ ಮುಖದ ಮೇಲೆ ಹಾಕಿಕೊಂಡು ರಾಮಣ್ಣ ಜಗಲಿಯ ಮೂಲೆಯಲ್ಲಿದ್ದ ಮಂಚದಮೇಲೆ ಮಲಗಿ ಗೊರಕೆ ತೆಗೆಯುತ್ತಿದ್ದ.

"ಈ ಸುಟ್ ಹುಡ್ರು ಒಂದ್ ಗಳಿಗೆ ಬಾಯಿ ಮುಚ್ಚಿದ್ರೆ ಗನಾ ನಿದ್ರೆ ಆದ್ರೂ ಬತ್ತಿತ್ತು" ಎಂದು ಮೊಮ್ಮಕ್ಕಳಿಗೆ ಬಯ್ಯುತ್ತಲೇ ಸಾತಜ್ಜಿ ಮಾಳಿಗೆಯಲ್ಲಿ ಹಾಸಿಗೆ ಬಿಡಿಸುತ್ತಿದ್ದವಳು ಸಂಚಿಮಳ್ಳು ಬಂದಿದ್ದು ಗೊತ್ತಾಗಿ ಜಗಲಿಗೆ ಬಂದಳು. ಹಿಮ್ಮಡಿಯ ಜಾಗದಲ್ಲಿ ಸವೆದು ತೂತಾಗಿದ್ದ ಹವಾಯಿ ಚಪ್ಪಲಿಯನ್ನು ಕೈಯಿಂದ ತೆಗೆದು ಕಿಟಕಿಯ ಸರಳುಗಳ ಮಧ್ಯದಲ್ಲಿ ಸಿಕ್ಕಿಸಿಟ್ಟ ಸಂಚಿಮಳ್ಳು "ಓಹೋ ಸಾತಜ್ಜಿ ಆರಾಮಿದ್ಯನೇ?" ಎಂದು ಕೇಳುತ್ತ ಸಂಚಿಯಿಂದ ಎರಡು ಪೇರಲೆಹಣ್ಣು ತೆಗೆದು ಅವಳ ಕೈಗೆ ಕೊಟ್ಟ. ಸಾತಜ್ಜಿ ಅವುಗಳನ್ನು ಸೆರಗಿನಿಂದ ಒರೆಸುತ್ತ, "ಬಂದ್ಯ, ಬಾ. ನೀ ಒಬ್ಬಂವ ಕಡಿಮೆ ಇದ್ದಿದ್ದೆ ಗಲಾಟೆ ಮಾಡಲೆ" ಎನ್ನುತ್ತ ಅಡುಗೆಮನೆಗೆ ಹೋದಳು.

ಸಂಚಿಮಳ್ಳು ಆ ಹೆಸರನ್ನು ಪಡೆದುಕೊಂಡ ಹಿಂದೆ ಹಲವಾರು ಕತೆಗಳಿದ್ದವು. ಅವನು ಸುಮಾರು ಹತ್ತಿಪ್ಪತ್ತು ವರ್ಷಗಳಿಂದ ತನ್ನೊಂದಿಗೆ ಹೊತ್ತು ತಿರುಗುತ್ತಿರುವ ಜೋಳಿಗೆಯಂಥ ಸಂಚಿಯಿಂದಾಗಿ ಆ ಹೆಸರು ಬಂತೆಂದು ಹಲವರು ಹೇಳಿದರೆ, ಅವನು ಪ್ರಾಯಕಾಲದಲ್ಲಿ ಸಂಚಿಯಲ್ಲಿ ಚಾಪುಡಿ ಮಾರುತ್ತಿದ್ದನೆಂದು ಇನ್ನು ಕೆಲವರು ಹೇಳುತ್ತಿದ್ದರು.

ಇವರಿಬ್ಬರ ಮಾತುಕತೆಯಿಂದ ಆಗಷ್ಟೇ ಕಾಲುಚಾಚಿದ್ದ ಸರಸತ್ಗೆ ಎದ್ದು ಬಟ್ಟಲು, ಎರಡು ನೀರಿನ ಲೋಟಗಳನ್ನು ಇಟ್ಟು ಮಣೆ ಹಾಕುವಷ್ಟರಲ್ಲಿ ಸಂಚಿಮಳ್ಳು ಒಳಗೆ ಬಂದು, "ಅತ್ಗೆ, ಉಚ್ಚೆ ಹೊಯ್ದಿಕ್ಕೆ ಬತ್ನೇ" ಎನ್ನುತ್ತ ಬಚ್ಚಲುಮನೆಗೆ ಹೋದ. ಅವನು ಹಾಗೆ ಹಲುಬುವುದು ಹೊಸತೇನೂ ಅಲ್ಲದ ಕಾರಣ ಸರಸತ್ಗೆ ಅವನ ಮಾತಿಗೆ ಉತ್ತರಿಸದೇ ಮಾಳಿಗೆಯಿಂದ ಟವೆಲ್ಲು ತಂದು ಕಿಟಕಿಯ ಮೇಲಿಟ್ಟಳು. ಕಾಟಾಚಾರಕ್ಕೆ ಕೈಕಾಲುಗಳನ್ನು ಒದ್ದೆ ಮಾಡಿಕೊಂಡು "ಗುಲಾಮ ನನ್ನ ಮಗ ದಿವಾಳಿ ಹನುಮ"ಎಂದು ಗಂಭೀರವಾಗಿ ಹಾಡಿಕೊಳ್ಳುತ್ತ ಒಳಗೆ ಬಂದ ಸಂಚಿಮಳ್ಳು ಟವೆಲ್ಲಿನ ಸುದ್ದಿಗೇ ಹೋಗದೇ ಶರ್ಟು-ಬನಿಯನ್ನು ತೆಗೆದು, ಬನಿಯನ್ನಿನಿಂದಲೇ ಕೈಕಾಲು ಒರೆಸಿಕೊಂಡು ಮಣೆಯಮೇಲೆ ಆಸೀನನಾದ. ಅನ್ನದ ಬಟ್ಟಲಿಗೆ ಕೈಮುಗಿದವನೇ "ಬಡವಾ ನೀ ಮಡಗದಾಂಗಿರು" ಎನ್ನುತ್ತ ಜನಿವಾರವನ್ನು ತೆಗೆದು ಲೋಟದಲ್ಲಿದ್ದ ನೀರಲ್ಲಿ ನೆನೆಸಿಟ್ಟು, ಇನ್ನೊಂದು ಲೋಟದಲ್ಲಿದ್ದ ನೀರನ್ನು ಗಟಗಟ ಕುಡಿದವನೇ ಊಟ ಮಾಡಲಾರಂಭಿಸಿದ. ಸಂಚಿಮಳ್ಳು ಬಂದ ವಿಷಯ ಗೊತ್ತಾಗಿ ಗೋವಿಂದಣ್ಣನ ಮನೆಯಲ್ಲಿ ಕೇರಂ ಆಡುತ್ತಿದ್ದ ಮಕ್ಕಳ ಪಟಾಲಂ ಬಂದು ಅವನನ್ನು ಸುತ್ತುವರಿಯಿತು.

ಸಂಚಿಮಳ್ಳು ಆ ಹೆಸರನ್ನು ಪಡೆದುಕೊಂಡ ಹಿಂದೆ ಹಲವಾರು ಕತೆಗಳಿದ್ದವು. ಅವನು ಸುಮಾರು ಹತ್ತಿಪ್ಪತ್ತು ವರ್ಷಗಳಿಂದ ತನ್ನೊಂದಿಗೆ ಹೊತ್ತು ತಿರುಗುತ್ತಿರುವ ಜೋಳಿಗೆಯಂಥ ಸಂಚಿಯಿಂದಾಗಿ ಆ ಹೆಸರು ಬಂತೆಂದು ಹಲವರು ಹೇಳಿದರೆ, ಅವನು ಪ್ರಾಯಕಾಲದಲ್ಲಿ ಸಂಚಿಯಲ್ಲಿ ಚಾಪುಡಿ ಮಾರುತ್ತಿದ್ದನೆಂದು ಇನ್ನು ಕೆಲವರು ಹೇಳುತ್ತಿದ್ದರು. ಸಂಚಿಕೊಪ್ಪದ ಹುಡುಗಿಯೊಬ್ಬಳನ್ನು ಪ್ರೀತಿಸಿ, ಅವಳು ಬೇರೆಯವನನ್ನು ಮದುವೆಯಾದ ಕಾರಣಕ್ಕೆ ಇವನಿಗೆ ಹುಚ್ಚುಹಿಡಿದು ಆ ಹೆಸರು ಬಂತು ಎನ್ನುವ ಕತೆ ಜಾಸ್ತಿ ಪ್ರಚಲಿತದಲ್ಲಿತ್ತು. ಯಾವುದು ನಿಜ, ಯಾವುದು ಕಟ್ಟುಕತೆ ಎಂದು ಪರಾಂಬರಿಸಿ ನೋಡುವಷ್ಟು ಉಮೇದಾಗಲೀ ಅಥವಾ ಅಗತ್ಯವಾಗಲೀ ಯಾರಿಗೂ ಇರಲಿಲ್ಲ. ಹೊತ್ತಲ್ಲದ ಹೊತ್ತಲ್ಲಿ ಕಂಡಕಂಡವರ ಮನೆಗೆ ಹೋಗುತ್ತ, ಯಾರದೋ ಮನೆಯ ಪೇರಲೆಹಣ್ಣು-ಹಲಸಿನಕಾಯಿ ಕೊಯ್ದು ಇನ್ಯಾರಿಗೋ ಕೊಡುತ್ತ ಸಂಚಿಮಳ್ಳು ಮಾತ್ರ ಜಗದ ಜಂಜಡಕ್ಕೆ ಸಿಲುಕದ ಸರದಾರನಂತೆ ಓಡಾಡಿಕೊಂಡಿದ್ದ.

ಊಟ ಮುಗಿಸಿ ಲೋಟದಲ್ಲಿ ಅದ್ದಿಟ್ಟಿದ್ದ ಜನಿವಾರವನ್ನು ಮತ್ತೆ ಹಾಕಿಕೊಂಡವನೇ "ಓ ಅಲ್ಲಿ ಒಡ್ಡೆತಲೆಲ್ಲಿ ಒಂದು ಹಲಸಿನಕಾಯಿ ಇಟ್ಟಿಕ್ಕೆ ಬಂಜಿ. ತಂದ್ಬುಡನ ಬನ್ನಿ" ಎನ್ನುತ್ತ ಮಕ್ಕಳ ಸೈನ್ಯದೊಂದಿಗೆ ಹೊರಬಿದ್ದ. ಒಡ್ಡೆತಲೆಗೆ ಆ ಹೆಸರು ಹೇಗೆ ಬಂತು ಎನ್ನುವ ಪ್ರಶ್ನೆಯನ್ನು ಸಂಚಿಮಳ್ಳು ರಾಮಣ್ಣನ ಹತ್ತಿರ ಪ್ರತಿಸಲ ಬಂದಾಗಲೂ ಕೇಳುತ್ತಿದ್ದ. ತನಗೇ ಗೊತ್ತಿರದ ಒಡ್ಡೆತಲೆ ವಿಷಯವನ್ನು ಇವನಿಗೆ ಹೇಗೆ ವಿವರಿಸುವುದು ಎಂದು ತಲೆಕೆರೆದುಕೊಳ್ಳುತ್ತ ರಾಮಣ್ಣ ವಿಷಯ ಬದಲಾಯಿಸಲು ಪ್ರಯತ್ನಿಸುತ್ತಿದ್ದ. ಈ ಸಲ ಮಾತ್ರ ಪಟ್ಟುಬಿಡದೇ ಸಂಚಿಮಳ್ಳು ಹಲಸಿನಕಾಯಿ ತಂದು ಅಂಗಳದಲ್ಲಿಟ್ಟವನೇ ಅಲ್ಲೇ ಕಟ್ಟೆಯಮೇಲೆ ಕುಳಿತಿದ್ದ ಸಾತಜ್ಜಿಯ ಹತ್ತಿರ ಮತ್ತೆ ಒಡ್ಡೆತಲೆಯ ಸುದ್ದಿ ತೆಗೆದ. ಸಾತಜ್ಜಿ ಒಂದೊಂದೇ ಕೈಬೆರಳುಗಳನ್ನು ಮಡಚುತ್ತ "ಅದು ಸುಮಾರು ಅರವತ್ತು ವರ್ಷದ ಹಿಂದಿನ ಕತೆ. ನೀ ಇನ್ನೂ ಹುಟ್ಟಿದ್ದಿಲ್ಲೆ ಆವಾಗ" ಎನ್ನುತ್ತ ಕವಳದ ಸಂಚಿ ಬಿಚ್ಚಿದಳು.

ಸಾತಜ್ಜಿಯ ಗಂಡ ಪರಮಜ್ಜ ಅಂಕೋಲೆಯ ಕಡೆಯಿಂದ ಗೇರುಬೀಜದ ವ್ಯಾಪಾರಕ್ಕೆಂದು ಬರುತ್ತಿದ್ದವ ಪಟೇಲರ ಮನೆಯೆಂದೇ ಹೆಸರುವಾಸಿಯಾಗಿದ್ದ ದತ್ತಪ್ಪನ ಮನೆಯಲ್ಲಿ ರಾತ್ರಿ ಉಳಿದುಕೊಳ್ಳುವುದು ಸಂಪ್ರದಾಯವಾಗಿತ್ತು. ಗೇರು ಫಸಲು ಚೆನ್ನಾಗಿದ್ದ ಒಂದು ವರ್ಷ ದತ್ತಪ್ಪನ ಕೈಗೆ ಆ ವರ್ಷದ ಫಸಲನ್ನೆಲ್ಲ ಕೊಟ್ಟು ಅತ್ತ ಬೆಟ್ಟವೂ ಅಲ್ಲದ ಬ್ಯಾಣವೂ ಅಲ್ಲದ ಹೊಳೆಪಕ್ಕದ ಹತ್ತು ಎಕರೆ ಜಾಗವನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿದ್ದ. ಗೆಳೆಯನಂತಿದ್ದ ಮನೆಯ ಆಳು ರಾಮಚಂದ್ರನೊಂದಿಗೆ ಇಲ್ಲೇ ಒಂದು ಬಿಡಾರ ಕಟ್ಟಿಕೊಂಡು ಅಷ್ಟಷ್ಟೇ ಜಾಗವನ್ನು ಹದಮಾಡಿ ನಾಲ್ಕೈದು ವರ್ಷಗಳಲ್ಲಿ ಒಂದು ಎಕರೆ ಬಾಳೆತೋಟ ಮಾಡಿ ಅಡಿಕೆಯನ್ನೂ ನೆಟ್ಟಿದ್ದ. ಜೀವವಿರುವವರೆಗೂ ದುಡಿದು ನಾಲ್ಕೆಕರೆ ಅಡಿಕೆತೋಟ, ಎರಡೆಕರೆ ಗದ್ದೆ ಮಾಡಿ ರಾಮಚಂದ್ರನೊಂದಿಗೆ ಮಾಳಕಾಯಲೆಂದು ಹೋದವನು ಮಾಳದಲ್ಲೇ ಕೊನೆಯುಸಿರೆಳೆದಿದ್ದ. ಪರಮಜ್ಜನ ಜೀವಮಾನದಲ್ಲಿಯೇ ಎಮ್ಮೆ ದಲ್ಲಾಳಿಯಾಗಿದ್ದ, ಸಾತಜ್ಜಿಗೆ ದೂರದ ಸಂಬಂಧಿಯೂ ಆಗಿದ್ದ ಸಂಚಿಮಳ್ಳುನ ಅಪ್ಪ ಪರಮಜ್ಜನಿಗೆ ಪರಿಚಯವಾಗಿದ್ದು. "ಎಮ್ಮನೆಗೆ ಮೊದಲನೇ ಸಲ ಬಂದಾಗ ನಿಂಗಿನ್ನೂ ನಾಲ್ಕ್ ವರ್ಷ. ಎಮ್ಮೆಕರದ ಸಂತಿಗೆ ಒಡ್ಡೆತಲೆಲ್ಲಿ ಆಟ ಆಡ್ತಿದ್ದೆ" ಎನ್ನುತ್ತ ಎದ್ದುಹೊರಟ ಸಾತಜ್ಜಿಯನ್ನು ಹೋಗಲು ಬಿಡದೇ "ಏ ಸಾತಜ್ಜಿ ನಿಂತ್ಗಳೇ. ಒಡ್ಡೆತಲೆ ಕತೆ ಹೇಳೇ" ಎಂದು ಕೈಹಿಡಿದು ಎಳೆಯಲಾರಂಭಿಸಿದ ಸಂಚಿಮಳ್ಳು.

ಮಳೆಗಾಲದಲ್ಲಿ ಡೊಂಬೆಹೊಳೆ ತುಂಬಿಹರಿದ ನೀರು ಮನೆಯ ಬಾಗಿಲಿಗೆ ಬರದಂತೆ ಪರಮಜ್ಜ, ರಾಮಚಂದ್ರ ಇಬ್ಬರೇ ಸೇರಿ ಒಂದು ಒಡ್ಡು ಕಟ್ಟಿ ಅದಕ್ಕೊಂದು ಬಿದಿರುಗಳದ ಸಂಕವನ್ನೂ ಮಾಡಿಕೊಂಡಿದ್ದರಂತೆ. ಅದಾಗಿ ನಾಲ್ಕೇ ವರ್ಷಕ್ಕೆ ಒಂದು ಮಳೆಗಾಲ ವಿಪರೀತ ಮಳೆಯಾಗಿ ಸಂಕ ಕೊಚ್ಚಿಹೋಗಿ ಇವರಿಗೂ ಹೊರಗಿನ ಪ್ರಪಂಚಕ್ಕೂ ಸಂಪರ್ಕವೇ ಕಡಿದುಹೋಯಿತಂತೆ. "ಅದೇ ವರ್ಷ ನವರಾತ್ರಿಯಲ್ಲೇ ನಿನ್ನ ಅಪ್ಪ ಎಮ್ಮೆ ತಂದಿದ್ದು. ಆ ಎಮ್ಮೆ ಬಂದಿದ್ದೇ ಮನೆ ನಸೀಬೇ ಬದಲಾಗೋತು ನೋಡು. ಹೊಳೆಗೆ ಸೇತುವೆನೂ ಆಗೋತು" ಎಂದ ಸಾತಜ್ಜಿ ಅರವತ್ತು ವರ್ಷಗಳ ಹಿಂದಿನ ಸಂತೋಷವನ್ನು ಮತ್ತೆ ಅನುಭವಿಸುತ್ತಿರುವಂತೆ ಕಾಣಿಸಿದಳು. ಸೇತುವೆ ಕೆಲಸ ಮುಗಿದು, ಎಷ್ಟೇ ಮಳೆಯಾದರೂ ಹೊಳೆಯಿಂದ ನೀರು ಹೊರಗೆ ಹರಿಯದಂತೆ ವ್ಯವಸ್ಥೆಯಾದ ಮೇಲೆ ಪರಮಜ್ಜ, ರಾಮಚಂದ್ರ ಸೇರಿ ಬೆಟ್ಟದಿಂದ ಮಣ್ಣು ತಂದು ಒಡ್ಡು ಇದ್ದ ಜಾಗವನ್ನು ಮಟ್ಟಮಾಡಿ ರಸ್ತೆ ಮಾಡಿದ ಮೇಲೆ ಒಡ್ಡು ಇದ್ದ ಜಾಗ ಒಡ್ಡೆತಲೆ ಆಗಿದ್ದು. ಪರಮಜ್ಜನ ಸಂಸಾರವೂ ಬೆಳೆದು, ರಾಮಚಂದ್ರನ ಮದುವೆಯೂ ಆಗಿ ಅವನೂ ಅಲ್ಲೇ ಗದ್ದೆತುದಿಯಲ್ಲಿ ಬಿಡಾರ ಕಟ್ಟಿಕೊಂಡು, ಅವರ ಮನೆಗೂ ಸಂಚಿಮಳ್ಳುನ ಅಪ್ಪನ ಹತ್ತಿರವೇ ಎಮ್ಮೆ ಖರೀದಿಯಾದ ಮೇಲೆ ಅಪ್ಪ-ಮಗನ ಓಡಾಟ ಪರಮಜ್ಜನ ಮನೆಗೆ ಖಾಯಂ ಆಯಿತು.



ಸಂಚಿಮಳ್ಳುನ ಹೆಸರು ಶ್ರೀಪಾದ ಎನ್ನುವುದು ಈಗ ಸಾತಜ್ಜಿಗೆ ಮಾತ್ರ ನೆನಪಿರುವ ವಿಷಯ. ಪಾಟಿಚೀಲವನ್ನು ಬಗಲಿಗೇರಿಸಿಕೊಂಡೇ ಅಪ್ಪನೊಂದಿಗೆ ಊರೂರು ತಿರುಗುತ್ತಿದ್ದ ಶ್ರೀಪಾದನಿಗೆ ಯಾವಾಗ ಮಳ್ಳು ಹಿಡಿದಿದ್ದು ಎನ್ನುವುದು ಮಾತ್ರ ಅವಳಿಗೂ ಗೊತ್ತಿಲ್ಲ. ಪರಮಜ್ಜ ಬಿಡಾರವಿದ್ದ ಜಾಗದಲ್ಲಿ ಹೊಸ ಹೆಂಚಿನಮನೆಯನ್ನು ಕಟ್ಟಿಸಿದ ವರ್ಷ ಹನುಮಂತ ದೇವರನ್ನು ಕರೆಸಿ ದೇವಕಾರ್ಯ ಮಾಡಿಸಿದ್ದ. ಪಲ್ಲಕ್ಕಿ ಹೊತ್ತಿದ್ದ ಅಪ್ಪನೊಂದಿಗೆ ಬಂದಿದ್ದ ಶ್ರೀಪಾದ ರಾತ್ರಿ ಅಲ್ಲಿಯೇ ಉಳಿದವ ಬೆಳಗ್ಗೆ ಮೊದಲನೇ ಪಂಕ್ತಿಗೆ ತೆಳ್ಳೇವು ತಿನ್ನಲು ಶುರುಮಾಡಿ ಕೊನೆಯ ಪಂಕ್ತಿಯಲ್ಲಿ ತಾನು ತಿಂದು ಮುಗಿಸುವವರೆಗೂ ತಿನ್ನುತ್ತಲೇ ಇದ್ದಿದ್ದು ನೋಡಿಯೇ ಸಾತಜ್ಜಿಗೆ ಸಂದೇಹ ಬಂದಿತ್ತು. ಮಧ್ಯಾಹ್ನ ಮಂಗಳಾರತಿಯ ಸಮಯದಲ್ಲಂತೂ ಜೋರಾಗಿ "ಬಕಾಪ್ ಬಕಾಪ್" ಎನ್ನುತ್ತ ಚಪ್ಪಾಳೆ ತಟ್ಟುತ್ತಿದ್ದ ಶ್ರೀಪಾದನನ್ನು ಗಮನಿಸಿದವಳೇ ದೇವಕಾರ್ಯ ಮುಗಿದು ಪಲ್ಲಕ್ಕಿ ಹೊರಡುವ ಸ್ವಲ್ಪ ಸಮಯ ಮೊದಲು ಶ್ರೀಪಾದನ ಅಪ್ಪನ ಕೈಗೆ ಪ್ರಸಾದ ಕೊಡುತ್ತ, "ಕೆರೆಗದ್ದೆ ಜೋಯ್ಸರ ಹತ್ರ ಒಂದು ತಾಯತ ಆದ್ರೂ ಕಟ್ಸು ಶ್ರೀಪಾದಂಗೆ. ಎಮ್ಮೆ ಹಿಡ್ಕ ಬರೀ ಊರೂರು ತಿರಗ್ತಾ ಇದ್ರೆ ಬೆಳೆಯ ಮಾಣಿ ಕೈತಪ್ಪೋಗ್ತ" ಎಂದು ಒಳಧ್ವನಿಯಲ್ಲಿ ಹೇಳಿದ್ದಳು. ತನ್ನ ಅಕ್ಕತಂಗಿಯರೆಲ್ಲ ಐದಾರು ಮಕ್ಕಳೊಂದಿಗೆ ಸಂಸಾರ ಮಾಡುತ್ತಿದ್ದರೆ ತನಗೆ ಮಾತ್ರ ಮೂರನೆಯದು ನಿಲ್ಲಲೇ ಇಲ್ಲ ಎನ್ನುವ ಬೇಸರದಲ್ಲಿದ್ದ ಸಾತಜ್ಜಿ ಶ್ರೀಪಾದನನ್ನು ಕೂಡಾ ತನ್ನ ಮಕ್ಕಳನ್ನು ಪ್ರೀತಿಸಿದಂತೆ ಪ್ರೀತಿಸಿದವಳು.

ಕತೆ

ಅದಾಗಿ ಹಲವು ವರ್ಷಗಳವರೆಗೆ ಅಪ್ಪ-ಮಗ ಪರಮಜ್ಜನ ಮನೆ ಕಡೆ ಬರಲೇ ಇಲ್ಲ. ತಾನು ತಾಯತದ ವಿಷಯವನ್ನು ಹೇಳಿದ್ದು ತಪ್ಪಾಯಿತೇನೋ ಎಂದು ಸಾತಜ್ಜಿಗೆ ಆಗಾಗ ಪಶ್ಚಾತ್ತಾಪವಾಗುತ್ತಲೇ ಇತ್ತು. ಪರಮಜ್ಜ ತೀರಿಕೊಂಡಾಗಲೂ ಅವರು ಬರದೇ ಇದ್ದಾಗ ತನ್ನ ತಪ್ಪಿಗೆ ಪ್ರಾಯಶ್ಚಿತ್ತವೆನ್ನುವಂತೆ ಸಾತಜ್ಜಿ ಕೊಟ್ಟಿಗೆಯಲ್ಲಿ ಹುಟ್ಟಿದ ಆಕಳುಕರುವಿಗೆ ಶ್ರೀಪಾದ ಎಂದು ಹೆಸರಿಟ್ಟಿದ್ದಳು. ಮಗನಂತೆ ಪ್ರೀತಿ ಮಾಡಿಕೊಂಡಿದ್ದ ಶ್ರೀಪಾದನನ್ನು ದೂರಮಾಡಿಕೊಂಡ ನೋವು ಅವಳನ್ನು ಕೊರೆಯುತ್ತಲೇ ಇತ್ತು. ಈ ನಡುವೆ ಎರಡನೇ ಮಗ ಗೋವಿಂದ ಜಮೀನಿನಲ್ಲಿ ಪಾಲು ಬೇಕೆಂದು ಜಗಳವಾಡಿದ್ದು, ಗಂಡ ಪ್ರೀತಿಯಿಂದ ಕಟ್ಟಿಸಿದ್ದ ಮನೆಯೂ ಎರಡು ಭಾಗವಾಗಿಹೋಗಿದ್ದು ಎಲ್ಲ ಸೇರಿ ಸಾತಜ್ಜಿಗೆ ಸಂಸಾರವೇ ಸಾಕಾಗಿಹೋಗಿತ್ತು. ಮೊಮ್ಮಕ್ಕಳೂ ಅವರ ಪಾಡಿಗೆ ಅವರು ಆಟವಾಡುತ್ತ, ಮೂರು ಮೈಲಿ ದೂರವಿದ್ದ ಶಾಲೆಗೆ ನೆನಪಾದಾಗ ಹೋಗುತ್ತ ದೊಡ್ಡವರಾಗುತ್ತಿದ್ದರು. ಮತ್ತೆ ಅವಳು ಶ್ರೀಪಾದನನ್ನು ನೋಡುವ ಹೊತ್ತಿಗೆ ಅವನ ಹೆಸರನ್ನೇ ಎಲ್ಲರೂ ಮರೆತುಹೋಗಿ, ಎಲ್ಲರ ಬಾಯಲ್ಲೂ ಅಂವ ಸಂಚಿಮಳ್ಳು ಆಗಿಹೋಗಿದ್ದ.

ಶ್ರೀಪಾದನ ಅಪ್ಪ ತೀರಿಕೊಂಡ ಮಳೆಗಾಲದಲ್ಲಿಯೇ ಮೇಯಲು ಹೋಗಿದ್ದ ನಾಲ್ಕು ಎಮ್ಮೆ ಮಣಕಗಳು ವಾಪಸ್ಸು ಬರದೇ ಎಮ್ಮೆ ವ್ಯಾಪಾರವನ್ನು ನಿಲ್ಲಿಸಬೇಕಾಗಿ ಬಂತು. ಮನೆಯಿದ್ದ ಒಂದೆಕರೆ ಜಾಗದ ಹೊರತಾಗಿ ಬೇರೆ ಆದಾಯವಿರದ ಕಾರಣ ಶ್ರೀಪಾದನ ಆಯಿ ಸುನಂದಕ್ಕ ಅವರಿವರ ಮನೆಗೆ ಅಡಿಕೆ ಸುಲಿಯಲೋ, ತೋಟದ ಕಳೆ ಕೀಳಲೋ ಹೋಗಲಾರಂಭಿಸಿದಳು. ತಿಂಗಳುಗಟ್ಟಲೆ ಕಳೆದುಹೋದ ಎಮ್ಮೆಗಳನ್ನು ಹುಡುಕಿಕೊಂಡು ಅಲೆಯುತ್ತಿದ್ದ ಶ್ರೀಪಾದ ಮನೆಗೆ ಬರುವುದೇ ಅಪರೂಪವಾಗಿಹೋಯಿತು. ತಾನು ಆವತ್ತು ಜನಿವಾರ ತರಲು ಕೆರೆಗೆದ್ದೆಗೆ ಹೋಗದೇ ಇದ್ದಿದ್ದರೆ ಎಮ್ಮೆ ಕಳೆಯುತ್ತಲೇ ಇರಲಿಲ್ಲ ಎನ್ನುವ ಕೊರಗು ಅವನಿಗೆ ಉಳಿದುಹೋಯಿತು. ಕೊಟ್ಟಿಗೆಯ ಕಂಬಕ್ಕೆ ಜೋತುಬಿದ್ದಿದ್ದ ಅವನ ಜನಿವಾರವನ್ನು ಕಂಡ ಸುನಂದಕ್ಕ ಅತ್ತೂಕರೆದು ಹೊಸ ಜನಿವಾರವನ್ನು ಹಾಕಿಸಿದ್ದಳಾದರೂ ಶರ್ಟು-ಬನಿಯನ್ನು ತೆಗೆದಾಗಲೆಲ್ಲ ಕಣ್ಣಿಗೆ ಬೀಳುತ್ತಿದ್ದ ಜನಿವಾರವನ್ನು ತೆಗೆದು ಸ್ನಾನದ ಹಂಡೆಯಲ್ಲೋ, ಚಾ ಲೋಟದಲ್ಲೋ ಮುಳುಗಿಸಿಬಿಡುತ್ತಿದ್ದ. ಮತ್ತೆ ಬನಿಯನ್ನು ಹಾಕಿಕೊಳ್ಳುವಾಗ ಆಯಿಗೆ ಬೇಜಾರಾಗುತ್ತದೆಯೆನ್ನುವ ಒಂದೇ ಕಾರಣಕ್ಕೆ ಎಡಕ್ಕೋ, ಬಲಕ್ಕೋ ಯಾವುದೋ ಒಂದು ಕಡೆ ಅಥವಾ ಕಾಟಾಚಾರಕ್ಕೆ ಕುತ್ತಿಗೆಗೆ ನೇತುಹಾಕಿಕೊಳ್ಳುತ್ತಿದ್ದ. ಸುನಂದಕ್ಕ ಗದ್ದೆನೆಟ್ಟಿಗೆಂದು ಹೋದವಳು ಬಿದ್ದು ಕಾಲು ಉಳುಕಿಕೊಂಡ ಮೇಲಂತೂ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಕಾಲು ಉಳುಕಿದ್ದೇ ನೆವ, ಅವಳು ಹಾಸಿಗೆಯಿಂದ ಮೇಲೇಳುವ ಲಕ್ಷಣಗಳೇ ಕಾಣಿಸಲಿಲ್ಲ.



ಆಗ ಶ್ರೀಪಾದನ ಸಹಾಯಕ್ಕೆ ಬಂದವಳು ಸಂಚಿಮನೆ ಶಾರದಾ. ಅವಳು ಸುನಂದಕ್ಕನಿಗೆ ಪರಿಚಯವಾಗಿದ್ದು ಬಪ್ಪನಕೊಡ್ಲು ಕೊನೆಕೊಯ್ಲಿನಲ್ಲಿ. ಈಶ್ವರಗೌಡ ಮಗಳ ಮದುವೆ ನಿಕ್ಕಿಮಾಡುವುದಕ್ಕೆ ಇಡಗುಂಜಿಗೆ ಹೋಗುವುದು ನಿಶ್ಚಯವಾಗಿದ್ದ ಕಾರಣ ಕೆಳಗಿನ ಕೇರಿಯ ಕೊನೆಕೊಯ್ಲನ್ನೆಲ್ಲ ಒಂದೇ ವಾರದಲ್ಲಿ ಮುಗಿಸಿಬಿಟ್ಟಿದ್ದ. ಮನೆಗೆ ಇಬ್ಬಿಬ್ಬರಂತೆ ಪಾಲು ಮಾಡಿಕೊಂಡು ಅಡಿಕೆ ಕೊಳೆತುಹೋಗುವುದರೊಳಗೆ ಸುಲಿದು ಮುಗಿಸಿಬಿಡುವ ಯೋಜನೆಯಲ್ಲಿ ಸುನಂದಕ್ಕನಿಗೆ ಜೊತೆಯಾದವಳು ಶಾರದಾ. ಮೊದಮೊದಲು ಒಂದೂ ಮಾತಾಡದೇ ಮೆಟ್ಟುಗತ್ತಿಗೆ ಅಂಟಿಕೊಂಡಿದ್ದ ಶಾರದಾ ಕ್ರಮೇಣ ಸುನಂದಕ್ಕನಿಗೆ ಹೊಂದಿಕೊಂಡಿದ್ದಳು. ಶಾರದಾಳ ಮನೆಯ ಪರಿಸ್ಥಿತಿಯೂ ಇವರ ಮನೆಗಿಂತ ಭಿನ್ನವಾಗೇನೂ ಇರಲಿಲ್ಲ. ಅವಳ ಒಬ್ಬಳೇ ತಂಗಿ ಬಸ್ ಡ್ರೈವರ್ ಮಾದೇವನ ಜೊತೆಗೆ ಓಡಿಹೋದ ಸುದ್ದಿ ಕೇಳಿ ಅವಳ ಆಯಿ ಇಲಿಪಾಷಾಣ ಕುಡಿದು ಪ್ರಾಣಬಿಟ್ಟಿದ್ದಳು. ಇದ್ದ ಅರ್ಧ ಎಕರೆ ತೋಟವನ್ನು ಹಾಳುಬಿಟ್ಟಿದ್ದ ಅಪ್ಪ ಹೆಂಡ ಕುಡಿಯುತ್ತ, ಇಸ್ಪೀಟು ಆಡುತ್ತ ಸಿಕ್ಕಸಿಕ್ಕಲ್ಲಿ ಸಾಲ ಮಾಡಿಕೊಂಡಿದ್ದ. ಶಾರದಾ ಮಾತ್ರ ಅವರ ಕುಟುಂಬಕ್ಕೆ ಅಪವಾದವೆನ್ನುವಂತೆ ನಿರ್ಲಿಪ್ತಳಾಗಿ ಅವಮಾನ, ಕಷ್ಟಗಳನ್ನು ಸಹಿಸಿಕೊಂಡು ಅವರಿವರ ಮನೆಗಳಲ್ಲಿ ಕೆಲಸ ಮಾಡಿಕೊಂಡಿದ್ದಳು.

ಸುನಂದಕ್ಕ ಕೆಲಸಕ್ಕೆ ಬರದೇ ಒಂದು ವಾರ ಕಳೆದಮೇಲೆ ಅವಳನ್ನು ಹುಡುಕಿಕೊಂಡು ಬಂದಿದ್ದ ಶಾರದೆಗೆ ಎದುರಾಗಿದ್ದು ಆಯಿಯ ಹಾಸಿಗೆ ವಸ್ತ್ರ ತೊಳೆದು ಅಂಗಳದಲ್ಲಿ ಒಣಗಿಸುತ್ತಿದ್ದ ಶ್ರೀಪಾದ. ಸುನಂದಕ್ಕ ತನ್ನ ಊದಿಕೊಂಡಿದ್ದ ಕಾಲಿನ ನೋವಿಗೆ ನರಳುತ್ತ ಆಗಲೋ ಈಗಲೋ ಸತ್ತೇಹೋಗುವವಳಂತೆ ಜಗಲಿಯ ಮೇಲೆ ಮಲಗಿದ್ದಳು. ವಯಸ್ಸಿಗೆ ಮೀರಿದ ಉಮೇದಿನಲ್ಲಿ ಕೆಲಸ ಮಾಡುತ್ತಿದ್ದ ಸುನಂದಕ್ಕನನ್ನು ಮಾತ್ರವೇ ನೋಡಿದ್ದ ಶಾರದೆಗೆ ಮಾತೇ ಹೊರಡದೆ ಅವಳಿಗೆ ಸ್ನಾನ ಮಾಡಿಸಿ, ಬಟ್ಟೆ ಬದಲಾಯಿಸಿ, ಕೂದಲು ಬಾಚಿ, ಅಡುಗೆ ಮಾಡಿಟ್ಟು ಮನೆಗೆ ಹೋಗಿದ್ದಳು. ಮರುದಿನದಿಂದ ಅದು ಅವಳ ದಿನಚರಿಯ ಭಾಗವೇ ಆಗಿಹೋಯಿತು. ಬೆಳಗ್ಗೆ ಎದ್ದವಳೇ ತನ್ನ ಮನೆಯ ಕೆಲಸ ಮುಗಿಸಿ ಸುನಂದಕ್ಕನ ಮನೆಗೆ ಬಂದು ಅಡುಗೆ ಮಾಡಿ, ಇಲ್ಲಿಯೇ ಊಟಮುಗಿಸಿ, ಪಾತ್ರೆಯನ್ನೂ ತೊಳೆದಿಟ್ಟು ಬೇರೆ ಮನೆಗಳ ಕೆಲಸಕ್ಕೆ ಹೊರಡುವಳು. ಇಲ್ಲಿಗೆ ಬರಲಾರಂಭಿಸಿದ ಸ್ವಲ್ಪ ದಿನದಲ್ಲಿಯೇ ಶಾರದೆಗೆ ಶ್ರೀಪಾದನ ಮಾನಸಿಕ ಸ್ಥಿತಿ ಅಷ್ಟು ಸರಿಯಾಗಿಲ್ಲವೆನ್ನುವುದು ಅರ್ಥವಾಗಿಹೋಗಿತ್ತು. ಶ್ರೀಪಾದ ಮಾತ್ರ ಇದ್ಯಾವುದರ ಪರಿವೆಯೇ ಇಲ್ಲದವನಂತೆ "ಕೂಸು ಹೂಸು ಬಿಟ್ಟಿತು. ಒಲೆಯ ಬೂದಿ ಹಾರಿತು. ಅಂಕೋಲೆ ಭಟ್ಟನಿಗೆ ಸುದ್ದಿ ಮುಟ್ಟಿತು" ಎಂದು ಹಾಡುತ್ತ ಅವಳಿಗೆ ಬಾವಿಯಿಂದ ನೀರು ಎತ್ತಿಕೊಡುತ್ತ, ತೆಂಗಿನಕಾಯಿ ಸುಲಿದುಕೊಡುತ್ತ ಹಿಂದೆಮುಂದೆ ಓಡಾಡಿಕೊಂಡಿದ್ದ.



ಆವತ್ತು ಶಾರದಾ ಸುನಂದಕ್ಕನ ಮನೆಗೆ ಬಂದಿದ್ದ ಸಮಯಕ್ಕೆ ಸರಿಯಾಗಿ ಸೊಸೈಟಿಯವರು ಅವಳ ಅಪ್ಪನನ್ನು ಹುಡುಕಿಕೊಂಡು ಬಂದಿದ್ದರು. ಪ್ರತಿಸಲ ಸಾಲದ ವಿಚಾರಣೆಗೆ ಬಂದಾಗಲೂ ಶಾರದಾ ತಾನೇ ಅವರ ಹತ್ತಿರ ಮಾತಾಡಿ ಕಳುಹಿಸಿ, ಅವರಿವರ ಮನೆಯಲ್ಲಿ ಕೆಲಸಮಾಡಿದ ಹಣದಿಂದ ಹೇಗೋ ಅಲ್ಪಸ್ವಲ್ಪ ಸಾಲ ತೀರಿಸುತ್ತಿದ್ದಳು. ರಾತ್ರಿ ಕುಡಿದಿದ್ದು ಇನ್ನೂ ಪೂರ್ತಿಯಾಗಿ ಇಳಿದಿರದಿದ್ದ ಅವಳ ಅಪ್ಪ ತನ್ನ ಸುತ್ತ ಏನು ನಡೆಯುತ್ತಿದೆಯೆನ್ನುವ ಖಬರೇ ಇಲ್ಲದೇ ಸೊಸೈಟಿಯವರ ಮೇಲೆ ಕೂಗಾಡಿದ್ದಲ್ಲದೇ, ಮಗಳನ್ನು ಹುಡುಕಿಕೊಂಡು ಶ್ರೀಪಾದನ ಮನೆಗೂ ಬಂದ. ಜಗಲಿಯ ಮೆಟ್ಟಿಲಿನ ಮೇಲೆ ಕುಳಿತು ಸುನಂದಕ್ಕನ ಕೂದಲು ಬಾಚುತ್ತಿದ್ದ ಶಾರದಾಳ ಜಡೆಯನ್ನು ತನ್ನ ಕೈಗೆ ಸುತ್ತಿಕೊಂಡು ಆಟವಾಡುತ್ತಿದ್ದ ಶ್ರೀಪಾದ, "ಶಾರದಾ ಮೂರಾರದಾ. ಆರದಾ ಕುಬಾರದಾ. ಕಸ್ತೂರಿ ಕಾರದಾ" ಎಂದು ಹಾಡುತ್ತ ಪ್ರಪಂಚ ಮರೆತಿದ್ದ. ಅದನ್ನು ನೋಡಿದ ಶಾರದೆಯ ಅಪ್ಪ "ಒಂದು ಮಗಳು ಡ್ರೈವರನ ಕಟ್ಟಿ ಓಡೋತು. ಇನ್ನೊಂದು ಮಗಳು ಹುಚ್ಚನ ಹಿಂದೆ ಬಿಜ್ಜು. ಬಡದು ಸಾಯಸ್ಬುಡ್ತಿ. ಇಂಥ ಮಕ್ಕ ಇದ್ದರೆಷ್ಟು ಬಿಟ್ಟರೆಷ್ಟು" ಎನ್ನುತ್ತ ಅಂಗಳದಲ್ಲಿ ಬಿದ್ದಿದ್ದ ತೆಂಗಿನಹೆಡೆ ಎತ್ತಿಕೊಂಡು ಇನ್ನೇನು ಶಾರದೆಗೆ ಹೊಡೆದೇಬಿಡುತ್ತಾನೆ ಎನ್ನುವಷ್ಟರಲ್ಲಿ ಶ್ರೀಪಾದ ಎದ್ದುಬಂದಿದ್ದು,



ಆವನ ತಲೆಗೆ ಹೊಡೆತ ಬಿದ್ದಿದ್ದು, ಶಾರದೆಯ ಅಪ್ಪನಿಗೆ ಕುಡಿದಿದ್ದೆಲ್ಲ ಒಂದೇ ಸಲಕ್ಕೆ ಇಳಿದು ಆಲ್ಲಿಂದ ಓಡಿಹೋಗಿದ್ದು ಎಲ್ಲ ಒಟ್ಟೊಟ್ಟಿಗೇ ಜರುಗಿದವು.

ಶಾರದಾ ಕೆಳಗಿನಕೇರಿಗೆ ಸುದ್ದಿಮುಟ್ಟಿಸಿ, ಶ್ರೀಪಾದನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ, ವಾಪಸ್ಸು ಮನೆ ತಲುಪುವಷ್ಟರಲ್ಲಿ ರಾತ್ರಿಯಾಗಿತ್ತು. ಮನೆಗೆ ಹೋಗಿ ಬೆಳಗ್ಗೆ ಬರುವುದಾಗಿ ಹೇಳಿ ಹೋದವಳು ಮತ್ತೆ ಊರಿನವರ ಕಣ್ಣಿಗೆ ಕಾಣಿಸಲೇ ಇಲ್ಲ. ಅವಳ ಅಪ್ಪ ಮುರ್ಡೇಶ್ವರದಲ್ಲಿದ್ದ ಅವರ ಹಳೆ ಸಂಬಂಧದ ಪೈಕಿ ಯಾರಿಗೋ ಮದುವೆ ಮಾಡಿ ಕಳುಹಿಸಿದ್ದಾನಂತೆ ಎಂದು ಕೆಲವರು, ಹೊನ್ನಾವರದ ಹತ್ತಿರ ಯಾರೋ ವಯಸ್ಸಾದವರನ್ನು ನೋಡಿಕೊಂಡು ಮನೆಗೆಲಸ ಮಾಡಿಕೊಂಡಿದ್ದಾಳಂತೆ ಎಂದು ಮತ್ಯಾರೋ ಮಾತನಾಡಿಕೊಂಡರು. ತನ್ನ ಕೆಲಸ ತಾನು ಮಾಡಿಕೊಳ್ಳುವಷ್ಟು ಸುಧಾರಿಸಿಕೊಂಡಿದ್ದ ಸುನಂದಕ್ಕ ಇದ್ದಕ್ಕಿದ್ದಂತೆ ಒಂದಿನ ರಾತ್ರಿ ತೀರಿಕೊಂಡಳು. ಆದಾಗಿ ಸುಮಾರು ಒಂದೂವರೆ ವರ್ಷ ಶ್ರೀಪಾದ ಊರಿನಲ್ಲೆಲ್ಲೂ ಕಾಣಿಸಿಕೊಳ್ಳಲಿಲ್ಲ. ಅಂಕೋಲೆಯಲ್ಲಿದ್ದ ಅಕ್ಕನ ಮನೆಯಲ್ಲಿದ್ದಾನೆಂದು ಸುದ್ದಿಯಾಯಿತು; ಶಾರದೆಯನ್ನು ಹುಡುಕಿಕೊಂಡು ಘಟ್ಟದ ಕೆಳಗೆ ಹೋಗಿದ್ದಾನೆಂಬ ಸುದ್ದಿಯೂ ಹರಿದಾಡಿತು. ಅವನು ವಾಪಸ್ಸು ಊರಿಗೆ ಬರುವ ಹೊತ್ತಿಗೆ ಶಾರದೆಯ ಅಪ್ಪನೂ ಕುಡಿದು ಕುಡಿದು ಪ್ರಾಣಬಿಟ್ಟಿದ್ದ. ಹಳೆಯ ಸಂಚಿಯ ತುಂಬಾ ಬಸ್ ಟಿಕೆಟ್ಟು, ವಿಳಾಸದ ಚೀಟಿ, ಯಾವುದೋ ಪೇಪರಿನ ತುಂಡುಗಳನ್ನು ತುಂಬಿಕೊಂಡು ತಿರುಗುತ್ತಿದ್ದ ಶ್ರೀಪಾದನಿಗೆ ತಲೆ ಕೆಟ್ಟಿದೆಯೆನ್ನುವ ಸುದ್ದಿ ಮಾತ್ರ ಖಾಯಂ ಆಯಿತು.

ಶ್ರೀಪಾದನ ವಿಷಯ ರಾಮಣ್ಣನಿಗೆ ಗೊತ್ತಿತ್ತಾದರೂ ಸಾತಜ್ಜಿಯವರೆಗೆ ತಲುಪಿರಲಿಲ್ಲ. ಒಡ್ಡೆತಲೆಯಲ್ಲಿ ಆಟವಾಡುತ್ತಿದ್ದ ಮಕ್ಕಳ ಹತ್ತಿರ "ಅಪ್ಪನ ಹತ್ರ ಸಂಚಿಮಳ್ಳು ಬತ್ತಾ ಇದ್ದ ಹೇಳ್ರ ಹೋಗ್ರ. ಒಂದ್ ಕರಿಎಲೆ ತಂಬಾಕು ಕವಳ ಜಡದ್ಬುಡದೆಯಾ" ಎನ್ನುತ್ತ ಸಂಚಿಮಳ್ಳು ಒಡ್ಡೆ ಇಳಿಯುತ್ತಿದ್ದರೆ, "ಸಂಚಿಮಳ್ಳು ಬಂದ ಸಂಚಿಮಳ್ಳು ಬಂದ" ಎನ್ನುತ್ತ ಮಕ್ಕಳು ಓಡಿಬಂದಿದ್ದರು. ಶ್ರೀಪಾದನೇ ಸಂಚಿಮಳ್ಳು ಎನ್ನುವ ಕಲ್ಪನೆಯೇ ಇರದಿದ್ದ ಸಾತಜ್ಜಿ ಇಷ್ಟು ವರ್ಷಗಳ ನಂತರ ಆವನನ್ನು ನೋಡಿದ್ದಕ್ಕೆ ಖುಷಿಪಡಬೇಕೋ, ಆವನ ಆವಸ್ಥೆಗೆ ಮರುಗಬೇಕೋ ಗೊತ್ತಾಗದೆ ಗೊಂದಲದಲ್ಲಿರುವಾಗಲೇ ಆವಳ ಹತ್ತಿರ ಬಂದವನೇ "ಸಾತಜ್ಜಿ ತಗಳೇ ನಿನಗೆ ಹೇಳಿ ಸ್ವಲ್ಪ ಜೀರಿಗೆಮಿಡಿ" ಎನ್ನುತ್ತ ಸಂಚಿಯ ತುಂಬ ತುಂಬಿಕೊಂಡಿದ್ದ ಮಾವಿನಕಾಯಿಗಳನ್ನು ಅವಳ ಮಡಿಲಿಗೆ ಸುರಿದ. ಎಮ್ಮೆಕರದ ಬಾಲ ಹಿಡಿದುಕೊಂಡು ಅಂಗಳದ ತುಂಬಾ ಓಡುತ್ತಿದ್ದ ಶ್ರೀಪಾದನ ನೆನಪಾಗಿ ಸಾತಜ್ಜಿ "ಬಾ ಒಳಗೆ. ಊಟ ಮಾಡಲಕ್ಕಡಾ. ಕೈಕಾಲು ತೊಳ್ಕ" ಎಂದು ಹೊಟ್ಟೆತುಂಬ ಊಟ ಬಡಿಸಿದ್ದಳು. ವರ್ಷಗಳಿಂದ ಊಟವನ್ನೇ ಕಾಣದಿರುವವನಂತೆ ಗಬಗಬ ತಿನ್ನುತ್ತಿದ್ದವನನ್ನು "ಇಷ್ಟು ವರ್ಷ ಎಲ್ಲಿದ್ದೆ ಮಾರಾಯಾ? ಅಪ್ಪಯ್ಯ ಆರಾಮಿದ್ನ?" ಎಂದು ಕೇಳಿದ್ದಕ್ಕೆ, "ದೊಡ್ಡ ಆಗ್ತಾ ಇದ್ದಿದ್ದೇ ಮಾರಾಯ್ತಿ. ದೊಡ್ಡಪ್ಪದು ಬ್ಯಾಡದನೇ? ಅಪ್ಪಯ್ಯ ಇಲ್ಲೆ, ಹೋದ ಅಂವ" ಎನ್ನುತ್ತ ಕೈತೊಳೆಯಲು ಎದ್ದುಹೋಗಿದ್ದ.

ಆಲ್ಲಿಂದ ಶುರುವಾಗಿತ್ತು ಸಂಚಿಮಳ್ಳು ಮತ್ತು ಸಾತಜ್ಜಿಯ ಒಡನಾಟ. ಅವನು ಬಣ್ಣಕಟ್ಟಿ ಹೇಳುತ್ತಿದ್ದ ಊರಮೇಲಿನ ಕತೆಗಳನ್ನು ಸಾತಜ್ಜಿ ನಂಬಿದಂತೆ ನಟಿಸುತ್ತ ಕೇಳಿಸಿಕೊಳ್ಳುತ್ತಿದ್ದಳು. ಮುಗಿದುಹೋಗುತ್ತಿರುವ ತನ್ನ ಬದುಕಿಗೆ ಕೊಂಚ ಸಡಗರ ತುಂಬಬಲ್ಲವನೆಂದರೆ ಅದು ಸಂಚಿಮಳ್ಳು ಮಾತ್ರ ಎಂದು ಅವಳು ಬಲವಾಗಿ ನಂಬಿಕೊಂಡಿದ್ದಳು. ಅವನು ಬರದೇ ಬಹಳ ದಿನಗಳಾದರೆ ದೂರ್ವೆ ಕೊಯ್ಯುವ ನೆವದಲ್ಲಿ ಒಮ್ಮೆ ಒಡ್ಡೆತಲೆಗೆ ಹೋಗಿ ಕಣ್ಣುಹಾಯಿಸಿ, "ಇವತ್ತೂ ಬತ್ನಿಲ್ಯಕು" ಎನ್ನುತ್ತ ನಿರಾಸೆಯಿಂದ ಹಿಂದಿರುಗುತ್ತಿದ್ದಳು. "ನಿಂಗೂ ತಲೆ ಕೆಟ್ಟಿದ್ದನೆ, ಆ ಮಳ್ಳು ಬಪ್ಪದು ಕಾಯ್ತಾ ಕುತ್ಗತ್ತೆ?" ಎಂದು ರಾಮಣ್ಣ ಬೈಯುತ್ತಿದ್ದರೂ ಕೇಳಿಸದವಳಂತೆ "ನೆಲೆ ಇಲ್ಲದ ಕಾಯ ಎಲುವಿನ ಹಂದರ. ಬಲದಿ ಸುತ್ತಿದ ಚರ್ಮದ ಹೊದಿಕೆ" ಎಂದು ತನ್ನ ಪಾಡಿಗೆ ತಾನು ಹಾಡುತ್ತ ಕೊಟ್ಟಿಗೆಗೋ, ಅಟ್ಟಕ್ಕೋ ಹೋಗಿಬಿಡುತ್ತಿದ್ದಳು. ಪ್ರತಿಸಲ ಸಂಚಿಮಳ್ಳು ವಾಪಸ್ಸು ಹೋಗುವಾಗಲೂ, "ಲಗೂ ಬಾ. ಇನ್ನೊಂದ್ಸಲ ನೀ ಬಪ್ಪತನಕ ಆನು ಇರ್ತ್ನ ಇಲ್ಯ" ಎನ್ನುತ್ತ ಬೇಸರದಿಂದಲೇ ಬೀಳ್ಕೊಡುತ್ತಿದ್ದಳು.

ಈ ಸಲ ಸಂಚಿಮಳ್ಳು ಸಾತಜ್ಜಿಗೆಂದೇ ಸುದ್ದಿಯೊಂದನ್ನು ತಂದಿದ್ದ. "ನೀ ನಂಬ್ತಿಲ್ಲೆ ಸಾತಜ್ಜಿ. ಶಾರದೆ ಕೆರೆಗದ್ದೆ ಜೋಯ್ಸರ ಮನೆಗೆ ಬಂದಿತ್ತಡಾ. ಅದಕ್ಕೆ ಒಂದು ಮಗನೂ ಇದ್ನಡಾ "ಎನ್ನುತ್ತ ಶಾರದಾ ತನ್ನನ್ನೇ ನೋಡಲು ಬಂದಷ್ಟು ಸಂಭ್ರಮದಲ್ಲಿದ್ದ. "ನಿನ್ನ ಅಪ್ಪನ ಹತ್ರನೂ ಹೇಳಿದಿದ್ದಿ ನಿಂಗೊಂದು ತಾಯತ ಕಟ್ಟಸು ಹೇಳಿ. ಅಂವ ಎನ್ನ ಮಾತು ಕೇಳಿದ್ನಿಲ್ಲೆ. ನಂಬ್ಕೆ ಮುಖ್ಯ ಮನಷಂಗೆ" ಎಂದು ಚಾ ಮಾಡಿಕೊಟ್ಟಿದ್ದಳು ಸಾತಜ್ಜಿ. ಶಾರದೆಯ ಸುದ್ದಿ ಹೇಳಲೆಂದೇ ಇಷ್ಟು ದೂರ ಬಂದಿದ್ದವನಂತೆ ಚಾ ಕುಡಿದವನೇ ಸಂಚಿಯಲ್ಲಿದ್ದ ಸೀತಾಫಲ ತೆಗೆದು ಸಾತಜ್ಜಿಯ ಕೈಯಲ್ಲಿಟ್ಟು ಹೊರಟುನಿಂತ. "ಸಂಚಿಮಳ್ಳು ಹೋಗಡ್ದ ಉಳ್ಕಳ" ಎಂದು ಕೈಹಿಡಿದು ಎಳೆಯುತ್ತಿದ್ದ ಮಕ್ಕಳ ಕೈಗೆ ಎರಡೆರಡು ರಾಜನೆಲ್ಲಿಕಾಯಿ ಕೊಟ್ಟು, ಬಿಟಿಮಕ್ಕಳಿರಾ ಮಕ್ಕಳಿರಾ ಮಕ್ಕಿಗದ್ದೆಗೆ ಹೋಗ್ಬ್ಯಾಡಿ. ಹಾವು ಚೇಳು ಕಚ್ತಾವೆಬಿಟಿ ಎಂದು ಜೋರಾಗಿ ಹಾಡುತ್ತ ಸಂಚಿಯೊಂದಿಗೆ ಒಡ್ಡೆತಲೆ ಹತ್ತಲಾರಂಭಿಸಿದ.



ಮೂಲತಃ ಉತ್ತರಕನ್ನಡ ಜಿಲ್ಲೆಯ ಶಿರಸಿಯವರಾದ ಅಂಜನಾ ಹೆಗಡೆ ಸದ್ಯ ಬೆಂಗಳೂರು ನಿವಾಸಿ. ಕಥೆ, ಕವಿತೆ, ಪ್ರಬಂಧ, ಅಂಕಣಗಳನ್ನು ಬರೆಯುತ್ತಾರೆ. ಇವರ ಕವನ ಸಂಕಲನ, ಪ್ರಬಂಧ ಸಂಕಲನ ಪ್ರಕಟಗೊಂಡಿದೆ. ಸುಬ್ರಾಯ ಚೊಕ್ಕಾಡಿ ಅವರ ಅನುಭವ ಕಥನ 'ಕಾಲದೊಂದೊಂದೇ ಹನಿ' ನಿರೂಪಿಸಿದ್ದಾರೆ.

ನಗೆ ಮಂದಾರ

ಶೈಲೇಶ್ ಉಜಿರೆ





ಚಿತ್ರ ಮಾತಾಡಿದೆ..



ಚಿತ್ರ: ಸೌಮ್ಯಾ ಬೀನಾ

ಒಂದು ಚಿತ್ರ ನೂರಾರು ಕತೆಗಳನ್ನು ಹೇಳುತ್ತದೆಯಂತೆ. ನೋಡುಗರ ದೃಷ್ಟಿಯ ಮೇಲೆ ಅವು ಬದಲಾಗುತ್ತಾ ಹೋಗುತ್ತವೆ. ಈ ಮೇಲಿನ ಚಿತ್ರವನ್ನು ನೋಡಿದಾಗ ನಿಮ್ಮ ಮನಸ್ಸಿನಲ್ಲಿ ಬರುವ ಯೋಚನೆಗಳಿಗೆ ಕತೆ ಅಥವಾ ಕವನದ ರೂಪವನ್ನು ಕೊಡಿ. ಆಯ್ದ ಚಂದದ ಕತೆ, ಕವನಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ.

ಕಳಿಸುವಿರಲ್ಲಾ?

ಪದ್ಯವನ್ನು ನಮ್ಮ ಈ ಮೇಲ್ ವಿಳಾಸ editormandara@gmail.com
ಅಥವಾ ವಾಟ್ಸಪ್ ನಂಬರ್ 9353223669 ಗೆ ಕಳುಹಿಸಬಹುದು

ಕತೆ, ಕವನಗಳನ್ನು ಕಳುಹಿಸಲು ಕೊನೆಯ ದಿನಾಂಕ


07 ಮಾರ್ಚ್ 2023

ಪದ ಮಂದಾರ

ರಚನೆ: ಸ್ಮಿತಾ ರಾಘವೇಂದ್ರ

ಮೇಲಿಂದ ಕೆಳಕ್ಕೆ

1.ಬರಿದೆ ಅವಮಾನವಾದ ನೋವು (3)
2.ಅಂದಿಗೆ ಧರಿಸಿ ಗೆಲ್ಲು (2)
3.ಅರಿಕೇಸರಿಯ ಆಸ್ಥಾನದಲ್ಲಿದ್ದ ಆದಿಕವಿ (2)
4.ಮಾಯೆಯಂತೆ ಬಂದ ಜೀವ ಹಾನಿ (3)
6.ಬಿಹಾರದಲ್ಲಿನ ಪ್ರಾಚೀನ ಉನ್ನತ ವ್ಯಾಸಂಗ ಕೇಂದ್ರ (3)
8.ಮಡಿಯಲ್ಲಿ ಮಂದಿ ಬರಯುವ ಉಪ್ಪರಿಗೆ (5)
9.ಅತಿಯಾಗಿ ತೋರಿದ ಮೃದುತನ (5)
11.ಕವಚ ತೊಟ್ಟು ಶರಣ ಬರೆದ ಕಾವ್ಯ (3)
12.ವಿನಯವಾಗಿ ಅರಳಿಸಿದ ಕಣ್ಣು (3)
16.ಅನುಗ್ರಹಿಸಿ ಪೂರೈಸಿದ ಇಷ್ಟಾರ್ಥ (3)
17.ಗಣೇಶನ ಪೂಜೆಯೊಂದಿಗೆ ಶುರುವಾದ ಕಾರ್ಯ (3)
19.ಅಂಬರದ ಕಡೆ ಬಾಣ ಬಿಟ್ಟ ಬೇಡ (3)
20.ಮಹಾಸಂತನಲ್ಲಿಯೂ ಅಡಗಿದ ಜಾತಿ (2)
21.ನದಿಯಲ್ಲಿ ಬಿಟ್ಟ ಬೆಲೆಬಾಳುವ ವಸ್ತು (2)



ಎಡದಿಂದ ಬಲಕ್ಕೆ

1.ಮುಗಿದ ಕಾಲದ ಕೊಡುಗೆ (4)
3.ವಂಚನೆಗೆ ಸಿಗುವ ಲಾಂಚನ (4)
5.ಹೊಸ ಹೊಳಪಿನಲಿ ದಿನವೂ ಬರುವ ಇನ (3)
7.ಮರೆಯಲ್ಲಿ ನಿಂತ ಒಡತಿ (2)
9.ಅಳೆದು ತೂಗಿ ಕೊಡುವ ಪ್ರಮಾಣ (2)
10.ಹರೆಯದ ಮುಖದಲ್ಲಿ ಕುದುರೆ ಕಂಡಿದೆ (5)
13. ಜೀವಕ್ಕೆ ಹಾನಿ ಮಾಡುವ ಸೇದುವ ಬತ್ತಿ (2)
14.ವಿಭೂತಿ ಧರಿಸಿದ ಸರ್ವವ್ಯಾಪಿ (2)
15.ಮನಸಿಗೆ ಹೊಳೆದದ್ದು ಹೊಚ್ಚ ಹೊಸದು (5)
17.ಆಗ ತಾನೆ ಬಂದು ನಿಂತ ಗಜ (2)
18.ಯುದ್ಧದಲಿ ಸಿಕ್ಕ ಗೆಲುವು (2)
20.ಪಂಚಮಂತ್ರ ಬಾಣ ಬಿಟ್ಟವ (3)
22.ಬಲವಂತದಲಿ ಬಂದ ದೇವರು (4)
23.ಗೋಡೆಗೆ ಹಚ್ಚಿದ ಕಾಲ ಸೂಚಕ (4)



ಪ್ರವಾಸವೆಂಬ ಅರಿವಿನ ಯಾತ್ರೆ



ತಿರುಗಾಟ
ಸೌಮ್ಯಾ ಬೀನಾ

> ಪ್ರವಾಸ ಎಂಬುದು ಕೇವಲ ನಮ್ಮ ಕಥೆಯಲ್ಲ, ಪ್ರವಾಸದ ಸಮಯದ ಆಗುಹೋಗುಗಳು, ಹಾದಿಯುದ್ದಕ್ಕೂ ಸಿಗುವ ಜನರ ಕಥೆಗಳು, ಸನ್ನಿವೇಶಗಳು ಒಂದೊಂದು ಕಥೆಯನ್ನು ಅದರ ಜೊತೆಗೆ ಅನೇಕಾನೇಕ ಅನುಭವದ ಪಾಠಗಳನ್ನು ಕಲಿಸಿ ಹೋಗುತ್ತದೆ. ಪ್ರವಾಸದಿಂದ ಒಳ್ಳೊಳ್ಳೆಯ ನೆನಪುಗಳ ಬುತ್ತಿ ನಮ್ಮದಾಗುತ್ತದೆ.

ಪ್ರಕೃತಿಯನ್ನೇ ಸಂಪರ್ಕ ಕೊಂಡಿಯಾಗಿಸಿಕೊಂಡು, ಕೇವಲ ಮರಗಳ ಬೇರುಗಳಿಂದ ನಿರ್ಮಿಸಿರುವ, ನೂರಾರು ವರ್ಷಗಳಷ್ಟು ಹಳೆಯದಾದರೂ ಸಧೃಡವಾಗಿ ಚಾಲ್ತಿಯಲ್ಲಿರುವ, ಮೇಘಾಲಯದ ಲಿವಿಂಗ್ ರೂಟ್ ಬ್ರಿಡ್ಜ್ ನೋಡುವಾಗ, ಯಾವ ಕ್ಷಣಕ್ಕಾದರೂ ಮೈಮೇಲೆ ಬಂಡೆಕಲ್ಲುಗಳು ಉರುಳಬಹುದಾದ, ಕಡಿದಾದ ಹಾದಿಗಳ ಮಧ್ಯೆ ಪ್ರಯಾಣ ಬೆಳೆಸಿ, ಹಿಮಾಲಯ ಶಿಖರದ ಮಧ್ಯೆ ಇರುವ ದೇವಭೂಮಿ ಬದರಿಯ ತಲುಪಿದಾಗ, ಹಿಮಾಲಯದ ಶೃಂಗಗಳಿಂದ ಬೀಸುವ ಶೀತಗಾಳಿ, ಜಿಟಿಜಿಟಿ ಮಳೆ, ಕೊರೆವ ಚಳಿಯ ಮಧ್ಯೆ, ಪ್ರತಿ ಉಸಿರಿನ ಪ್ರಾಮುಖ್ಯತೆ ಅರಿವಾಗುವಂತಹ ಚಾರಣ ಮಾಡಿದಾಗ, ರಾಜಸ್ಥಾನದ ಯಾವುದೋ ಒಂದು ಗಲ್ಲಿಯಲ್ಲಿ ಹಿರಿಯ ಜೀವವೊಂದು ಕಾಮೈಚಾ ವಾದ್ಯವನ್ನು ಇಂಪಾಗಿ ನುಡಿಸುತ್ತಿದ್ದರೆ, ಅದ ಕೇಳಿ ಉರಿ-ಬಿಸಿಲು ಸೆಕೆ-ಸುಸ್ತು ಯಾವುದೂ ತೋಚದಂತೆ ಮೈಮರೆತು ಹೋದಾಗ, ಭಾಷೆ ಬಾರದ ಊರು ಬಾಲಿಯಲ್ಲಿ ಆಗ ತಾನೇ ಕಲಿತ ಪದಗಳ ಬಳಸಿ, ಜನರೊಂದಿಗೆ ಮಾತನಾಡುತ್ತಾ, ಬಾಡಿಗೆ ಸ್ಕೂಟರ್ ತೆಗೆದುಕೊಂಡು ಊರೆಲ್ಲ ಸುತ್ತಿದಾಗ, ಭಾರತದ ತುತ್ತತುದಿಯಲ್ಲಿ ಕನ್ಯಾಕುಮಾರಿಯ ಅಂಚಿನಲ್ಲಿನ ಸಮುದ್ರ ತೀರದೆಡೆ ನಡೆದು, ಸಕಲ ಜೀವಿಗಳಲ್ಲಿಯೂ ಜೀವ ತುಂಬುವ ಭಾಸ್ಕರನಿಗೆ ಸೂರ್ಯನಮಸ್ಕಾರದೊಂದಿಗೆ ಕೃತಜ್ಞತೆ ಹೇಳುವಾಗ, ನೇಪಾಳದ ಪಶುಪತಿನಾಥ ದೇವಾಲಯದ ಪಕ್ಕದಲ್ಲಿರುವ ಅಂತ್ಯಕ್ರಿಯೆ ಘಾಟ್‌ನಲ್ಲಿ ಸಂಜೆ ಕುಳಿತು ಮೃತರ ಕೊನೆಯ ಪಯಣ, ಕುಟುಂಬದವರಿಂದ ಅಂತಿಮ ವಿದಾಯ ನೋಡುವಾಗ, ಲೋಣಾವಲಾದಲ್ಲಿ ರಸ್ತೆ ಬದಿಯ ಪಾವ್‌ಬಾಜಿಯ ಸವಿಯಲ್ಲಿ ಮುಳುಗಿ ಹೋದಾಗ, ತಿರುಪತಿಯ ಲಡ್ಡುವಿಗೆ ಕ್ಯೂ ನಿಂತು ಪಡೆದು ತಿಂದಾಗ, ಗೋಕರ್ಣದ ದೇವಸ್ಥಾನದಲ್ಲಿ ಕಳೆದು ಹೋಗಿ, ಒಂದು ಗಂಟೆಯ ನಂತರ, ದೇವಸ್ಥಾನದ ಗರ್ಭಗುಡಿಯಲ್ಲಿ ಗಂಧ ತೇಯುತ್ತಾ ಕುಳಿತ ಪೋರಿಯಾಗಿದ್ದೆ ಎಂದು ಮಗಳಿಗೆ ನನ್ನ ಬಾಲ್ಯದ ಕಥೆ ಹೇಳುವಾಗ, ಬೆಳಗಿನ ಜಾವ ನಾಲ್ಕು ಘಂಟೆಗೆ ಎದ್ದು ತೀಸ್ತಾ ನದಿಯ ಹತ್ತಿರದ ನಿವಾಸಿಗಳಾಗಿ, ನೆರೆ ಬರುವಾಗ, ಊರಿಗೆ ಊರೇ ಎತ್ತಾವಳಿಯಾಗಿ, ಆಗ ತಾನೇ ಹುಟ್ಟಿದ ಹಸಿಗೂಸನ್ನು ಎತ್ತಿಕೊಂಡು ಗುಳೆ ಹೋಗಬೇಕಾಗುವ ಪರಿಸ್ಥಿತಿಯ ಕಥೆಗಳನ್ನು ಸಿಕ್ಕಿಂನ ಡ್ರೈವರ್ ಇಂದ ಕೇಳುವಾಗ, ಧರ್ಮಸ್ಥಳಕ್ಕೆ ಹೋಗುವ ಬಸ್ಸಿನಲ್ಲಿ ಕುಳಿತು, ತರಕಾರಿ ಮಾರುವ ಅಪ್ಪನೊಬ್ಬ, ತನ್ನ ಮಗುವಿನ ಹಣೆಗೆ ಮುತ್ತಿಕ್ಕಿ ತಕ್ಕಡಿಯ ಪಕ್ಕದ ಗೋಣಿಚೀಲದ ಮೇಲೆ ಮಲಗಿಸಿಕೊಂಡು ಬಿಸಿಲು ಮುಖಕ್ಕೆ ಹೊಡೆಯದಂತೆ ತಾನು ಅಡ್ಡಲಾಗಿ ಕುಳಿತುಕೊಳ್ಳುವ ಮಮಕಾರ ಕಾಣುವಾಗ, ಕಾಳಹಸ್ತಿಯ ಮೂಲೆಯ ಪುಟ್ಟ ಮನೆಯೊಂದರಲ್ಲಿ ಹೆಂಗಸರೆಲ್ಲ ಸೇರಿ ಹಾಡಿಕೊಂಡು, ಸುಪ್ರಸಿದ್ಧ ಕಲಂಕಾರಿ ಚಿತ್ತಾರಗಳನ್ನು, ಬಿದಿರಿನ ಕುಂಚದಿಂದ ಬಣ್ಣಗಳ ಸೀರೆಗೆ ಇಳಿಸುವ ಕಲಾತ್ಮಕತೆಯನ್ನು ಕಣ್ತುಂಬಿಕೊಂಡಾಗ, ಪ್ರವಾಸೋದ್ಯಮವೇ ಹೊಟ್ಟೆಪಾಡಾದ ದಾರ್ಜೀಲಿಂಗ್ನಲ್ಲಿ, ಒತ್ತಿಕೊಂಡು ಪಟ್ಟಣವನ್ನು ಕಟ್ಟಿಕೊಂಡು, ನಿಸರ್ಗವನ್ನು ಬಗೆದು ಕಸದ ಬುಟ್ಟಿಯನ್ನಾಗಿ ಮಾಡಿಕೊಂಡ ಬಗೆಗೆ ವ್ಯಥೆ ಪಟ್ಟುಕೊಂಡಾಗ, ಜಬರ್ದಸ್ತ್ ಬಟ್ಟೆ ಎಂಬ ಮಾರಾಟಗಾರನ ಬಣ್ಣದ ಮಾತಿಗೆ ಮರುಳಾಗಿ, ಚೆಂದದ ಬಟ್ಟೆ ತಂದು, ಮರುದಿನವೇ ಅದು ನೆನೆಸಿದ ನೀರಿನ ಬಕೇಟಿನಲ್ಲಿ ಬಣ್ಣವನ್ನೆಲ್ಲ ಬಿಟ್ಟುಕೊಟ್ಟ ಬೆಲೆಗೆ ಮೋಸ ಹೋಗಿ ಮುಖ ಪೆಚ್ಚಾದಾಗ..



ನನಗೆ ಅನಿಸುವುದು, ಈ ಪ್ರವಾಸ ಎಂಬುದು ನಾವು ಪಠ್ಯ ಪುಸ್ತಕದಲ್ಲಿ ಓದದ, ಟಿವಿಯಲ್ಲಿ ಕಾಣದ, ದಿನನಿತ್ಯಕ್ಕೆ ಕಾಣಸಿಗದ ಅದೆಷ್ಟು ಬಗೆಯ ಜೀವನದ ಅನುಭೂತಿಗಳನ್ನು, ಕೌಶಲ್ಯಗಳನ್ನು, ಅನುಭವದ ಮೂಲಕ ತೋರಿಸಿಕೊಡುತ್ತದೆ ಎಂದು!

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಬೆಳವಣಿಗೆಯಾದಂತೆ ಜನರ ಪ್ರವಾಸದ ಹುರುಪು ಹೆಚ್ಚಿದೆ. ಈಗಂತೂ ಅನೇಕಸ್ಥಳಗಳಿಗೆ ನೂರಾರು ಬಗೆಯ ಪ್ಯಾಕೇಜು ಟೂರ್‌ಗಳ ವ್ಯವಸ್ಥೆ ಲಭ್ಯವಿದೆ. ಸ್ನೇಹಿತರೊಡನೆ, ಕುಟುಂಬದವರೊಡನೆ ಸುತ್ತಾಟ ಮಾಡಲೆಂದು ಯಾವುದೊ ಒಂದೆರಡು ಆಕರ್ಷಕ ಸ್ಥಳಗಳಿಗೆ ವೆಬ್‌ಸೈಟ್ ಮೂಲಕ ಪ್ಯಾಕೇಜು ಬುಕಿಂಗ್ ಮಾಡುವುದು, ಟ್ರಿಪ್ ಏಜೆನ್ಸಿಯವರು ಗೊತ್ತು ಮಾಡಿರುವ ಅವೇ ನಾಲ್ಕೈದು ಪ್ರಸಿದ್ಧ ಸ್ಥಳಗಳಿಗೆ ಹೋಗಿ, ಒಂದಷ್ಟು ಸೆಲ್ಫಿ ತೆಗೆದು, ಸೋಶಿಯಲ್ ಮೀಡಿಯಾಕ್ಕೆ ಅಪ್ಲೋಡ್ ಮಾಡಿದರೆ ನಮ್ಮ ಟ್ರಿಪ್ ಸಕ್ಸೆಸ್ ಆಯಿತು ಎಂಬುದು ಇತ್ತೀಚಿಗೆ ಜನರ ಭಾವನೆಯಾಗಿ ಹೋಗಿದೆ. ಆದರೆ ಪ್ರವಾಸ ಎಂಬುದು ಕೇವಲ ಒಂದು ಟ್ರೆಂಡ್ ಆಗದೇ ಕೇವಲ ತೋರ್ಪಡಿಕೆಯಾಗದೆ, ಪ್ರತಿ ಗಳಿಗೆಯನ್ನು ನಾವು ನಮ್ಮೊಂದಿಗಿರುವ ಜನರೊಡನೆ ಹೊಂದಿಕೊಂಡು, ಹೋದ ಜಾಗದಲ್ಲಿನ ವೈವಿಧ್ಯತೆ, ಜನಸಾಮಾನ್ಯರ ಯೋಚನಾ ಲಹರಿಯನ್ನು ಅರಿಯುವಂತಹ ಪಯಣವಾಗಬೇಕು. ಹೌದು, ಪ್ರವಾಸ ಪಯಣವಾಗಿರಬೇಕು!


ಪ್ರವಾಸ ಏಕೆ ಬೇಕು?

ಜೀವನದ ದಿನನಿತ್ಯದ ಜಂಜಾಟ, ಕೆಲಸ, ವಿದ್ಯಾಭ್ಯಾಸ, ಹೀಗೆ ಬಿಡುವಿಲ್ಲದ ಬದುಕು, ಒಂದೇ ಬಗೆಯ ದಿನಚರಿಯಿಂದ ಬೇಸತ್ತು ಮನಸ್ಸು ಒತ್ತಡಗೊಂಡಾಗ, ವಿರಾಮವೊಂದನ್ನು, ಬದಲಾವಣೆಯನ್ನು ಬಯಸುವುದು ಸಹಜ. ಇಂತಹ ಬದಲಾವಣೆಗಳಲ್ಲಿ ಮನಸ್ಸಿಗೆ ಮುದ ನೀಡುವಂತಹ ಪ್ರವಾಸ ಕೈಗೊಂಡು ನಿಸರ್ಗದೊಂದಿಗೆ ಬೆರೆಯುತ್ತಾ, ಕುಟುಂಬ, ಸ್ನೇಹಿತರು ಮತ್ತು ಆಪ್ತರೊಡನೆ ಸಮಯ ಕಳೆಯುವುದು ಕೂಡ ಹಲವರ ಅಚ್ಚುಮೆಚ್ಚಿನ ಹವ್ಯಾಸಗಳಲ್ಲಿ ಒಂದು. ಒಬ್ಬೊಬ್ಬರ ಆಸೆ ಒಂದೊಂದು ರೀತಿಯದ್ದಾಗಿರುತ್ತದೆ. ಸಂಸ್ಕೃತಿ, ಸಾಹಿತ್ಯ, ಮನೋರಂಜನೆ, ಐತಿಹಾಸಿಕ ಸ್ಥಳಗಳ ಕುರಿತಾದ ಆಕರ್ಷಣೆ, ಪ್ರಕೃತಿ ವೀಕ್ಷಣೆ, ಚಾರಣ, ವಾಹನ ಸವಾರಿ, ಸಮುದ್ರ ತೀರದ ಮೋಹ ಹೀಗೆ ಹತ್ತು ಹಲವು ಬಗೆಯಲ್ಲಿ ನಮ್ಮ ಆಸಕ್ತಿಗೆ ತಕ್ಕಂತೆ ಹೊಸ ಅನುಭವಗಳ ಪಡೆಯಲೆಂದು ನಾವು ಚಿಕ್ಕ ಪುಟ್ಟ ಪ್ರವಾಸಗಳನ್ನು ಮಾಡುತ್ತಿರುತ್ತೇವೆ. ಆದರೆ ಪ್ರವಾಸದ ಮೂಲಕ ನಾವು ಬೇರೆಯವರಿಂದ, ಬೇರೆಯವರು ನಮ್ಮಿಂದ ಪಡೆಯುವುದೂ ಕೂಡ ಸಾಕಷ್ಟಿರುತ್ತದೆ. 'ಕೋಶ ಓದಿ ನೋಡು; ದೇಶ ಸುತ್ತಿ ನೋಡು' ಎನ್ನುವ ಮಾತಿನಂತೆ, ಪ್ರವಾಸಗಳು, ಅನುಭವಗಳು ನಮಗೆ ಪ್ರತಿ ಗಳಿಗೆಯೂ ಹೊಸತೊಂದು ಜೀವನ ಮೌಲ್ಯವನ್ನು, ಪಾಠವನ್ನು, ಜೀವಿಸುವ ಸಂಭ್ರಮವನ್ನು ನೀಡುತ್ತದೆ.

ಕೆಲವರಿಗೆ ತಮ್ಮ ವೈಯುಕ್ತಿಕ ಕಾರಣಕ್ಕಾಗಿ ಪ್ರವಾಸ ಮಾಡುವ ಅನಿವಾರ್ಯತೆಯಿದ್ದರೆ, ಕೆಲವರಿಗೆ ಪ್ರವಾಸ ಒಂದು ಹವ್ಯಾಸವಾಗಿರುತ್ತದೆ. ಬೆಟ್ಟ ಗುಡ್ಡ ಹತ್ತುವ ಸಾಹಸ ಕೆಲವರ ಆಸಕ್ತಿಯಾದರೆ, ಮನಸ್ಸು ತೋಚಿದೆಡೆಗೆ ಗಾಡಿ ಓಡಿಸಿಕೊಂಡು ಊರೂರು ಸುತ್ತುವ ಹುಚ್ಚು ಇನ್ನೊಬ್ಬರದು. ಇನ್ನು ಮಕ್ಕಳಿಗಾಗಿ ಪ್ರಾಣಿ-ಪಕ್ಷಿಗಳನ್ನು, ನೆಲ-ಜಲ, ಆಕರ್ಷಣೀಯ ಆಟಗಳ ಕುರಿತಾದ ಸ್ಥಳಗಳಿಗೆ ಭೇಟಿ ನೀಡಿ ಅವರನ್ನು ಸಂತೋಷ ಪಡಿಸುವ ಉದ್ದೇಶಕ್ಕೆ ಕೆಲವರು ಫ್ಯಾಮಿಲಿ ಟ್ರಿಪ್ ಮಾಡಿದರೆ, ಬ್ಯುಸಿಯಾದ ಜೀವನದಲ್ಲಿ ಎಷ್ಟೋ ಸಮಯ ಭೇಟಿಯಾಗದೇ ಇದ್ದ ಗೆಳೆಯರೆಲ್ಲ ಒಂದೆಡೆ ಸೇರಿ ತಮ್ಮೆಲ್ಲ ಕಥೆಗಳನ್ನು ಹೇಳುತ್ತಾ ಪಟ್ಟಾಂಗ ಹೊಡೆಯಲೆಂದೇ ಪ್ರವಾಸ ಕೈಗೊಳ್ಳುವವರು ಒಂದಷ್ಟು ಜನ. ಒಂದು ದಿನದ ಮಟ್ಟಿಗೆ ಮನೆಯಿಂದ ಹೊರಗೋಗಿ ಹತ್ತಿರದ ಹೊಸ ಸ್ಥಳಕ್ಕೆ ಭೇಟಿ ನೀಡಿ ಸಂತಸ ಪಡಲು ಇಷ್ಟಪಡುವ ಜನ ಒಂದು ಕಡೆಯಾದರೆ, ತಿಂಗಳುಗಟ್ಟಲೆ ದೇಶಾಂತರ ಹೋಗಿ ಅಲ್ಲಿನ ಭೌಗೋಳಿಕ, ಪ್ರಾದೇಶಿಕ, ಸಾಂಸ್ಕೃತಿಕ, ವ್ಯಾವಹಾರಿಕ, ಐತಿಹಾಸಿಕ, ವೈಜ್ಞಾನಿಕ, ವಿಷಯಗಳ ಕುರಿತಾದ ಅಧ್ಯಯನ ನಡೆಸಿ,ನೂತನ ಅನುಭವಗಳಿಂದ ಕಲಿಯುವ ಉನ್ಮಾದಕ ಜನರು ಇನ್ನೊಂದೆಡೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಪ್ರವಾಸವೆಂಬುದು ನಾವು ನಮ್ಮ ಹಾಯ್ನೆಲೆ ಯಿಂದ ಹೊರ ಬಂದು, ಪ್ರತಿ ಕ್ಷಣವೂ ದೊರೆಯುವ ಅವಕಾಶಗಳು ಅಥವಾ ಸವಾಲುಗಳನ್ನು ಸ್ವೀಕರಿಸಿ, ಆ ಸಂದರ್ಭಕ್ಕೆ ನಮ್ಮನ್ನು ನಾವೇ ಒಗ್ಗಿಸಿಕೊಂಡು ಸಂತೋಷ ಪಡುವ ಒಂದು ಜೀವನ ಕಲೆ. ಪ್ರವಾಸ ಮಾಡುವುದೆಂದರೆ ನಮ್ಮಂತಸ್ತಿನ ಹಿರಿಮೆಯ ತೋರ್ಪಡಿಕೆಯಲ್ಲ – ಅದೊಂದು ಅವಿರತ ಕಲಿಕೆಯ ಅನಾವರಣ!

ಯಶಸ್ವಿ ಪ್ರವಾಸದ ತಯಾರಿ ಮತ್ತು ಪ್ರವಾಸಿಗರ ಕರ್ತವ್ಯಗಳು

ಯಾವುದೇ ಆಕರ್ಷಣೀಯ ಸ್ಥಳವೂ, ಜನರು ಭೇಟಿ ನೀಡಲು ಯೋಗ್ಯವಾಗಿದ್ದು, ಮನರಂಜನೆ, ವಿರಾಮ ಅಥವಾ ವ್ಯಾಪಾರದ ಉದ್ದೇಶದಿಂದ ಕೂಡಿದ್ದು, ಆ ಪ್ರದೇಶದ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗುವಂತಿದ್ದರೆ ಅದು 'ಪ್ರವಾಸೀ ಸ್ಥಳ' ವೆನಿಸಿಕೊಳ್ಳುತ್ತದೆ. ಪ್ರವಾಸಿಗರಾಗಿ, ನಾವು ಇರುವ ಪರಿಸರದಿಂದ ಪರಸ್ಥಳಕ್ಕೆ ಭೇಟಿ ನೀಡುವಾಗ ಮಾಡುವ ಯೋಜನೆ ಮತ್ತು ನಡೆಸುವ ತಯಾರಿ ಕೇವಲ ಲೌಕಿಕ ವಸ್ತುಗಳ ಕೊಂಡೊಯ್ಯುವುದರ ಕುರಿತಾಗಿ ಮಾತ್ರವೇ ಆಗಿರಬಾರದು. ಪ್ರವಾಸವೆಂದರೆ ಒಂದಷ್ಟು ಸಮಯೋಜಿತ, ಪೂರ್ವಾಪರ ವಿಷಯಗಳ ಅರಿವು ಕೂಡ ಅಗತ್ಯ. ಇದರ ಜೊತೆಗೆ ಪ್ರವಾಸದ ಉದ್ದೇಶ ನಮ್ಮ ವೈಯುಕ್ತಿಕ ಕಾರಣಗಳಿಂದ ಯೋಜನೆಗೊಂಡಿದ್ದರೂ, ಅದು ಕೇವಲ ನಮ್ಮ ಹಿತವೊಂದಕ್ಕೆ ಮಾತ್ರ ಸೀಮಿತವಾಗಿರಬಾರದು. ನಾವು ಭೇಟಿ ನೀಡುತ್ತಿರುವ ಸ್ಥಳಕ್ಕೆ ಅಥವಾ ಪ್ರವಾಸದುದ್ದಕ್ಕೂ ನಮ್ಮಿಂದ ಇತರರಿಗೆ ಮತ್ತು ಪ್ರವಾಸೀ ತಾಣದ ಸುತ್ತಲಿನ ಪರಿಸರಕ್ಕೆ ಹಾನಿಯುಂಟಾಗದಂತೆ ಕಾಳಜಿ ವಹಿಸುವ ಜವಾಬ್ಧಾರಿ ಕೂಡ ನಮ್ಮದಾಗಿರುತ್ತದೆ.



ಸೌಮ್ಯಾ ಬೀನಾ ಇವರು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ಬರವಣಿಗೆ, ಪ್ರವಾಸ, ಫೋಟೋಗ್ರಫಿ, ಆರ್ಟ್ ಖುಷಿ ಕೊಡುವ ಹವ್ಯಾಸಗಳು.

ಪ್ರವಾಸಿಗರಿಗೆ ಒಂದಿಷ್ಟು ಸಲಹೆ ಸೂಚನೆಗಳು

1 ಪ್ರವಾಸಿ ಸ್ಥಳದ ಕುರಿತು ಕನಿಷ್ಠ ಮಾಹಿತಿ ಸಂಗ್ರಹ

ಪ್ರವಾಸ ಹೋಗಲು ಸಾರಿಗೆ ವ್ಯವಸ್ಥೆಯಿಂದ ಹಿಡಿದು, ವಸತಿ, ಊಟ, ಓಡಾಟ ಪ್ರತಿಯೊಂದೂ ಸ್ವತಃ ಆಯೋಜಿಸುವುದು ಕಷ್ಟ ಅಥವಾ ಅನುಭವ ಸಾಲದು ಎಂದೆನಿಸಿದಾಗ, ನಾವು ಸಾಮಾನ್ಯವಾಗಿ ಪ್ರವಾಸ ವ್ಯಾಪಾರೋದ್ಯಮ ನಡೆಸುವ ಟೂರ್ಸ್ ಅಂಡ್ ಟ್ರಾವೆಲ್ಸ್‌ನವರ ಪ್ಯಾಕೇಜ್ ಟ್ರಿಪ್‌ಗಳ ಮೊರೆ ಹೋಗುವುದು ಸಹಜ. ಒಂದಷ್ಟು ದುಡ್ಡು ಕಟ್ಟಿಬಿಟ್ಟರೆ ನಮ್ಮನ್ನು ಆರಂಭದ ಸ್ಥಳದಿಂದ ಹೊರಟು, ವೀಕ್ಷಿಸಬೇಕಾದ ಸ್ಥಳಗಳಿಗೆಲ್ಲ ಸುತ್ತಾಟ ಮುಗಿಸಿ ವಾಪಾಸು ಕರೆತರುವಲ್ಲಿಯವರೆಗೆ ಪ್ರತಿಯೊಂದೂ ಅವರದ್ದೇ ಪ್ರಯಾಣದ ಪ್ಲಾನ್ ಮತ್ತು ಚಟುವಟಿಕೆಯ ಜವಾಬ್ದಾರಿ, ಚಿಂತೆ ಮಾಡುವ ಅಗತ್ಯವಿಲ್ಲ ಎಂದು ನಾವು ಯೋಚಿಸುತ್ತೇವೆ. ಆದರೆ ಖಾಸಗಿಯಾಗಿ ಅಥವಾ ಸ್ವತಃ ವಾಹನ ಚಲಾಯಿಸಿ ಪ್ರಯಾಣಿಸದಿದ್ದರೂ, ಪ್ರವಾಸ ಸ್ಥಳದ ಕುರಿತಾಗಿ ಕನಿಷ್ಠ ಪ್ರಮಾಣದ ಮಾಹಿತಿಯಾದರೂ ನಾವು ಸಂಗ್ರಹಿಸಬೇಕು. ಪ್ರವಾಸಿ ತಾಣದ ಕುರಿತಾಗಿ ಯಾವುದಾದರೂ ಪುಸ್ತಕ, ಟಿ.ವಿ ಡಾಕ್ಯುಮೆಂಟರಿ, ಇಂಟರ್ನೆಟ್ ಆಧಾರಿತ ವಿಷಯಗಳು, ಬ್ಲಾಗರ್ಸ್‌ಗಳ ಪ್ರವಾಸಾನುಭವ ಇತ್ಯಾದಿ ಬಲ್ಲ ಮೂಲಗಳಿಂದ ಸಾಧ್ಯವಾದಷ್ಟರ ಮಟ್ಟಿಗೆ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಪ್ರವಾಸ ಸ್ಥಳದ ಭಾಷೆ ನಮ್ಮ ಭಾಷೆಗಿಂತ ಭಿನ್ನವಾಗಿದ್ದರೆ, ಪ್ರಮುಖವಾದ ಶಬ್ದಗಳನ್ನುತಿಳಿದುಕೊಂಡರೆ, ಹೋದ ಕಡೆಗೆ ಇತರರೊಡನೆ ಸಂಭಾಷಣೆ ನಡೆಸುವ ಅಗತ್ಯತೆ ಸುಲಭವೆನಿಸುತ್ತದೆ.

2 ಸ್ಥಳೀಯ ಸಂಪ್ರದಾಯಗಳ ಕುರಿತಾಗಿ ಗೌರವ

ಹೊಸ ಜಾಗವೊಂದಕ್ಕೆ ಹೋದಾಗ ಅಲ್ಲಿನ ಆಚಾರ ವಿಚಾರ ಸಂಪ್ರದಾಯಗಳು ನಮಗೆ ತಿಳಿಯದ ವಿಷಯವಾಗಿದ್ದರೆ, ಕೇಳಿ, ನೋಡಿ, ಗಮನಿಸಿ ಅಲ್ಲಿನ ರೀತಿ ರಿವಾಜುಗಳಿಗೆ ನಮ್ಮ ಪ್ರವಾಸವನ್ನು ಚಟುವಟಿಕೆಯನ್ನು ಹೊಂದಿಸಿಕೊಳ್ಳಬೇಕು. ಪ್ರವಾಸೋದ್ಯಮವೇ ಮುಖ್ಯ ಬಂಡವಾಳವಾಗಿರುವಂತಹ ಊರುಗಳಲ್ಲಿ, ಪ್ರವಾಸಿಗರನ್ನು ಆಕರ್ಷಿಸಲೆಂದು ಅಲ್ಲಿನ ಮುಖ್ಯ ಐತಿಹಾಸಿಕ ವಿಷಯಗಳ ಕುರಿತಾದ ವಸ್ತು ಸಂಗ್ರಹಾಲಯಗಳು, ಕಲಾವಿದರಿಂದ ಸಂಗೀತ, ನೃತ್ಯ, ಕಲೆಗಳ ಪ್ರದರ್ಶನ, ಕರಕುಶಲ ವಸ್ತುಗಳ ಮಾರಾಟ ಹೀಗೆ ಸಾಕಷ್ಟು ರೀತಿಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಇಂತಹ ಸ್ಥಳಗಳಲ್ಲಿ, ಪ್ರದರ್ಶನಕ್ಕಿಟ್ಟ ವಸ್ತುಗಳನ್ನು ಯಾವುದೇ ಕಾರಣಕ್ಕೂ ಭಗ್ನಗೊಳಿಸದೇ, ಮಹಿಳೆಯರ ಬಗ್ಗೆ ಅಶ್ಲೀಲ ಮಾತುಗಳನ್ನಾಡದೇ ಕಲೆಯನ್ನು ಅರಿಯುವ, ಹೊಸ ವಿಚಾರಗಳನ್ನು ತಿಳಿದುಕೊಳ್ಳುವ ಮನೋಭಾವನೆಯಿಂದ ನೋಡಿ ಆನಂದಿಸುವುದು, ಸಂತಸ ತಂದುಕೊಟ್ಟ ಪ್ರದರ್ಶನಕಾರರಿಗೆ ಒಂದು ಪ್ರಶಂಸೆ ನೀಡುವುದು ಇತ್ಯಾದಿ ನಮ್ಮನ್ನು ನಾವೇ ಉತ್ತಮ ಪ್ರಜೆಯನ್ನಾಗಿಸಿಕೊಳ್ಳಲು ಸಹಾಯ ಮಾಡುತ್ತದೆ.



3 ಪ್ರವಾಸದ ಪರಿಸರ ನಮ್ಮ ಜವಾಬ್ಧಾರಿ ಕೂಡ


ಒಂದು ಬೆಳ್ಳಂಬೆಳಗ್ಗೆ ಯಾರಾದರೂ ಇದ್ದಕ್ಕಿದ್ದಂತೆ ನಮ್ಮ ಮನೆಗಳಿಗೆ ಬಂದು ಒಂದಷ್ಟು ಹಾರಾಡಿ ಕುಣಿದಾಡಿಕೊಂಡು, ಕೂತು ಉಂಡು ಕಂಡ ಕಂಡಲ್ಲಿ ಕಸ ಬಿಸಾಡಿ ತಿಳಿಸದೇ ಹೊರಟೇ ಹೋದರೆ ಹೇಗನ್ನಿಸಬಹುದು? ಕೋಪ, ಅಸಹಾಯಕತೆ, ದುಃಖ ಎಲ್ಲವೂ ಒಮ್ಮೆಲೇ ಉಂಟಾಗಬಹುದಲ್ಲವೇ? ಅಂದ ಮೇಲೆ ನಾವು ಪ್ರವಾಸಕ್ಕೆಂದು ಹೊರಗಿನ ಸ್ಥಳಗಳಿಗೆ ಓಡಾಡಿ ಪರಿಸರವನ್ನು ಅಂದಗೆಡಿಸಿ ಬರುವುದು ಎಷ್ಟರ ಮಟ್ಟಿಗೆ ನ್ಯಾಯಸಮ್ಮತ?

ಪ್ರವಾಸೀ ಸ್ಥಳವೆಂದರೆ ಜನರು ಹೆಚ್ಚಿನ ಪ್ರಮಾಣದಲ್ಲಿ ಓಡಾಡುವಂತಹ ಸ್ಥಳ. ಕೆಲವು ಕಡೆ ಸ್ವಚ್ಛತೆಯೆಡೆಗೆ ನಿಗಾ ವಹಿಸಿ ಸರ್ಕಾರದಿಂದ ಕ್ರಮಗಳನ್ನು, ಉಸ್ತುವಾರಿಗೆ ಜನರ ನೇಮಕಗೊಂಡಿರುತ್ತಾರೆ. ಆದರೆ ಸರ್ಕಾರದ ವ್ಯವಸ್ಥೆಯೊಂದೇ ಸಾಕೆ? ಆಕರ್ಷಣೀಯ ಸ್ಥಳಗಳು ಎಂದ ಕ್ಷಣವೇ 10–20 ಸಣ್ಣ ಪುಟ್ಟ ಬೀದಿ ಅಂಗಡಿಗಳಿಂದ ಹಿಡಿದು ದೊಡ್ಡ ದೊಡ್ಡ ವಾಣಿಜ್ಯ ಮಳಿಗೆಗಳು ತಲೆ ಎತ್ತುವುದು ಸಹಜ. ಪ್ರತಿಯೊಂದು ವ್ಯವಸ್ಥೆಯೂ ಯಶಸ್ವಿಯಾಗಲು ಜನರ ಸಹಕಾರ ಅತೀ ಮುಖ್ಯ. ಅನೇಕ ಕಡೆ ಕಸದ ಬುಟ್ಟಿ ಇದ್ದರೂ ಜನರು ಕಂಡಕಂಡಲ್ಲೆ ಕಸ ಹಾಕುವುದನ್ನು ನಾವು ನೋಡುತ್ತೇವೆ. ಪ್ರವಾಸಿಗನಾಗಿ ನಮಗೆ ನಮ್ಮ ಧ್ಯೇಯವಿರಬೇಕು. 'ಇದೆಲ್ಲವೂ ನಮ್ಮ ಭೂಮಿ, ನಮ್ಮ ಸಂಸ್ಕೃತಿ, ನಮ್ಮ ಮಣ್ಣು, ನಮ್ಮ ಜಲ' ಎಂಬ ಆಳವಾದ ಮನೋಭಾವನೆ ನಮ್ಮಲ್ಲಿ ಬೇರೂರಿದರೆ ಮಾತ್ರ, ಮಾಲಿನ್ಯಕ್ಕೆ ನಮ್ಮಿಂದಾಗುವ ಕೊಡುಗೆಯನ್ನು ತಕ್ಕಮಟ್ಟಿಗೆ ತಪ್ಪಿಸಬಹುದು ಮತ್ತು ನಮ್ಮ ಮಕ್ಕಳಲ್ಲೂ ಈ ಭಾವನೆಯನ್ನು ಪೋಷಿಸಬಹುದು.


4 ಹೋಂಸ್ಟೇ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಬಳಕೆ

ಯಾವುದೇ ಪ್ರಸಿದ್ಧ ಪ್ರವಾಸೀ ತಾಣಗಳಿಗೆ ನಾವು ಭೇಟಿ ನೀಡಿದರೂ ವಸತಿಗಾಗಿ ಪ್ರಸಿದ್ಧವಾಗಿರುವ ಹೋಟೆಲ್ ಅನ್ನು ಹುಡುಕುವ ಪರಿಪಾಠವಿರುತ್ತದೆ. ಆದರೆ ಪ್ರವಾಸದ ಯೋಜನೆ ನಿಮ್ಮದೇ ಹತೋಟಿಯಲ್ಲಿದ್ದರೆ ಒಮ್ಮೊಮ್ಮೆ ಹೋಂಸ್ಟೇ ಗಳನ್ನು ತಂಗಲು ಪ್ರಯತ್ನಿಸಿ. ಏಕೆಂದರೆ ಯಾವುದೇ ಸ್ಥಳದ ಕುರಿತಾಗಿ ಪ್ರವಾಸದ ಪಟ್ಟಿ ಭೂಪಟದಲ್ಲಿ ಇರುವುದಕ್ಕಿಂತಲೂ, ಅಲ್ಲಿನ ಸ್ಥಳೀಯರಿಗೆ ಹೆಚ್ಚಿನ ಸ್ಥಳಗಳ ಮಾಹಿತಿ, ಆಗುಹೋಗುಗಳ ಅರಿವಿರುತ್ತದೆ. ಇದರ ಜೊತೆಗೆ ಹೋಂಸ್ಟೇ ಗಳೆಂದರೆ ಮನೆ ಅಥವಾ ಮನೆಯ ಒಂದು ಭಾಗವನ್ನು ಪ್ರವಾಸಿಗರಿಗೆ ಊಟ ಮತ್ತು ವಸತಿಗಾಗಿ ನೀಡಿ ಅದರಿಂದ ಆದಾಯ ಪಡೆಯುವ ಮಾರ್ಗ. ಹಾಗಾಗಿ ಹೋಂಸ್ಟೇ ನಡೆಸುವವರು ಪ್ರವಾಸಿಗರನನ್ನು ಆಕರ್ಷಿಸಲೆಂದೇ ಅಲ್ಲಿನ ಸಾಂಪ್ರದಾಯಿಕ ಅಡುಗೆ ಪದಾರ್ಥಗಳನ್ನು ತಯಾರಿಸುತ್ತಾರೆ. ಇದರ ಜೊತೆಗೆ, ಸಮಯದ ಅಭಾವ ಅಥವಾ ಇನ್ಯಾವುದೇ ಬದ್ಧತೆಯಿರದ ಪಕ್ಷದಲ್ಲಿ ಆದಷ್ಟು ಬಸ್ಸು, ಟಾಂಗಾ ಹೀಗೆ ಸ್ಥಳೀಯ ಸಾರ್ವಜನಿಕ ಸಾರಿಗೆ ಮಾಧ್ಯಮವನ್ನೇ ಬಳಸಿ ನೋಡಿ.

ಪ್ರವಾಸ ಎಂಬುದು ಕೇವಲ ನಮ್ಮ ಕಥೆಯಲ್ಲ, ಪ್ರವಾಸದ ಸಮಯದ ಆಗುಹೋಗುಗಳು, ಹಾದಿಯುದ್ದಕ್ಕೂ ಸಿಗುವ ಜನರ ಕಥೆಗಳು, ಸನ್ನಿವೇಶಗಳು ಒಂದೊಂದು ಕಥೆಯನ್ನು ಅದರ ಜೊತೆಗೆ ಅನೇಕಾನೇಕ ಅನುಭವದ ಪಾಠಗಳನ್ನು ಕಲಿಸಿ ಹೋಗುತ್ತದೆ. ಪ್ರವಾಸದಿಂದ ಒಳ್ಳೊಳ್ಳೆಯ ನೆನಪುಗಳ ಬುತ್ತಿ ನಮ್ಮದಾಗುತ್ತದೆ. ಹಾಗಾಗಿ ಒಂದು ಉತ್ತಮ ಪ್ರವಾಸದ ನಿಲುವು ಮತ್ತು ಗೆಲುವು ಕೇವಲ ಪ್ರವಾಸೋದ್ಯಮ ಇಲಾಖೆ, ಸರ್ಕಾರ ಅಥವಾ ಇನ್ಯಾವುದೋ ಸಂಘ ಸಮೂಹದವರ ಜವಾಬ್ಧಾರಿ ಮಾತ್ರವಲ್ಲ, ಪ್ರವಾಸಿಗರಾಗಿ ನಮ್ಮಿಂದಲೂ ಕೂಡ ಅಷ್ಟೇ ಪ್ರಮಾಣದ ಹೆಮ್ಮೆ, ಪ್ರೀತಿ, ಕಾಳಜಿಯ ಅವಶ್ಯಕ. ಪ್ರವಾಸಿಗರ ಕರ್ತವ್ಯಕ್ಕೆ ಬದ್ಧರಾಗಿ ನಮ್ಮ ಪ್ರವಾಸವನ್ನು ಸುಖಿಸೋಣ.







ಮಲೆನಾಡ ಜೋಳಿಗೆಯಿಂದ


ಒಂದು ಸಂಜೆಯ ರಂಗು, ಹಸಿರಿನ ಹಲವು ಬಣ್ಣಗಳು, ಮಳೆಗಾಲದಲ್ಲಿ ತುಂಬಿ ಹರಿಯುವ ಪುಟ್ಟ ಝುರಿ, ಕಾಡಿನ ಅನೂಹ್ಯ ಲೋಕದ ಪುಟ್ಟ ಕುಸುಮಗಳು, ರೆಡ್ ಆಕ್ಸೈಡು ಮನೆ ಕಟ್ಟೆಯ ಮೇಲೆ ಕೂತು ಕವಳ ಹಾಕಿ ಹಲುಬುವ ಗೆಳೆಯರು, ನೆಂಟರು ಬಂದರೋ ಎಂದು ಬಾಗಿಲಿಂದ ಆಚೆಗೆ ಇಣುಕುವ ಅಜ್ಜಿ, ದೇವರಕೋಣೆಯೊಳಗೇ ಕದ್ದು ದೇವರ ಭೇಟಿಗೆ ಬರುವ ಬಿಸಿಲಕೋಲು.. ಒದ್ದೆ ಹೂವಿನ ಮೇಲೆ ಈಗತಾನೇ ನಿಂತ ಮಳೆಯ ಕುರುಹಾಗಿ ಉಳಿದಿರುವ ಪುಟ್ಟ ಹನಿಗಳು, ಬೆಟ್ಟದ ಕಣಿವೆಯಲ್ಲಿ ತೆಳುವಾಗಿ ಹಬ್ಬಿದ ಮಂಜ ಪರದೆ.. ಮಲೆನಾಡಿಗೆ ಹಲವು ಮಜಲುಗಳು. ಸಿಕ್ಕಿದ್ದಷ್ಟೇ ದಕ್ಕಿದ್ದು..



ಶ್ರೀನಿಧಿ ಡಿ.ಎಸ್







ಛಾಯಾಗ್ರಹಣ ಎನ್ನುವುದು ಮನಸ್ಸಿಗೆ ಮುದ ನೀಡುವ ಕಲೆ. ಕಾಲ ಪ್ರವಾಹದಲ್ಲಿ ಕ್ಷಣದೊಳಗೆ ಮಾಯವಾಗುವ ಘಳಿಗೆಯೊಂದು ಕ್ಯಾಮರಾದ ಕಣ್ಣೊಳಗೆ ಬಿದ್ದು ಸದಾಕಾಲ ಚೌಕಟ್ಟೊಳಗೆ ಬಂಧಿಯಾಗುವ ಈ ಪ್ರಕ್ರಿಯೆಗೆ ಅದರದೇ ಆದ ಸೊಗಸಿದೆ.

ಒಮ್ಮೆ ಫೋಟೋಗ್ರಫಿಯ ಆಸಕ್ತಿ ಶುರುವಾಯಿತು ಎಂದರೆ, ಅದರೊಳಗೆ ಕಳೆದು ಹೋಗುವ ಖುಷಿಯೇ ಬೇರೆ. ನೀವು ಮಲೆನಾಡು ಕರಾವಳಿಯವರಾದರೆ ಅದರ ತೂಕ ಇನ್ನೊಂದುಚೂರು ಹೆಚ್ಚು, ಮಳೆಗಾಲ, ಚಳಿಗಾಲ, ಬೇಸಿಗೆ – ತೋಟ ಗದ್ದೆ ಗುಡ್ಡ ಬೆಟ್ಟ – ತೊರೆ ನದಿ ಜಲಪಾತ – ಇಬ್ಬನಿ ಕವಿದ ಬೆಳಗು ಮಬ್ಬಿನ ಸಂಜೆ – ಹೀಗೆ ಎಲ್ಲ ಕಡೆಯೂ, ಎಲ್ಲ ಹೊತ್ತೂ ಕ್ಯಾಮರಾಗೆ ಹಬ್ಬವೇ. ಇಂದು ಮೊಬೈಲಿನ ಕ್ಯಾಮರಾಗಳೇ ಉತ್ಕೃಷ್ಟವಾದ ಚಿತ್ರಗಳನ್ನು ತೆಗೆಯಬಲ್ಲದು. ದೊಡ್ಡದೊಂದು DSLR ಕಡ್ಡಾಯವಾಗಿ ಬೇಕೆಂದೇನೂ ಇಲ್ಲ, ಇಲ್ಲಿ ನಾನು ತೆಗೆದಿರುವ ಅಷ್ಟೂ ಚಿತ್ರಗಳೂ – ಮೊಬೈಲ್‌ನವೇ.

ಹೀಗಾಗಿ ಸುಮ್ಮನೆ ನಿಮ್ಮ ಬೆಳಗಿನ ನಡಿಗೆ, ಸಂಜೆಯ ಹರಟೆಯ ಮಧ್ಯೆ ಒಂದಿಷ್ಟು ಚಿತ್ರಗಳನ್ನ ತೆಗೆದು ನೋಡಿ! ನಿಮಗೂ ಕೂಡ ಹೊಸದೊಂದು ಲೋಕ ಕಂಡೀತು. ನಿಮ್ಮಿಂದ ನಾವೂ ಬೇರೆಯದೊಂದು ಆಯಾಮ ಕಂಡೇವು.

ಶ್ರೀನಿಧಿ ಡಿ.ಎಸ್ ದಕ್ಷಿಣಕನ್ನಡದ ಕಿನ್ನಿಗೋಳಿಯವರು. ಎಂಎಸ್‌ಡಬ್ಲ್ಯೂ ಪದವೀಧರರಾಗಿರುವ ಇವರು ಸದ್ಯ ಕಿರುತೆರೆ ಹಾಗೂ ಹಿರಿತೆರೆಯಲ್ಲಿ ಬರಹಗಾರರು. ಸಾಹಿತ್ಯ, ಸಿನೆಮಾ, ಫೋಟೋಗ್ರಫಿಯಲ್ಲಿ ಅಪಾರ ಆಸಕ್ತಿ ಇದ್ದು, ಕಥೆ, ಕವಿತೆ, ಲಲಿತ ಪ್ರಬಂಧಗಳನ್ನು ಬರೆಯುತ್ತಾರೆ.

ಚಿತ್ರ ಸಂತೆ ಪ್ರಕಟಣೆ

ಚಿತ್ರಸಂತೆ ಛಾಯಾಗ್ರಾಹಕರಿಗೆ ಮೀಸಲಿಟ್ಟ ಪುಟ. ಕೆಲವನ್ನು ಶಬ್ಧಗಳಲ್ಲಿ ಹೇಳುವುದಕ್ಕಿಂತ ಚಿತ್ರಗಳ ಮೂಲಕ ಹೇಳುವುದು ಬಹಳ ಅರ್ಥಪೂರ್ಣ. ನೀವು ತೆಗೆದ ಚಂದದ ಚಿತ್ರಗಳನ್ನು ಈ ಚಿತ್ರ ಅಂಕಣಕ್ಕೆ ಕಳುಹಿಸಬಹುದು. ಚಿತ್ರ ಒಂದೇ ಆಗಿರಬಹುದು ಅಥವಾ ಒಂದು ವಿಷಯದ ಹಿನ್ನೆಲೆಯ ನಾಲ್ಕೈದು ಚಿತ್ರಗಳೂ ಆಗಿರಬಹುದು. ನೀವು ತೆಗೆದ ಛಾಯಾಚಿತ್ರಗಳ ಜೊತೆಗೆ ನಿಮ್ಮದೊಂದು ಭಾವಚಿತ್ರ, ಎರಡ್ಮೂರು ಸಾಲುಗಳಲ್ಲಿ ನಿಮ್ಮ ಪರಿಚಯ ಕೂಡ ಇರಲಿ.

ಚಿತ್ರಗಳನ್ನು ಕಳುಹಿಸಬೇಕಾದ ವಿಳಾಸ
editormandara@gmail.com

ಮಕ್ಕಳ ಪಾಠಿಚೀಲದಲ್ಲಿ ಪ್ರಕೃತಿ ಜ್ಞಾನ

ಈ ಪಾಸಾದ, ಪದವಿ ಪಡೆದ, ಬಂಗಾರದ ಪದಕ ಗಳಿಸಿದ ಈ ಮಕ್ಕಳನ್ನು ಅದೇ ನಿಮ್ಮೂರಿನ ಕಾಡಿನಲ್ಲಿ ನಿಲ್ಲಿಸಿ, ಕೆರೆ ಪಕ್ಕ ನಿಲ್ಲಿಸಿ, ನದಿ ಅಂಚಿನಲ್ಲಿ ಓಡಾಡಿಸಿ. ಇಲ್ಲ! ಯಾವೊಂದು ಮಾಹಿತಿಯೂ ಕೂಡಾ ಅವರಿಂದ ಹೊರಗೆ ಬಿದ್ದರೆ ಅಚ್ಚರಿಪಡಬೇಕು! ಯಾಕೆಂದರೆ, ಜ್ಞಾನ ಅನ್ನುವುದು ಪುಸ್ತಕಕ್ಕೆ ಸೀಮಿತವಾದ ಹಾಗೆ ಅದೊಂದು ಪರೀಕ್ಷೆಗೆ, ಪ್ರಶ್ನೆಗಳಿಗೆ ಸೀಮಿತವಾಗಿದ್ದ ಹಾಗೆ ಇವತ್ತಿನ ಮಕ್ಕಳ ವರ್ತನೆ ಕಾಣುತ್ತದೆ.



ಕಾನ್ಮನೆ ಮಾತು

ಶಿವಾನಂದ ಕಳವೆ

ನಿಮ್ಮ ಮಕ್ಕಳಿಗೆ ನೈಲ್ ನದಿಯ ಉದ್ದ ಎಷ್ಟಿದೆ? ಅಂತ ಕೇಳಿ. ಹಿಮಾಲಯದ ಎತ್ತರ ಎಷ್ಟಿದೆ ಅಂತ ಕೇಳಿ ಅಥವಾ ಜಗತ್ತಿನ ಅನೇಕ ಸಂಗತಿಗಳ ಬಗ್ಗೆ ಪ್ರಶ್ನಿಸಿ ನೋಡಿ. ಎಲ್ಲೋ ಒಂದಿಷ್ಟು ಉತ್ತರಗಳನ್ನು ಅವರು ಸರಿಯಾಗಿ ಕೊಟ್ಟೇ ಕೊಡುತ್ತಾರೆ. ಆದರೆ ನೇರವಾಗಿ ಸ್ಥಳೀಯವಾದ ಕೆಲವು ಪರಿಸರ ಸಂಬಂಧಿ ಪ್ರಶ್ನೆಗಳನ್ನು ಅವರೊಂದಿಗೆ ಕೇಳಬೇಕು. ನಿಮ್ಮೂರಲ್ಲಿಹರಿಯುವಹಳ್ಳದಹೆಸರೇನು?, ನದಿಯಹೆಸರೇನು?, ಅಲ್ಲಿರುವ ಕೆರೆಗಳ ಬಗ್ಗೆ ಕೇಳಿ, ಅಲ್ಲಿರುವ ಮರಗಳು, ಪಕ್ಷಿಗಳು, ಪ್ರಾಣ ಗಳ ಬಗ್ಗೆ ಕೇಳಿ. ಇಲ್ಲ! ಅವರಿಂದ ಇತ್ತೀಚಿನ ವರ್ಷಗಳಲ್ಲಿ ಸಿಗುವ ಉತ್ತರ ತೀರಾ ತೀರಾ ನಿರಾಶಾದಾಯಕ. ಶಾಲೆಗೆ ಬರುವ ಮಕ್ಕಳಿಗೆ ಸರ್ಕಾರ ಅನೇಕ ರೀತಿಯ ಸೌಲಭ್ಯಗಳನ್ನು ಕೊಟ್ಟಿದೆ. ಪಠ್ಯಗಳಲ್ಲಿ ಎಪ್ಪತ್ತರ ದಶಕದೀಚೆಗೆ ಪರಿಸರದ ಪಾಠಗಳಂತೂ ಧಾರಾಳವಾಗಿ ಬಂದಿವೆ. ಮಣ್ಣಿನ ಬಗ್ಗೆ, ಮರದ ಬಗ್ಗೆ, ನದಿಯ ಬಗ್ಗೆ, ಹೂವಿನ ಬಗ್ಗೆ, ಹಕ್ಕಿಯ ಬಗ್ಗೆ ಹೀಗೇ ಬೇರೆಬೇರೆ ರೀತಿಯಲ್ಲಿ ಪರಿಸರದ ಪಾಠಗಳಿವೆ. ಮಕ್ಕಳು ಆ ಪಾಠಗಳನ್ನು ಓದ್ತಾರೆ, ಮೇಷ್ಟ್ರು ಸೊಗಸಾಗಿ ಪಾಠ ಮಾಡ್ತಾರೆ. ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಟ್ಟ ಮಕ್ಕಳು ಹೆಚ್ಚುಹೆಚ್ಚು ಅಂಕಗಳನ್ನು ಪಡೆಯುತ್ತಾ ಒಳ್ಳೆಯ ಶ್ರೇಣಿಯಲ್ಲಿ ಪಾಸಾಗುತ್ತಾರೆ.

ಆಶ್ಚರ್ಯಕರ ಸಂಗತಿಯೆಂದರೆ, ಈ ಪಾಸಾದ, ಪದವಿ ಪಡೆದ, ಬಂಗಾರದ ಪದಕ ಗಳಿಸಿದ ಈ ಮಕ್ಕಳನ್ನು ಅದೇ ನಿಮ್ಮೂರಿನ ಕಾಡಿನಲ್ಲಿ ನಿಲ್ಲಿಸಿ, ಕೆರೆ ಪಕ್ಕ ನಿಲ್ಲಿಸಿ, ನದಿ ಅಂಚಿನಲ್ಲಿ ಓಡಾಡಿಸಿ. ಇಲ್ಲ! ಯಾವೊಂದು ಮಾಹಿತಿಯೂ ಕೂಡಾ ಅವರಿಂದ ಹೊರಗೆ ಬಿದ್ದರೆ ಅಚ್ಚರಿಪಡಬೇಕು! ಯಾಕೆಂದರೆ, ಜ್ಞಾನ ಅನ್ನುವುದು ಪುಸ್ತಕಕ್ಕೆ ಸೀಮಿತವಾದ ಹಾಗೆ ಅದೊಂದು ಪರೀಕ್ಷೆಗೆ, ಪ್ರಶ್ನೆಗಳಿಗೆ ಸೀಮಿತವಾಗಿದ್ದ ಹಾಗೆ ಇವತ್ತಿನ ಮಕ್ಕಳ ವರ್ತನೆ ಕಾಣುತ್ತದೆ.

ನಾವು ಧಾರಾಳವಾಗಿ ಪರಿಸರದ ಪಾಠಗಳನ್ನೇನೋ ಮಕ್ಕಳಿಗೆ ಕೊಟ್ಟಿದ್ದೇವೆ. ಆದರೆ ಮಕ್ಕಳ ಮನಸ್ಸನ್ನು ಪರಿಸರದ ಕಡೆಗೆ ಸೆಳೆಯುವಲ್ಲಿ ನಾವೆಲ್ಲೋ ಒಂದು ಕಡೆ ವಿಫಲರಾಗಿದ್ದೇವಾ? ಎಂದು ಆತ್ಮವಿಮರ್ಶೆ ಮಾಡಿಕೊಳ್ಳುವುದಕ್ಕೆ ಈಗ ಸಕಾಲ.

> ಇವತ್ತು ನಾವು ಶಿಕ್ಷಣವನ್ನು ಸಮಗ್ರವಾಗಿ ಗಮನಿಸಿಕೊಂಡರೆ, ಪ್ರಾಥಮಿಕದಿಂದ ಕಾಲೇಜು ಹಂತದವರೆಗೂ ಶಿಕ್ಷಣದಲ್ಲಿ ಪರಿಸರದ ನೀತಿಯ ಅಗತ್ಯವಿದೆ. ಪರಿಸರದ ಪಾಠದ ಹೊರತಾಗಿಯೂ ಕೂಡಾ ಸುತ್ತಲಿನ ನಿಸರ್ಗವನ್ನು ಅರ್ಥಮಾಡಿಕೊಳ್ಳುವಂತಹ ಪ್ರಯತ್ನಗಳು ನಡೆದರೆ ಮಾತ್ರ ಮಗುವಿನ ಮನಸ್ಸು ಬದಲಾಗಲು ಸಾಧ್ಯವಿದೆ.

ಇವತ್ತು ಜಗತ್ತು ಅನೇಕ ಕಾರಣಗಳಿಂದ ಪರಿಸರ ವಿಚಾರದ ಚರ್ಚೆಗಳನ್ನು ಮಾಡುತ್ತಿದೆ. 2015-16 ರ ಹೊತ್ತಿನಲ್ಲಂತೂ ಕರ್ನಾಟಕದಲ್ಲಿ ತೀವ್ರ ಬರ ಬಂದಾಗ ಕುಡಿಯುವ ನೀರಿಗೆ ತತ್ವರ ಆಯಿತು. ಎಷ್ಟು ಕಷ್ಟವಾಯಿತೆಂದರೆ, ಒಂದು ಬಿಂದಿಗೆ ನೀರನ್ನು 15-20 ಕಿಮೀ ದೂರದಿಂದ ತರುವಂತಹ ಪರಿಸ್ಥಿತಿಯನ್ನು ನೋಡಿದ್ದೇವೆ. ಟ್ಯಾಂಕರ್ ಮೂಲಕ ಅನೇಕ ಹಳ್ಳಿಗಳು ನೀರನ್ನು ಹುಡುಕಿದವು. ಹೆಚ್ಚುಕಡಿಮೆ 156 ತಾಲ್ಲೂಕುಗಳು ಬರಪೀಡಿತ ಎಂದು ಸರ್ಕಾರವೇ ಸಾರಿತು!

ಇದು ಒಂದು ಮುಖವಾದರೆ, ಕಳೆದ ಕೆಲವು ವರ್ಷಗಳಿಂದ ನಾವು ನೋಡುತ್ತಿದ್ದೇವೆ; ಉಷ್ಣತೆಯಲ್ಲಿ ಬದಲಾವಣೆಯಾಗಿದೆ. ತಾಪಮಾನದಲ್ಲಿ ಏರಿಕೆಯಾಗಿದೆ. ಬೇಸಿಗೆಯಲ್ಲಿ 38 40 42 44 ಡಿಗ್ರಿ ಉಷ್ಣಾಂಶಗಳನ್ನು ನೋಡುವ ಹಳ್ಳಿಗಳೂ ಇವೆ. ನಗರಗಳ ಸ್ಥಿತಿ ಇನ್ನೊಂದು. ಶಾಲೆಗಳಿಗೆ ರಜೆ ಕೊಡುವಷ್ಟು ಕೆಲವು ಕಡೆ ವಾಹನ ಮಾಲಿನ್ಯದ ಹೊಗೆ ತುಂಬಿಕೊಂಡಿರುವುದನ್ನು ನೋಡುತ್ತೇವೆ. ಒಂದು ಕಡೆ ಕೊರೊನಾ ಬಂದಾಗ ಆದ ಬವಣೆಗಳನ್ನು ಗಮನಿಸಿದ್ದೇವೆ.

ನಮ್ಮ ಪರಿಸರ ಚೆನ್ನಾಗಿದ್ದರೆ ಮಕ್ಕಳ ಭವಿಷ್ಯವೂ ಚೆನ್ನಾಗಿರುತ್ತದೆ. ನಾಡಿನ ಭವಿಷ್ಯವೂ ಚೆನ್ನಾಗಿರುತ್ತದೆ. ಒಂದು ಉದಾಹರಣೆ ಹೇಳಬೇಕೆಂದರೆ, ತೀವ್ರ ಬರ ಬಂದಾಗ ಗುಲ್ಬರ್ಗದಾ ಆಳಂದ ತಾಲೂಕಿನ ಅನೇಕ ಹಳ್ಳಿಗರು ಮುಂಬೈ, ಪೂಣಾ, ಬೆಂಗಳೂರು, ಮಂಗಳೂರು ಕಡೆ ವಲಸೆ ಹೊರಟರು. ಹೋಗುವಾಗ ತಮ್ಮ ದನ ಕರುಗಳನ್ನು ಮಾರಾಟ ಮಾಡಿ ಮನೆಗೆ ಬೀಗ ಹಾಕಿ ಹೋಗಿದ್ದರು. ಮಕ್ಕಳನ್ನೂ ಜೊತೆಗೆ ಕರೆದುಕೊಂಡು ಹೋಗಿದ್ದಕ್ಕಾಗಿ ಮಕ್ಕಳಿಗೆ ಶಾಲೆಯೇ ಇರಲಿಲ್ಲ. ಇವತ್ತು ಅನೇಕ ವನವಾಸಿ ಸಮುದಾಯಗಳಲ್ಲೂ ಕೇರಿಗಳಲ್ಲೂ ನೋಡುತ್ತೇವೆ. ಅವರೆಲ್ಲಾ ವಲಸೆ ಹೊರಟಾಗ ಮಕ್ಕಳ ಶಿಕ್ಷಣವೂ ನಿಂತು ಹೋಗುತ್ತದೆ. ಯಾವಾಗ ಊರಲ್ಲಿ ಚೆನ್ನಾಗಿ ನೀರಿರುತ್ತೋ ಊರಲ್ಲಿ ನೀರಿದ್ದಾಗ ಮಕ್ಕಳ ಆರೋಗ್ಯವೂ ಚೆನ್ನಾಗಿದ್ದು ಶಿಕ್ಷಣಕ್ಕೂ ಅನುಕೂಲವಾಗುತ್ತದೆ.

ಇವತ್ತು ಯಾರು ಉನ್ನತ ಪದವಿಗಳನ್ನು ಪಡೆಯುತ್ತಾರೆ, ಪುರಸ್ಕಾರಗಳನ್ನು ಪಡೆಯುತ್ತಾರೆ, ಒಳ್ಳೆಯ ರ್‍ಯಾಂಕ್‌ಗಳನ್ನು ಪಡೆಯುತ್ತಾರೆ, ಅವೆಲ್ಲದರ ಹಿಂದೆ ಅವರ ಪರಿಶ್ರಮ ಇದೆ ಎಂದೆಲ್ಲಾ ನಾವು ಕೊಂಡಾಡುತ್ತೇವೆ. ನಿಜಕ್ಕೂ ಇದೆ! ಅವರ ಓದು,ಶಿಕ್ಷಕರ ಸಹಾಯ, ಪಾಲಕರ ಸಹಾಯ ಎಲ್ಲವೂ ಇದೆ ಒಪ್ಪೋಣ. ಆದರೆ ನಾವು ಮರೆತಿರುವ ಸಂಗತಿ ಏನೆಂದರೆ, ಪರಿಸರದ್ದು. ಒಳ್ಳೆಯ ಓದುವ ಪರಿಸರ ಇಲ್ಲದಿದ್ದರೆ, ಒಳ್ಳೆಯ ಕುಡಿಯುವ ನೀರಿಲ್ಲದಿದ್ದರೆ, ಒಳ್ಳೆಯ ಗಾಳಿಯಿಲ್ಲದಿದ್ದರೆ, ಮನಸ್ಸನ್ನು ಏಕಾಗ್ರತೆಯತ್ತ ಒಯ್ಯುವಂತಹ ವಾತಾವರಣ ಇಲ್ಲದಿದ್ದರೆ ಖಂಡಿತ ಯಾರೂ ಯಾವ ಸಾಧನೆಯನ್ನೂ ಮಾಡಲು ಸಾಧ್ಯವಿಲ್ಲ. ಅಂದರೆ ಎಲ್ಲದರ ಹಿಂದೆ ಪರಿಸರ ಇದ್ದೇ ಇದೆ. ಇರಲೇಬೇಕು ಕೂಡಾ!





ಹೀಗಾಗಿ ಇವತ್ತು ನಾವು ಶಿಕ್ಷಣವನ್ನು ಸಮಗ್ರವಾಗಿ ಗಮನಿಸಿಕೊಂಡರೆ, ಪ್ರಾಥಮಿಕದಿಂದ ಕಾಲೇಜು ಹಂತದವರೆಗೂ ಶಿಕ್ಷಣದಲ್ಲಿ ಪರಿಸರದ ನೀತಿಯ ಅಗತ್ಯವಿದೆ. ಪರಿಸರದ ಪಾಠದ ಹೊರತಾಗಿಯೂ ಕೂಡಾ ಸುತ್ತಲಿನ ನಿಸರ್ಗವನ್ನು ಅರ್ಥಮಾಡಿಕೊಳ್ಳುವಂತಹ ಪ್ರಯತ್ನಗಳು ನಡೆದರೆ ಮಾತ್ರ ಮಗುವಿನ ಮನಸ್ಸು ಬದಲಾಗಲು ಸಾಧ್ಯವಿದೆ.

ಇಂದು ಪ್ಲಾಸ್ಟಿಕ್ ಬೀಳುತ್ತಿದೆ, ನದಿ ಹಾಳಾಗುತ್ತಿದೆ, ಮತ್ತೇನೋ ಅರಣ್ಯ ನಾಶವಾಗುತ್ತಿದೆ ಅಂದರೆ ನಾವು ಕೆಲವೊಂದು ಸಿದ್ಧ ಮಾದರಿಯನ್ನಿಟ್ಟುಕೊಂಡಿದ್ದೇವೆ. ಮಳೆಗಾಲದಲ್ಲಿ ಒಮ್ಮೆ ಸಸಿ ನೆಟ್ಟು ವನಮಹೋತ್ಸವ ಆಚರಿಸುವುದೇ ದೊಡ್ಡ ಕಾರ್ಯಕ್ರಮ ಎಂದು ತಿಳಿದುಕೊಂಡಿದ್ದೇವೆ. ಆದರೆ ಬೇಸಿಗೆಯಲ್ಲಿ ಸಾಯುವ ಸಸಿಗೆ ನೀರು ಹಾಕುವುದು, ಕಾಡಿಗೆ ಬಿದ್ದ ಬೆಂಕಿಯನ್ನು ನಂದಿಸುವುದು, ಜಲ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವಂತದ್ದು ಅಥವಾ ಸ್ವತಃ ನಾವು ಕೆಲವು ವಿಚಾರಗಳಲ್ಲಿ ಪರಿಸರ ಸ್ನೇಹಿ ನಡವಳಿಕೆಯನ್ನು ತೋರಿಸುವುದು, ಪ್ಲಾಸ್ಟಿಕ್‌ಗಳನ್ನು ಎಲ್ಲೆಂದರಲ್ಲಿ ಬೀಸಾಡದಿರುವುದು ಇಂತಹ ನಡವಳಿಕೆಗಳು ಕೇವಲ ಪಾಠದಿಂದ ಸಾಲುವುದಿಲ್ಲ, ವೈಯಕ್ತಿಕವಾಗಿ ಸ್ವಯಂ ನಿಯಂತ್ರಣದ ಮೂಲಕ, ಸ್ವಯಂ ಆಚರಣೆಯ ಮೂಲಕ ಇದು ಕಾರ್ಯಗತವಾಗಬೇಕು.

ಹಾಗಾದರೆ ಇದನ್ನೆಲ್ಲಾ ನಾವು ಯಾವ ರೀತಿಯಲ್ಲಿ ಮಾಡಲು ಸಾಧ್ಯವಿದೆ? ಪರಿಸರದ ಪಾಠ ಏನು ಮಾಡಬಹುದು? ಮೇಷ್ಟ್ರುಗಳು ಯೋಚನೆ ಮಾಡಬೇಕು. ಅನೇಕರು ಕೇಳುತ್ತಾರೆ. 'ಸರ್ ನಮ್ಮಲ್ಲಿ ಮಲೆನಾಡು, ಕರಾವಳಿಯಲ್ಲಿ ಇರುವಂತಹ ಪರಿಸರ ಬಯಲುಸೀಮೆಯಲ್ಲಿ ಇಲ್ವೇ ಇಲ್ಲ' ಅಂತ. ಹಾಗೇನೂ ಇಲ್ಲ, ಎಲ್ಲಾ ಕಡೆ ಅಲ್ಲಿಗೆ ತಕ್ಕುದಾದಂತಹ ಪರಿಸರ ವ್ಯವಸ್ಥೆ ಇದೆ. ಪಾಠಕ್ಕೆ ಬೇಕಾದಂತಹ ಧಾರಾಳ ಸಂಗತಿಗಳು ಇವೆ. ಏನೂ ಇಲ್ಲದ ಅದ್ಯಾವುದೋ ಬಳ್ಳಾರಿ ಮೂಲೆಯ ಹಳ್ಳಿಗಳಲ್ಲೂ ಕೂಡಾ, ಅಲ್ಲಿರುವ ಜಾಲಿ ಕಂಠಿಯೋ ಮುಳ್ಳು ಕಂಠಿಯೋ ಕಾರೆ ಕಂಠಿಯೋ ಬೋರೆ ಕಂಠಿಯೋ ಅವೆಲ್ಲವೂ ಕೂಡಾ ಕಡಿಮೆ ನೀರು ಬರುವ ಸೂಚಕವಾಗಿ ಹೇಗೆ ನೀರನ್ನು ಕಡಿಮೆ ಬಳಸೋ ಸಾಧ್ಯತೆ ಇದೆ ಎಂಬುದನ್ನು ಮುಳ್ಳನ್ನಿಟ್ಟು ತೋರಿಸುತ್ತಿದ್ದಾರೆ.

ಮುಳ್ಳು ಹೇಗೆ ಒಂದು ಸಸ್ಯದಲ್ಲಿ ಬೆಳವಣಿಗೆಯಾದಾಗ ಆ ಸಸ್ಯ ಬರ ನಿರೋಧಕ ಶಕ್ತಿಯನ್ನು ಪಡೆದುಕೊಳ್ಳುತ್ತದೆ, ಹೇಗೆ ಬದುಕುತ್ತದೆ. ಒಮ್ಮೆ ಮುಳ್ಳುಗಾಡು ಬೆಳೆಯುತ್ತಾ ಹೋದಂತೆ ನಡುವೆ ಬೇವೋ ಶ್ರೀಗಂಧವೋ ಬೆಳೆಯುವ ವಿಶೇಷಗಳನ್ನೂ ಗಮನಿಸಬಹುದು. ಆ ಪ್ರದೇಶದ ಕಂಠಿಗಳೆಲ್ಲಾ ಹಣ್ಣಾದಾಗ ಬೇರೆ ಬೇರೆ ಪಕ್ಷಿಗಳು ಬಂದು ಬೇರೆ ಬೇರೆ ಹಣ್ಣಿನ ಬೀಜಗಳನ್ನು ಹಾಕುವುದನ್ನೂ ನೋಡಬಹುದು.

ಅಂದರೆ, ಪರಿಸರದ ಎಲ್ಲಾ ಸಂಗತಿಗಳನ್ನು ಮನುಷ್ಯ ಗಮನಿಸುವ ಒಂದು ಕುತೂಹಲವನ್ನಿಟ್ಟುಕೊಂಡರೆ ಖಂಡಿತ ಎಲ್ಲಾ ಕಡೆಗಳಲ್ಲೂ ಇಂತಹ ಸಂಗತಿಗಳಿವೆ. ಇಂದು ಈ ಮಕ್ಕಳಿಗೆ ಈ ರೀತಿಯ ಪರಿಸರದ ದರ್ಶನ ಮಾಡಿಸಿ ಅವರ ಮಿದುಳಲ್ಲಿ ಪರಿಸರದ ಸಂರಕ್ಷಣೆಯ ಜಾಗೃತಿ ಮೂಡಿಸುವ ಕೆಲಸಕ್ಕೆ ಶಾಲಾ ಪಠ್ಯದ ಹೊರತಾಗಿಯೂ ಕೆಲವು ಪ್ರಯತ್ನಗಳು ಬೇಕಾಗಿವೆ.

ಸುಮಾರು 2001 ನೇ ಇಸವಿಯಿಂದ ಈವರೆಗೂ ನನ್ನ ಅನುಭವದ ಪ್ರಕಾರ ಅನೇಕ ಪರಿಸರ ಶಿಬಿರಗಳನ್ನು ಏರ್ಪಡಿಸಿದ್ದೇನೆ. ಹೆಚ್ಚುಕಡಿಮೆ 22 ವರ್ಷಗಳ ಈ ಪಯಣದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳು ನಮ್ಮ ಪರಿಸರ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಈ ಮಕ್ಕಳನ್ನು ಹತ್ತಿರದಿಂದ ಒಡನಾಡಿ ಹೇಳುವುದಿಷ್ಟೇ -ಒಂದಿಷ್ಟು ಸಮಯ ನಾವು ಪರಿಸರದ ಜಾಗೃತಿಗೆ ಕೊಡದೇ ಹೋದರೆ ನಾಳೆ ನಮ್ಮೂರ ನದಿ, ಕೆರೆ ಒಣಗಲು, ಕಾಡು ಕಣ್ಮರೆಯಾಗಲು, ಊರಲ್ಲಿ ವಾಯು ಮಾಲಿನ್ಯವಾಗಿ ಕಸದ ಗುಡ್ಡೆಯಾಗಿ ಮೂಗು ಮುಚ್ಚಿಕೊಂಡು ತಿರುಗುವಂತಹ ಸಂದರ್ಭ ಬರಲು ನಾವೇ ಕಾರಣವಾಗುತ್ತೇವೆ.

ಭೂಮಿ ಎಮರ್ಜೆನ್ಸಿ ವಾರ್ಡಿನಲ್ಲಿದೆ ಎಂದು ಹೇಳುತ್ತೇವೆ. ಎಮರ್ಜೆನ್ಸಿ ವಾರ್ಡಿನಲ್ಲಿರುವ ಭೂಮಿಯನ್ನು ನಿಧಾನಕ್ಕೆ ಜನರಲ್ ವಾರ್ಡಿಗೆ ತಂದು, ನಿಧಾನಕ್ಕೆ ಒಂದು ಒಳ್ಳೆಯ ಸಂರಕ್ಷಣೆಯ ನೀತಿಗಳನ್ನು ರೂಪಿಸಲು ಬೇಕಾಗಿರುವುದು ಭವಿಷ್ಯದ ಕಾಳಾಳುಗಳು.

ಇವತ್ತಿನ ವಿದ್ಯಾರ್ಥಿಗಳೇ ನಾಳಿನ ಈ ಪರಿಸರವನ್ನು ಉಳಿಸಬೇಕಾದವರು. ಈ ಹಿನ್ನೆಲೆಯಲ್ಲಿ ಅವರಿಗೆ ಪ್ರಭಾವಿಯಾದಂತಹ ಪರಿಸರದ ಶಿಕ್ಷಣ ಕೊಡಲು ಶಿಕ್ಷಕರು, ಪಾಲಕರು, ಇಡೀ ಸಮುದಾಯ, ಸರ್ಕಾರ ಎಲ್ಲರೂ ಯೋಚಿಸಲೇಬೇಕು. ಅನೇಕ ಪಾಲಕರಲ್ಲೊಂದು ಯೋಚನೆಯಿದೆ. ಮಕ್ಕಳಿಗೆ ಪರಿಸರದ ಪಾಠ ಪರಿಸರದ ಪಾಠ ಅಂತಾರೆ ಅದರಿಂದ ಪರೀಕ್ಷೆಗೆ ಏನು ಅನುಕೂಲವಾಗುತ್ತೆ? ಅಂತ. ಏನು ಅನುಕೂಲ ಎಂದು ಈಗಾಗಲೇ ಅನೇಕ ಉದಾಹರಣೆಗಳನ್ನು ನೀಡಿದ್ದೇನೆ. ಕೆಟ್ಟ ನೀರು ಕುಡಿದು ನಿಮ್ಮ ಮಗು ಅನಾರೋಗ್ಯದಲ್ಲಿದ್ದಾಗ, ಕೆಟ್ಟ ಗಾಳಿಯಿಂದ ಅಸ್ತಮಾದಂತಹ ರೋಗಗಳು ಉಲ್ಬಣಿಸಿದಾಗ ಒಂದು ಒಳ್ಳೆಯ ಪರಿಸರ, ಕೆರೆ, ನದಿ, ಮರದ ಬೆಲೆ ನಮಗೆ ಅರ್ಥವಾಗುತ್ತದೆ.

ಕಳೆದೊಂದು ದಶಕದಿಂದ ಅಂತಹ ಅರ್ಥ ಮಾಡಿಸುವ ಸಾಕ್ಷ್ಯಗಳು ನಮ್ಮ ಕಣ್ಣೆದುರಿದ್ದು ಓದಿದ ನಾವು ಕಣ್ಮುಚ್ಚಿ ಕೂರದೇ ಎಚ್ಚರವಾಗಬೇಕು. ಅರಿವಿನ ದೀಪವನ್ನು ಬೆಳಗಲು ಹಸಿರು ರಾಯಭಾರಿಗಳನ್ನು ಸಿದ್ಧ ಮಾಡಲು ನಾವು ಕಾರ್ಯಪ್ರವೃತ್ತರಾಗಬೇಕು.

ಶಿವಾನಂದ ಕಳವೆ ಶಿರಸಿ ಸಮೀಪದ ಕಳವೆಯವರು. ಪರಿಸರ ಜಾಗೃತಿ ಮೂಡಿಸುವ ಬರಹಗಳು ಇವರ ವೈಶಿಷ್ಟ್ಯ. ಪತ್ರಕರ್ತರಿಗೆ, ವಿದ್ಯಾರ್ಥಿಗಳಿಗೆ ಪರಿಸರ ಕಾಳಜಿಯ ಪಾಠ ಹೇಳುವುದು ಇವರ ನೆಚ್ಚಿನ ಹವ್ಯಾಸ. 'ಮಧ್ಯಘಟ್ಟ' ಕಾದಂಬರಿ ಸೇರಿದಂತೆ ಅನೇಕ ಕೃತಿಗಳು ಪ್ರಕಟವಾಗಿವೆ.

ಹಸಿರ ನಡುವಿನ ಬದುಕು



ಚಂದನ

ಶಾಲೆಯಲ್ಲಿ ಕೊನೆಯ ಬೆಲ್ ಹೊಡೆದ ತಕ್ಷಣ ಮನೆಗೆ ಬಂದು ಕೈಕಾಲು ತೊಳೆದು ಚುರ್ ಗುಡುವ ಹೊಟ್ಟೆಗೆ ಏನಾದರೂ ಇಳಿಸಿ ಅನಂತರ ತೋಟದ ಕಡೆ ಹೆಜ್ಜೆ ಹಾಕಿ ಮರ ಗಿಡಗಳನ್ನೆಲ್ಲಾ ಮಾತನಾಡಿಸುತ್ತಾ ತಿರುಗಾಡುವುದೆಂದರೆ ಅದೆಂತಹ ಸಂತಸ! ತೋಟದಲ್ಲಿ ನಮ್ಮ ಹಸಿರು ಕುಟುಂಬ ಬಹುದೊಡ್ಡದಿದೆ. ಮೊನ್ನೆ ಬಿತ್ತಿದ ಶೇಂಗಾ ಬೀಜ ಮೊಳಕೆಯೊಡೆದಿದೆ. ಅದು ಗಿಡವಾಗಿ ಇನ್ನಂಚೂರು ದೊಡ್ಡದಾಗಿ ಬೆಳೆಯಲು ಶುರುಮಾಡಿದ ಕೂಡಲೇ ಒಂದು ಬೇಲಿ ಹಾಕಿಬಿಡಬೇಕು.

ಓಹ್! ಏನು ಗೊತ್ತಾ? ಕಳೆದ ವರ್ಷ ನೆಟ್ಟ ಕಾಳುಮೆಣಸಿನ ಗಿಡ ಸೊಗಸಾಗಿ ಅಡಿಕೆ ಮರಕ್ಕೆಹಬ್ಬಿ ಕಳೆದ ವಾರವಷ್ಟೇ ಸಣ್ಣ ಸಣ್ಣ ಖರೆ ಬಿಡಲು ಪ್ರಾರಂಭಿಸಿದೆ. ಅದಕ್ಕೆ ಈಗ ಒಂದಿಷ್ಟು ಗೊಬ್ಬರ ತಂದು ಹಾಕಬೇಕು. ಕೊಟ್ಟಿಗೆಯ ಪಕ್ಕದ ಗೊಬ್ಬರ ಕುಳಿಯಿಂದ ಸ್ವಲ್ಪ ಮತ್ತು ಮೊನ್ನೆ ಅಪ್ಪ ಅಡಿಕೆ ಮರಕ್ಕೆಲ್ಲಾ ಹಾಕಲಿಕ್ಕೆ ತಂದಿಟ್ಟ ಅದ್ಯಾವ್ದೋ ಪೇಟೆ ಸಾವಯವ ಗೊಬ್ಬರ, ಎರಡನ್ನೂ ಸೇರಿಸಿ ಕಾಳುಮೆಣಸಿನ ಗಿಡಕ್ಕೆ ಹಾಕಬೇಕು. ಮೆಣಸಿನ ಕರೆ ಬಿಡಲು ಅದಕ್ಕೆ ಶಕ್ತಿ ಬೇಕಲ್ಲ! ತೋಟಕ್ಕೆ ಹೋದಾಗ ಇಂತಹ ಬಹಳಷ್ಟು ಮಾತುಕತೆ ಮನಸ್ಸಿನೊಳಗೇ ನಡೆಯುತ್ತಾ ಹೋಗುತ್ತದೆ.

ಮಲೆನಾಡಿನ ಹಳ್ಳಿಯಲ್ಲಿ ಹುಟ್ಟಿ ಬೆಳೆದ ನಮಗೆ ಹಸಿರು, ಪರಿಸರ, ಕಾಡು ಬೆಟ್ಟ ಬ್ಯಾಣ, ತೋಟ ಎಂದರೆ ಜೀವ. ನಾವೇ ಅದರ ಒಂದು ಚಿಕ್ಕ ಭಾಗವಲ್ಲವೇ? ಸಂಜೆಯ ಹೊತ್ತಿಗೆ ಅಜ್ಜನಮನೆಯ ಬ್ಯಾಣದ ಮೇಲೆ ಕೂತುಬಿಡಬೇಕು. ಪ್ರಕೃತಿ ಮಾತನಾಡುತ್ತದೆ. ತಂಪಾದ ಗಾಳಿಯ ಮೂಲಕ. ಮರಗಳ ನಡುವಿನ ಚರಚರ ಶಬ್ದಗಳ ಮೂಲಕ. ಪ್ರಶಾಂತವಾದ ವಾತಾವರಣದ ನಡುವಿನ ಇಂತಹ ಹಸಿರ ಅಲೆಗಳು ಸೊಗಸಾಗ ಸಂಗೀತ ಅನಿಸಿಬಿಡುತ್ತದೆ. ಅಲ್ಲೇ ಇನ್ನಷ್ಟು ಹೊತ್ತು ಕೂತುಬಿಡಬೇಕು ಎಂದು ಮನ ಹೇಳುತ್ತದೆ.

ಇನ್ನು ಕೊಟ್ಟಿಗೆಯೊಳಗಿನ ಪ್ರೀತಿಯ ಬಗ್ಗೆ ಹೇಳದೇ ಇದ್ದರೆ ಆದೀತೇ? ಅಲ್ಲಿನ ಪುಟಿಕರುವಿಗೆ ಈಗಷ್ಟೇ ಒಂದು ತಿಂಗಳು. ಅದೆಷ್ಟು ಮುದ್ದು ಮಾಡಬೇಕು ಅದಕ್ಕೆ? ಕೊಟ್ಟಿಗೆಯೊಳಗೆ ಹೊಕ್ಕ ತಕ್ಷಣ ಅದರ ಕಣ್ಣರಳುತ್ತದೆ. ತಕತಕ ಎಂದು ನಾಲ್ಕು ಕುಣಿತವನ್ನೂ ಹಾಕಿಬಿಡಬೇಕು. ಅಂಬಾ ಎನ್ನುವುದನ್ನು ಬಿಟ್ಟು ಅದಕ್ಕೆ ಇನ್ನೇನೂ ಹೇಳಲಿಕ್ಕೆ ಬಾರದು. ಆದರೆ ಅಲ್ಲಿ ಭಾವ ಮಾತನಾಡುತ್ತದೆ. ಮೌನ ಕತೆ ಹೇಳುತ್ತದೆ. ಉಭಯ ಕುಶಲೋಪರಿ ನಡೆಯುತ್ತದೆ. ಮೈ ನೇವರಿಸಿದಷ್ಟೂ ಸಾಲದು. ಪುಟಿ ಕರುವನ್ನು ಮುದ್ದಾಡುತ್ತಿದ್ದರೆ, 'ಈಗ ನಾನು ಕಾಣುವುದಿಲ್ಲ ಅಲ್ವಾ' ಎಂದು ಅದರ ಅಮ್ಮ ನನ್ನೆಡೆಗೆ ನೋಡಿ ಕರೆಯುತ್ತದೆ. ಅದಕ್ಕೂ ಒಂದಿಷ್ಟು ಮುದ್ದು ಮಾಡಬೇಕು. ಒಂದಿಷ್ಟು ಹುಲ್ಲು ತಂದು ಹಾಕಬೇಕು. ಯಾರಿಗೂ ಗೊತ್ತಾಗದಂತೆ ಚೀಲದಿಂದ ಒಂದಿಷ್ಟು ಹಿಂಡಿಯನ್ನು ತಂದುಕೊಡಬೇಕು.

ಹಸಿರು ತನ್ನೊಡಲೊಳಗೆ ಸಾಗರದಷ್ಟು ಪ್ರೀತಿಯನ್ನು ಹುದುಗಿಟ್ಟುಕೊಂಡು ಕೂತಿದೆ. ನಮ್ಮ ಸುತ್ತಮುತ್ತಲಿನ ಪರಿಸರ ಗಮನಿಸುತ್ತಾ ಹೋದರೆ ಚಿಕ್ಕ ಸಿಕ್ಕ ವಿಷಯಗಳೂ ಖುಷಿ ನೀಡಬಲ್ಲವು. ತೋಟ, ಬ್ಯಾಣ, ಕೊಟ್ಟಿಗೆ ಹೀಗೆ ಎಲ್ಲಾ ಕಡೆ ಒಲವಿನ ಸೆಲೆಗಳಿವೆ. ಹಸಿರು ತನ್ನ ಮೌನದ ಮೂಲಕವೇ ನಮ್ಮನ್ನೆಲ್ಲಾ ನೇವರಿಸುತ್ತದೆ. ಝರಿಯ ಜುಳು ಜುಳು, ಕೊಟ್ಟಿಗೆಯೊಳಗಿನ ಅಂಬಾ ಎಂಬ ಕೂಗು, ಹಕ್ಕಿಯ ಚಿಲಿಪಿಲಿ, ತಂಗಾಳಿಯ ಶಬ್ದ ಎಲ್ಲವೂ ಇಂಪಾಗಿ ಕೇಳುತ್ತದೆ. ಹಸಿರು ಮಾತಾಗುತ್ತದೆ.

ಹಸಿರು ಕಣಜ



ಚಿತ್ರ: ಗೋಪಿ ಜಾಲಿ

ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹಳ್ಳಿಯೊಂದರಲ್ಲಿ ವಿಶಿಷ್ಟ ತಳಿಯ ಅಕ್ಕಿಯೊಂದನ್ನು ಬೆಳೆಯಲಾಗುತ್ತದೆ. ಅರೇ! ಇದರಲ್ಲೇನಪ್ಪಾ ವಿಶೇಷ? ಅಂತ ನಿಮಗನಿಸಬಹುದು ಅಲ್ವಾ! ವಿಶೇಷ ಇರೋದು ಇದರಲ್ಲೇ! ಕುಮಟಾದ ಮೇದಿನಿ ಎಂಬ ಕುಗ್ರಾಮದಲ್ಲಿ ಬೆಳೆಯುವ ಈ ವಿಶಿಷ್ಟ ತಳಿಯ ಭತ್ತ 'ಮೇದಿನಿ ಸಣ್ಣಕ್ಕಿ' ಎಂದೇ ಪ್ರಸಿದ್ಧ. ಭತ್ತ ಬೆಳೆಯುವ ಸಮಯದಲ್ಲೇ ಊರ ತುಂಬಾ ಸುವಾಸನೆ ಪಸರಿಸುವುದು ಇದರ ವಿಶೇಷತೆ.

ಏನಿದರ ವಿಶೇಷತೆ

ಇತರ ತಳಿಗಳ ಭತ್ತಕ್ಕಿಂತ ಚಿಕ್ಕದಾಗಿರುವ ಈ ಭತ್ತದ ಅಕ್ಕಿ ಕಾಳುಗಳು ಚಿಕ್ಕದಾಗಿ ಗುಂಡಾಗಿ ಇರುವುದರಿಂದಾಗಿ 'ಸಣ್ಣಕ್ಕಿ' ಎಂಬ ಹೆಸರನ್ನು ಪಡೆದಿದೆ. ಇದರಲ್ಲಿ ಹೈಬ್ರಿಡ್ ಅಕ್ಕಿಗಳಂತೆ ಹೆಚ್ಚು ತೆನೆ ಬರುವುದಿಲ್ಲ, ತೆನೆ ಮಾಗುವ ಹೊತ್ತಿಗೆ ಸುವಾಸನೆ ಬೀರಲಾರಂಭಿಸುತ್ತದೆ.

ದೂರದೂರುಗಳಿಂದಲೂ ಬೇಡಿಕೆ: ಅಕ್ಕಿ ಪಾಯಸ, ಕೇಸರಿಬಾತ್, ಬಿರಿಯಾನಿ ಮಾಡಲು ಪರಿಮಳ ಸಣ್ಣಕ್ಕಿ ಹೆಚ್ಚು ಜನಪ್ರಿಯ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ, ಸಿದ್ದಾಪುರ, ಕುಮಟಾ ತಾಲೂಕಿನ ವಿವಿಧ ಭಾಗದ ಜನರು ಈ ಅಕ್ಕಿಯನ್ನು ಕೊಳ್ಳಲು 8 ಕಿಮೀಗಿಂತಲೂ ಹೆಚ್ಚು ದೂರ ಇಲ್ಲಿಗೆ ನಡೆದು ಬರುವುದು ವಿಶೇಷ.

ಇಳುವರಿ ಕಡಿಮೆ

ಒಂದು ಎಕರೆಗೆ ಸುಮಾರು 8-10 ಕ್ವಿಂಟಾಲ್ ಭತ್ತ ಬರುವುದರಿಂದ ಮೇದಿನಿಯ ಪರಿಮಳ ಸಣ್ಣಕ್ಕಿಯ ಇಳುವರಿ ಇತರ ತಳಿಯ ಭತ್ತಕ್ಕಿಂತ ಕಡಿಮೆ. ಜೊತೆಗೆ ಈ ಅಕ್ಕಿಯ ಸುವಾಸನೆಗೆ ಕಾಡುಪ್ರಾನಿಗಳ ಹಾವಳಿಯೂ ಹೆಚ್ಚು. ಹೀಗಾಗಿ ಮೇದಿನಿಯ ಗ್ರಾಮಸ್ಥರು ಸಣ್ಣಕ್ಕಿಯ ಬದಲಾಗಿ ಊಟದ ಭತ್ತವನ್ನು ಬೆಳೆಯಲು ಆರಂಭಿಸಿದ್ದಾರೆ.

ಎಂಥದೇ ಇರುಳನ್ನು ದಾಟಬಹುದು ಹಚ್ಚಿಟ್ಟ ಕಂದೀಲು ಕೈಲಿದ್ದರೆ
ಹಣೆಬರಹ ಕೈಯಾರೆ ಬರೆಯಬಹುದು ಎದೆಯಲ್ಲಿ ಅಕ್ಷರ ಬಿತ್ತಿದ್ದರೆ

- ಜಯಂತ ಕಾಯ್ಕಿಣಿ

ಕಾವ್ಯ ಸಮ್ಮೇಳನ



ಕಲುಷಿತ ವಾತಾವರಣ

ನಗರದ ಚಿತ್ರವನ್ನು ಗೋಡೆಗೆ ನೇತುಹಾಕಿದರೆ
ಅದರಲ್ಲಿ ಸಾವಿರಾರು ಜಲಪಾತಗಳು
ಎಲ್ಲವಕ್ಕೂ ಕಡುಗಪ್ಪು ಬಣ್ಣ
ಎಲ್ಲ ಜಲಪಾತಗಳಲ್ಲೂ ಭೋರ್ಗರೆಯುತ ಹರಿವ
ಜಲರೂಪಿ ವಾಹನಗಳು, ಜಲರೂಪಿ ಜನಗಳು
ಕೆಂದಾವರೆ ಕಂಡಲ್ಲಿ ನಿಂತು, ಘಳಿಗೆ ಕಾದು,
ಹೂವು ಹಸಿರಾದದ್ದೇ ಮತ್ತೆ ದುಡುದುಡು ಇಳಿವ
ನಿಶ್ತಂತು ಶರಧಿಪರಿ ಧಾರೆ

ಎತ್ತ ಹೋಗುತ್ತಿದ್ದೇವೆ ಎಲ್ಲ?
ಹಾಹಾಕಾರ ಅಲ್ಲಲ್ಲಿ;
ಕಲುಷಿತ ವಾತಾವರಣ!
ಕಲುಷಿತ ವಾತಾವರಣ!!
ಉಸಿರಾಡಲೂ ಇಲ್ಲ ಬೇಕಾದಷ್ಟು ಸ್ವಚ್ಛಗಾಳಿ
ಹಿಂದೆ ತಿರುಗಿ ನೋಡಿದರೆ
ನಮ್ಮ ವಾಹನವೂ ಉಗುಳುತ್ತಿದೆ ಹೊಗೆ
ಕೊಡಿ ಶಾಲೆಗಳಿಗೆ ರಜೆ
ಮಾಡಿ ಕೆಲಸ ಮನೆಯಿಂದಲೇ
ಸಮ ಬೆಸ ಸಾಮು ಶುರುವಾಗಿದೆ ಮತ್ತೆ

ಒಂದು ದೇಹ ಎಷ್ಟು ತುಂಡಾಯಿತೆಂಬ ಲೆಕ್ಕ
ಒಂದು ರಸ್ತೆಯಲೆಷ್ಟು ಗುಂಡಿಗಳಿವೆಯೆಂಬ ಲೆಕ್ಕ
ಒಂದು ಭಾಷಣದಲ್ಲೆಷ್ಟು ಸುಳ್ಳಡಗಿತ್ತೆಂಬ ಲೆಕ್ಕ
ಒಂದು ಗುಂಪಲ್ಯಾರು ಎಡ ಯಾರು ಬಲವೆಂಬ ಲೆಕ್ಕ
ಒಂದು ಸಮಜಾಯಿಷಿಯಲ್ಲಿ ಮುಚ್ಚಿಟ್ಟಿದ್ದೆಷ್ಟೆಂಬ ಲೆಕ್ಕ
ಒಂದು ಮಳೆಬಿಲ್ಲು ಎಷ್ಟು ಹನಿಗಳ ಹಾದು ಬಂತೆಂಬ ಲೆಕ್ಕ
ಯಾರು ಕೊಡುವರು
ಒಂದು ಲೆಕ್ಕದಲ್ಲೆಷ್ಟು ತಪ್ಪಿದೆಯೆಂಬ ಲೆಕ್ಕ

ಕುಳಿತಿದ್ದೇವೆ ಕರಿಹಲಗೆಯ ಮುಂದೆ ಎಲ್ಲ
ಯುಗಯುಗದಲ್ಲೂ ಮೂಡಿಬರುವೆನೆಂದಿದ್ದ ಮೇಷ್ಟ್ರು
ಯಾಕೋ ಇನ್ನೂ ಬಂದೇ ಇಲ್ಲ
ಇನ್ನೂ ಯಾವ ಬೆಲ್ ಹೊಡೆಯಲು ಕಾಯುತ್ತಿರುವರೋ
ಈಗ ಈ ಲೆಕ್ಕವನ್ನೆಲ್ಲ ಬಿಡಿಸಬೇಕಿದೆ ನಾವೇ
ನಮ್ಮನಮ್ಮ ಪುಸ್ತಕದಲ್ಲಿ ನಮನಮಗೆ ತಿಳಿದಂತೆ
ನಮ್ಮನಮ್ಮ ಲೆಕ್ಕ ಬಿಡಿಸಿ ತುಂಬಿಸಬೇಕಿದೆ ಪುಟಗಳ
ನೆರೆಯವರು ನೆರೆದವರು ನೆರವಾಗುವವರು
ಎಷ್ಟು ಕಾಲ ಜೊತೆಗಿರುವರೋ ಯಾರಿಗೆ ಗೊತ್ತು?
ಪುಸ್ತಕವ ಚೀಲದಲ್ಲಿಟ್ಟು ಜಿಗಿಯಲೇಬೇಕು
ಆ ಅದೇ ಜಲಪಾತಕ್ಕೆ; ಆಗುವ ಹಂಬಲದಲ್ಲಿ
ಹರಿವ ನೀರೊಳಗಿನ ಮತ್ತೊಂದು ಬಿಂದು.



ಸುಶ್ರುತ ದೊಡ್ಡೇರಿ

ಶ್ಯಾಮೆಯಾದ ಯಮುನೆ

ಪಿಸುಮಾತುಗಳನಾಡುತಿರೆ ರಾಧೆ ಶ್ಯಾಮನೊಳು
ನಗುತಿದ್ದನವನಲ್ಲಿ ಯಮುನೆ ತಟದಿ ।
ಬರಿದೆ ನಗುವೇಕೆನುತ ಮುನಿಸತೋರಲು ನಲ್ಲೆ
ಕಿವಿಯಲೇನೋ ಪೇಳುತಿದ್ದ ಸೊಗದಿ ॥ 1 ॥

ಪ್ರೇಮಿಗಳ ಸರಸ ಸಲ್ಲಾಪವನು ನೋಡುತ್ತ
ಕೇಳದಿಹ ಮಾತಿಂಗೆ ಯಮುನೆ ಕೊರಗಿ -
ಒಲವಿನುಲಿಗಳನಾಲಿಸುವ ಬಯಕೆಯನು ಹೊತ್ತು
ಸದ್ದಿರದೆ ಹರಿದಿಹಳು ದಡಕೆ ಬಾಗಿ ॥ 2 ॥

ತಾನಿದ್ದಕಡೆ ಮೆಲ್ಲ ಮೇಲೇರಿ ಬರುತಲಿಹ
ಯಮುನೆಯಾಂತರ್ಯವನು ಶ್ಯಾಮನರಿತು -
ಸಣ್ಣ ಕಲ್ಲನು ಹೆಕ್ಕುತಲಿ ಸಹಜದಿಂದೆಸೆದು
ಅಲೆಯೆಬ್ಬಿಸಿದನಾತ ರಾಧೆಗಾತು ॥ 3 ॥

ಮಧ್ಯರಾತ್ರಿಯಲಂದು ಸೀಳಿಕೊಂಡೆನು ನನ್ನ
ನಿನ್ನ ಬದುಕಿಸುವಾಸೆಯನ್ನು ತಳೆದು ।
ದಡದಿ ಬೆಡಗಿಯ ಜೊತೆಗೆ ಭುಜಬಳಸಿ ಕುಳಿತೀಗ
ಕೆಣಕುತಿಹೆ ನನ್ನ ನೀ ಕಲ್ಲನೆಸೆದು ॥ 4 ॥

ಮಾಡಿದುಪಕಾರಗಳ ಮರೆತೆಯೇನೋ ಶ್ಯಾಮ
ನಿನಗೀಜು ಕಲಿಸಿದ್ದೆನೊಡಲಿನಲ್ಲಿ ।
ಸೊಕ್ಕು ತೋರುವೆಯೀಗ 'ದಕ್ಕದಿರಲೀ ರಾಧೆ'-
ಯೆನುತ ಹರಿದಳು ಯಮುನೆ ಕೋಪದಲ್ಲಿ ॥ 5 ॥

ಗಂಭೀರ ನುಡಿಗಳಿಗೆ ದಿಗಿಲುಗೊಂಡನು ಶ್ಯಾಮ
ಧುಮುಕಿದನು ತಡಮಾಡದೆಲೆ ಯಮುನೆಗೆ ।
ಶ್ಯಾಮನಾಲಿಂಗನಕೆ ಕಪ್ಪಗಾಯಿತು ನೀರು
ಬೊಗಸೆಯಲಿ ಮರಳೆತ್ತಿ ತಂದ ದಡೆಗೆ ॥ 6 ॥

ಹಸಿಮೈಯನೊರೆಸಿದಳು ನಲ್ಲೆ ದಾವಣಿಯಿಂದ
ಶ್ಯಾಮ ಕುಸಿದನು ಬೊಗಸೆ ನೋಡಿ ಬೆವತು ।
ಹುಡುಕಿದನು ಸಿಗಲಿಲ್ಲ ತಾನೆಸೆದ ಕಲ್ಲುಗಳು
ಯೋಚಿಸುತಲಿಹನೀಗ ರಾಧೆ ಕುರಿತು ॥ 7 ॥

ಕುಟಿಲಪ್ರೀತಿ

ಮೊಗದ ಮೇಲಿನ ನಗೆಗೆ ದ್ವೇಷದುರಿಯನು ತೀಡಿ
ತಿಳಿಬಗೆಗೆ ಕೆಸರೆರಚೊ ಕುಟಿಲವೇಕೆ? ।
ನಡುಬೀದಿಯಲಿ ಸಿಕ್ಕ ಭರವಸೆಯ ಕತ್ತಮುಕಿ
ಉಸಿರುಗಟ್ಟಿಸುವಂಥ ಛಲವಿದೇಕೆ? // 1 //

ನಿತ್ಯವರಳುವ ನಗೆಯ ಮಲ್ಲಿಗೆಯ ದೂರುತಲಿ
ಮನದಾಸೆ ಮುರುಟಿಸುವ ಮದವಿದೇಕೆ? ।
ಸತ್ಯ ತೆರೆದಿಡೊ ಮನವು ಮಿಥ್ಯವಲ್ಲದ ಪ್ರೀತಿ
ಬೇಡವೆನ್ನುವ ಬರಡು ಶಪಥವೇಕೆ? // 2 //

ಕನಸುಗಂಗಳ ಸುಟ್ಟ ಶುಷ್ಕಭಾವಗಳೊಲವು
ಮುಸಿನಗುತ ನೆಮ್ಮದಿಯ ನುಂಗುತಿರಲು ।
ತೆವಳಲುಳಿವುದೆ ಕಸುವು? ಹಾರಲಿರುವುದೆ ರೆಕ್ಕೆ?
ಕುಸಿದ ನಂಬುಗೆ ಬದುಕು ನರಳುತಿರಲು // 3 //



ಸತೀಶ್ ಹೆಗಡೆ ಶಿರಸಿ



ಇದೇ ಆರಂಭದ ಹಕೀಕತು

ಹೊಸದಂತೆ...
ವರ್ಷ ಹೊಸದಂತೆ!
ಏನು ಹೊಸದೋ...
ರಾತ್ರಿ ಬೆಳಗಾಗುವಾಗ
ಹಳತೆಲ್ಲವೂ ಹೊಸತು
ಎಲ್ಲರೊಟ್ಟಿಗೆ ಕಲೆತು
ಕೂಗಿ, ಕಿರುಚಿ, ಬೊಬ್ಬೆ ಹಾಕಿ
ಕುಡಿದು, ಕುಣಿದು
ಕೇಕ ಕಡಿದು
ರಸ್ತೆ ತಡೆದು
ಪಟಾಕಿ ಹೊಡೆದು
ಮಾಡುವುದೇಕೆ?
ಸಭ್ಯರಿಗೆಲ್ಲ ಅಸಭ್ಯತೆಯ ದರ್ಶನ?
ದಿನವೂ ಏಕೆ ಹೊಸತಲ್ಲ?
ಅಂದು ಮಾತ್ರ ಹೊಸದೇ...
ಕ್ಯಾಲೆಂಡರ್‌ನ ದಿನ ಮುಗಿದರೆ
ಹಳತೆಲ್ಲವೂ ಹೊಸತೇ

ದಿನವೂ ಏಕೆ ಸೇರಬಾರದು
ಸಂತಸದಿ ಕಳೆಯಬಾರದು?
ಮಾತು ಹಾಡು ಕೇಕೆ
ಕುಣಿತ ಮಾತ್ರ ಸಾಕೆ?
ನಿರಂತರ ಸಂಭ್ರಮಕೆ,
ಇನ್ನು ಬೇರೆ ಬೇಕೆ?
ಬದಲಾಗದ ಋತು
ಇಳಿಯದ ಮತ್ತು
ಇದೇ ಆರಂಭದ ಹಕೀಕತು.



ಹೋರಾಡುತ್ತಿದ್ದೇವೆ...!?

ನಮ್ಮೆಲ್ಲರ ಅಸ್ತಿತ್ವದ ಆದಿಯಿಂದಲೂ
ಅಮ್ಮನೊಡಲಲ್ಲಿ, ಸಾವಿರ ವೀರ್ಯಗಳ ಹಿಂದಿಕ್ಕಿ
ನೆಮ್ಮದಿಯ ಮಡಿಲ ಸೇರಲು,
ಗುಮ್ಮನೊಡನೆಯೂ ಹೋರಾಟವೇ
ನಮ್ಮಿಷ್ಟದ ಆಟಕ್ಕೂ ಊಟಕ್ಕೂ,
ತಮ್ಮ ತಂಗಿ ಅಣ್ಣ ಅಕ್ಕ ಅವರನ್ನೂ ಬಿಡದೆ,
ಸುಮ್ಮನಿರಲಾಗದೇ, ಮಾಡುತ್ತಲೇ ಬಂದಿದ್ದೇವೆ ಯುದ್ಧ!

ಎತ್ತ ಹೋದರತ್ತ ಕಾದಾಡುತ್ತೇವೆ ಈಗಲೂ
ನೆತ್ತರುಕ್ಕಿಸುವ ಗಡಿಗಳಲ್ಲಿ, ಯೋಧರ ಬಲಿಯಿಕ್ಕಿ
ಇತ್ತಲಿಂದಾಚೆಗೆ ನೆಲವ ಪಡೆಯಲು,
ಹೊತ್ತ ಇಳೆಗೂ ಬೇಲಿ ಹಾಕುವುದೇ?
ಬತ್ತದ ಬಯಕೆ ಅಕಾರಕ್ಕೂ ಐಶ್ವರ್ಯಕ್ಕೂ
ಮತ್ತಿನ್ನು ಆಪರಿಯ ದುರಾಸೆಯ ತೊಲಗಿಸದೆ,
ಕಿತ್ತೊಗೆಯಲಾರದೇ, ಮಾಡುತ್ತಲೇ ಬಂದಿದ್ದೇವೆ ಯುದ್ಧ!

ಕಿಚ್ಚು ಹಚ್ಚಿಕೊಳ್ಳುತ್ತೇವೆ ಚಿತ್ತಕ್ಕೆ ಯಾವಾಗಲೂ
ಹುಚ್ಚೆದ್ದು ಕುಣಿದ ಮನ ಅತ್ತಿದ್ದೂ ಇದೆ ಬಿಕ್ಕಿ ಬಿಕ್ಕಿ
ಬೆಚ್ಚಗಿಡದೇ ಬೆಚ್ಚಿಸುವ ಸೋಲು,
ಮೆಚ್ಚಿದ್ದೆಲ್ಲವ ನೀಡುವ ಗೆಲುವೇ ಒಲವೇ?
ಹೊಚ್ಚಹೊಸದೇನಲ್ಲ, ರಾಮನಾಡಿದ್ದಕ್ಕೂ ಪಾರ್ಥನಾಡಿದ್ದಕ್ಕೂ,
ಮುಚ್ಚಿಡಲಾಗದ ಆಂತರಿಕ ದ್ವಂದ್ವ ಎಡೆಬಿಡದೆ,
ಕೊಚ್ಚಿಹಾಕಲಾರದೇ, ಮಾಡುತ್ತಲೇ ಬಂದಿದ್ದೇವೆ ಯುದ್ಧ!

ಎಂಥಾ ಮಧುರ ಗಳಿಗೆಯದು

ಎಂಥಾ ಮಧುರ ಗಳಿಗೆಯದು
ಜೋರಾದ ಮಳೆಯ ಜೊತೆಗೆ
ಒಂದೇ ಛತ್ರಿಯ ಒಳಗೆ
ಕೈಗೆ ಕೈಯ್ಯ ಬೆಸುಗೆ
ಮೈ ನಡುಗುತಿತ್ತು ಚಳಿಗೆ
ಕಿತ್ತೋದ ಚಪ್ಪಲಿಯೊಂದಿಗೆ
ನಮ್ಮ ಆ ನಡಿಗೆ
ಹಾತೊಯುತಿತ್ತು ಮನ
ಪಾನೀಪುರಿಗೆ

ಹೋದೆವು ಪುಟ್ಟನ ಬಳಿಗೆ
ಪುಟ್ಟ ತಗಡಿನ ಕೆಳಗೆ
ಛತ್ರಿಯನಿಟ್ಟು ಸೈಡಿಗೆ
ಆಸೆಪಟ್ಟು ನೀರ ಪುರಿಗೆ

ಗೊತ್ತಿತ್ತು ಪುಟ್ಟನಿಗೆ
ಅವನೇ ಗತಿ ನಮಗೆ
ಹೋಗುತ್ತಿದ್ದೆವಲ್ಲ ಆಗ್ಗಾಗ್ಗೆ
ಜೋಡಿ ಹಕ್ಕಿಗಳ ಹಾಗೆ

ಕಿವುಚಿದ ಪುರಿ ಮಸಾಲೆಗೆ
ಖಾರದ ನೀರು ತೂತಿನೊಳಗೆ
ದಹಿ ಹಾಕಿ ಸುರಿದವಗೆ
ತುಂಬ ಸೇವಿನ ಮುಚ್ಚಿಗೆ
ಪ್ರಾಣವಿದು ನಮ್ಮ ಜೋಡಿಗೆ
ಪುಟ್ಟ ನಗುತ್ತ ಸುಮ್ಮಗೆ
ನಲವತ್ತನಿಳಿಸುತ್ತ ಜೇಬಿಗೆ
ಸುರಿದ ಪಾನಿಯ ಕೊನೆಗೆ





ಕೃತಿಕಾರಾಣಿ ಟಿ.ಎಸ್

ಸಾಹಿತ್ಯೋಪನಿಷತ್ತು

ಯಾರೋ ಬರೆದಾಗ ಮೆಚ್ಚುಗೆಯಾಗುತ್ತದೆ. ಅದನ್ನು ಓದುತ್ತೇವೆ. ಓದಿದ ಪಾತ್ರದ ಜೊತೆ ನಮ್ಮನ್ನು ಗುರುತಿಸಿಕೊಳ್ಳುತ್ತೇವೆ. ನಾವೇ ವಾಸಿ ಅನಿಸುತ್ತದೆ ಅಥವಾ ನಾನು ಅನಿವಾಸಿ ಎನಿಸುತ್ತದೆ. ಒಂದು ಸಣ್ಣ ಬದಲಾವಣೆ ನಮ್ಮಲ್ಲಿ ನಮಗೆ ಗೊತ್ತಿಲ್ಲದೆ ಆಗುತ್ತದೆ. ಅದು ಸಾಹಿತ್ಯಕ್ಕಿರುವ ಶಕ್ತಿ.



ಜೋಗಿ
ಮಸಾಲ ದೋಸೆಗೆ ಕೆಂಪು ಚಟ್ನಿ ಪುಸ್ತಕದಿಂದ

ಅಚ್ಚರಿಜಗತ್ತು

ಮಾತನಾಡುವ ಗ್ರಂಥಾಲಯಗಳು!


ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ 2000 ನೇ ಇಸ್ವಿಯಲ್ಲಿ ಪ್ರಾರಂಭವಾದ 'ಮಾತನಾಡುವ ಗ್ರಂಥಾಲಯ'ದಲ್ಲಿ ಪುಸ್ತಕಗಳನ್ನು ಓದುವ ಬದಲಾಗಿ ಜನರನ್ನೇ ಓದಬಹುದು! ವಿಚಿತ್ರ ಅನಿಸಬಹುದಲ್ಲವೇ? ಆದರೆ ಇದು ಸತ್ಯ. ಇಲ್ಲಿ ಪುಸ್ತಕದ ಬದಲಾಗಿ ಜನರನ್ನೇ ಎರವಲು ಪಡೆದು ಅವರ ಜೀವನದ ಕಥೆಗಳನ್ನು ಕೇಳಬಹುದು. ಎಲ್ಲರೊಳಗೂ ಒಂದಿಷ್ಟು ಕಥೆಗಳಿರುತ್ತವೆ. ಅಂತಹ ಕಥೆಗಳನ್ನು ಅವರ ಮೂಲಕವೇ ಕೇಳುವ ಅನುಭವವನ್ನು ಇಲ್ಲಿ ಪಡೆಯಬಹುದು. ಅಂದಹಾಗೆ 'ದಿ ಹ್ಯೂಮನ್ ಲೈಬ್ರರಿ' ಅಂತಾರಾಷ್ಟ್ರೀಯ ಎನ್‌ಜಿಒ ನಡೆಸುತ್ತಿರುವ ಈ ರೀತಿಯ ಗ್ರಂಥಾಲಯಗಳು 80 ಕ್ಕೂ ಅಧಿಕ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.



ಕಾದಂಬರಿಗೊಂದು ಕಥೆ

ಕಾಲದಿಂದ ಬದಲಾವಣೆ ಮೈಗೂಡಿಸಿಕೊಳ್ಳುತ್ತಾ, ಭಾಷೆಯ ಪರಿವರ್ತನೆಯನ್ನು ತನ್ನದಾಗಿಸಿಕೊಳ್ಳುತ್ತಾ, ಸಾಮಾಜಿಕ ಪರಿವರ್ತನೆಗಳಿಗೆ ಒಗ್ಗಿಕೊಂಡು ಕಾದಂಬರಿಗಳು ಬದಲಾವಣೆ ಕಂಡಿದ್ದರಿಂದ ಕಾಲದಿಂದ ಕಾಲಕ್ಕೆ ಅದರ ಸ್ವರೂಪದಲ್ಲಿಯೂ ಹಲವಾರು ಮಾರ್ಪಾಡುಗಳಾಗಿವೆ. ಪ್ರತಿ ಬಲಾವಣೆಯಲ್ಲೂ ಹೊಸದೊಂದುನ್ನು ಕಲಿತುಕೊಂಡು ಅಳವಡಿಸಿಕೊಂಡದ್ದರಿಂದ ಕಾದಂಬರಿಗಳು ಇನ್ನೂ ಪ್ರಸ್ತುತ ಮತ್ತು ಜನಪ್ರಿಯ.

ಕಾದಂಬರಿ ಸಾಹಿತ್ಯಲೋಕದ ಬೃಹತ್ ಬೇರು. ಹಳೆಗನ್ನಡ, ಹೊಸಗನ್ನಡ ಎಲ್ಲಾ ಕಾಲದಲ್ಲೂ ತನ್ನ ಬಾಹನ್ನು ಚಾಚಿದ ಮೇರು ಪ್ರಕಾರ. ಭಯಾನಕ, ಕರುಣೆ, ಪ್ರೇಮ ಹೀಗೆ ನವರಸಗಳನ್ನು ಹೊತ್ತು ಎಲ್ಲಾ ವಿಧದ ಓದುಗರನ್ನು ತನ್ನತ್ತ ಬಾಚಿಕೊಳ್ಳತ್ತದೆ. ಮೊದಲೇ ಕಾದಂಬರಿಯಾಗಿ ಬಂದತಂಹ ಪುಸ್ತಕಗಳು, ಧಾರವಾಹಿ ಸ್ವರೂಪದಿಂದ ಕಾದಂಬರಿಯಾದ್ದು, ಅಂಕಣಗಳು ವಿಸ್ತಾರಗೊಂಡು ಕಾದಂಬರಿಯಾಗಿದ್ದು, ಕಾದಂಬರಿಗಳು ಚಲನಚಿತ್ರಗೊಂಡದ್ದು ಎಲ್ಲವೂ ಇದರ ಕಲಾ ವಿಸ್ತಾರಕ್ಕೆ ಸಾಕ್ಷಿ. ಕಾದಂಬರಿಯಿಂದ ಜನಮಾನಸದಲ್ಲಿ ನೆಲೆನಿಂತವರು, ಇದರಿಂದಲೇ ಬದುಕು ಕಟ್ಟಿಕೊಂಡವರು, ವಿರೋಧಗಳನ್ನು ಮೈಗೆಳೆದುಕೊಂಡವರು ಹೀಗೇ ಹತ್ತು ಹಲವರಿದ್ದಾರೆ. ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲದೇ ಜಗತ್ತಿನ ಬಹುಭಾಷಾ ಸಾಹಿತ್ಯದಲ್ಲಿ ಕಾದಂಬರಿಯ ಜಾಗ ದೊಡ್ಡದು.





ಸುಚೇತಾ ಹೆಗಡೆ

ಕಾಲದಿಂದ ಬದಲಾವಣೆ ಮೈಗೂಡಿಸಿಕೊಳ್ಳುತ್ತಾ, ಭಾಷೆಯ ಪರಿವರ್ತನೆಯನ್ನು ತನ್ನದಾಗಿಸಿಕೊಳ್ಳುತ್ತಾ, ಸಾಮಾಜಿಕ ಪರಿವರ್ತನೆಗಳಿಗೆ ಒಗ್ಗಿಕೊಂಡು ಕಾದಂಬರಿಗಳು ಬದಲಾವಣೆ ಕಂಡಿದ್ದರಿಂದ ಕಾಲದಿಂದ ಕಾಲಕ್ಕೆ ಅದರ ಸ್ವರೂಪದಲ್ಲಿಯೂ ಹಲವಾರು ಮಾರ್ಪಾಡುಗಳಾಗಿವೆ. ಪ್ರತಿ ಬಲಾವಣೆಯಲ್ಲೂ ಹೊಸದೊಂದನ್ನು ಕಲಿತುಕೊಂಡು ಅಳವಡಿಸಿಕೊಂಡಿದ್ದರಿಂದ ಕಾದಂಬರಿಗಳು ಇನ್ನೂ ಪ್ರಸ್ತುತ ಮತ್ತು ಜನಪ್ರಿಯ. ಪ್ರತಿಯೊಂದು ಕಾದಂಬರಿಯೂ ಇನ್ನೊಂದಕ್ಕಿಂತ ಭಿನ್ನವಾಗಿದ್ದರೂ, ಪ್ರತಿ ರಚನಾ ಶೈಲಿಗಳು ಲೇಖಕನ ವಿಷಯ ಆಯ್ಕೆ ಹಾಗೂ ನಿರೂಪಣಾ ಶೈಲಿಯ ಆಧಾರದ ಮೇಲೆ ಕಾದಂಬರಿಯ ಪರಿ ನಿಂತಿದ್ದರೂ ಕೂಡ ಕೃತಿ ರಚನೆಯಲ್ಲಾಗುವ ಸಾಮಾನ್ಯ ಬದಲಾವಣೆಯನ್ನು ನಾವು ಕಾಣಬಹುದು.

ಈ ಮೊದಲು ಕಾದಂಬರಿಯ ಗಾತ್ರ, ಭಾಷೆಯ ಶ್ರೀಮಂತಿಕೆಗಳೆಲ್ಲವೂ ಕಾದಂಬರಿಯ ಯಶಸ್ಸಿನ ಬಹುಪಾಲಾಗಿತ್ತು. ಸಾಮಾಜಿಕ ಸಮಸ್ಯೆಗಳ ವಿವರಣೆ, ಪುರಾಣಗಳ ಆಧಾರದ ಮೇಲೆ ಕಥೆ ರಚನೆ ಇವೆಲ್ಲವೂ ಮುಂಚೂಣಿಯ ವಿಷಯಗಳಾಗಿತ್ತು. ಲೇಖಕ ಭಾಷಾ ಶುದ್ಧತೆಗೆ ಹಾಗೂ ಪಂಗಡಾತೀತ ಮನೋಭಾವ ಹೊಂದಿದ್ದರಿಂದ ಕಾದಂಬರಿಯು ಹೆಚ್ಚು ಜನಮನ್ನಣೆಗಳಿಸುವುದಲ್ಲದೇ, ಜ್ಞಾನಪೀಠದಂತಹ ಪ್ರಶಸ್ತಿಗಳಿಗೂ ಆ ಕಾಲದಲ್ಲಿಯೇ ಹೆಚ್ಚು ಭಾಜನವಾಯಿತು. ಕುವೆಂಪು, ಕಾರಂತರ ಕಾದಂಬರಿಗಳಲ್ಲಿ ಹಾಸ್ಯಗಳನ್ನು ಬಳಸಿದ್ದರೂ ಕಥೆಗಳಲ್ಲಿ ಹಾಸ್ಯಾತ್ಮಕ ಪಾತ್ರವೂ ಪ್ರಾಮುಖ್ಯತೆ ಪಡೆದಿರುವುದು ಆಗಿನ ವಿಶೇಷ. ಆದರೆ ಬಹು ಗಂಭೀರ ಪಾತ್ರಗಳ ನಡುವೆ ಕೆಲವೊಮ್ಮೆ ಕಳೆದುಹೋಗಿದ್ದು, ಹಾಗೂ ಕೆಲ ಪಾತ್ರಗಳು ಆ ಕಾಲಮಾನಕ್ಕನಗುಣವಾಗಿದ್ದರಿಂದ ಸಾಮಾನ್ಯ ಓದುಗನಿಗೆ ತುಸು ಕಷ್ಟವೆನಿಸಬಹುದು. ಇಲ್ಲಿ ಕಾದಂಬರಿ ಕಥೆಗಳಿಗೆ, ಪಾತ್ರಗಳಿಗೆ ನೈಜ ಘಟನೆಗಳು ಪ್ರಭಾವ ಬೀರಿದ್ದರೂ, ಅದನ್ನು ಸಾಹಿತ್ಯಾತ್ಮಕ ನೆಲೆಗಟ್ಟಿನಲ್ಲಿ ನೋಡಿದ್ದು ಆ ಕಾಲದ ಪದ್ಧತಿಗಳಲ್ಲೊಂದು. ಪ್ರತಿಯೊಂದರಲ್ಲಿಯೂ ಭಾಷಾ ಶುದ್ಧತೆಯನ್ನು ನಾವು ಕಂಡರು ಲೇಖಕರ ಶೈಲಿಯಲ್ಲಿ ಭಿನ್ನತೆಯಿದ್ದರಿಂದ ಹಲವರು ಕ್ಲಿಷ್ಟ ಮಾದರಿಯನ್ನು ತಮ್ಮದಾಗಿಸಿಕೊಂಡರೆ ಇನ್ನು ಕೆಲವರು ಸರಳ ಭಾಷೆಯ ಶುದ್ಧ ಕನ್ನಡವನ್ನು ಆಯ್ದುಕೊಂಡರು. ಪ್ರಮುಖವಾಗಿ ಎಡ ಮತ್ತು ಬಲ ಪಂಗಡಗಳ ಇಲ್ಲಿಂದ ಹೆಚ್ಚಾದ್ದರಿಂದ ಕಾದಂಬರಿಯ ಮೇಲೂ ಅದನ್ನು ಕಾಣಬಹುದು.

ಇದರ ನಂತರ ಸಾಹಿತ್ಯಲೋಕವು ಹೋರಾಟದತ್ತ, ಚಳುವಳಿಯತ್ತ ಮುಖ ಮಾಡಿದ್ದೂ ಕಾದಂಬರಿಯ ಪ್ರಕಾರಕ್ಕೂ ಪರಿಣಾಮ ಬೀರಿದೆ. ಅದಷ್ಟೇ ಅಲ್ಲದೇ ಆ ಕಾಲದ ಬಹುತೇಕ ಕಾದಂಬರಿಗಳು ಸಮಾಜದ ತೊಡಕುಗಳನ್ನು ವಿವರಿಸುವ ಶೈಲಿ, ಕಾದಂಬರಿಯ ಪಾತ್ರಗಳಲ್ಲಿ ಹೋರಾಟ ಮನೋಭಾವದ ನಾಯಕ - ನಾಯಕಿಯರು, ಹೀಗೆ ಹಲವು ಇದಕ್ಕೆ ಸಾಕ್ಷಿಗಳು. ಭಾಷಾ ಕಠಿಣತೆಯು ಇಲ್ಲಿ ಸಡಿಲಗೊಂಡಿದ್ದು, ಸರಳ ಭಾಷೆ, ಇಂಗ್ಲೀಷ್ ಮಿಶ್ರಿತ ಭಾಷೆಗಳನ್ನು ಇಲ್ಲಿ ಕಾಣಬಹುದು. ಸತ್ಯಘಟನೆಯನ್ನು ಆಧರಿಸಿದ ಕತೆಗಳು ಇಲ್ಲೂ ಬಂದಿದ್ದರು ಕೂಡಾ, ಕಾಲ್ಪನಿಕ ಸ್ಪರ್ಷ ನೀಡಿದ್ದು, ಘಟನೆಗಳಿಗೆ ಹತ್ತಿರವಾಗುವಂತೆ ಬರೆದಿದ್ದು ಈ ಕಾಲದ ಪ್ರಮುಖ ಧಾಟಿ. ಈ ಕಾಲದಲ್ಲಿ ಸಾಹಿತ್ಯಾತ್ಮಕ ನೆಲೆಗಟ್ಟಿನಲ್ಲಿ ವಿಷಯವನ್ನು ವಿಸ್ತರಿಸುವ ಪರಿ ತುಸು ಹಿಂದೆ ಸರಿದು ವಿಶ್ಲೇಷಣಾತ್ಮಕ ಮತ್ತು ಭಾವನಾತ್ಮಕ ನೆಲೆಗಟ್ಟಿನಲ್ಲಿ ನೋಡವವರ ಸಂಖ್ಯೆಯೂ ಹೆಚ್ಚಾಯಿತು.

ನವ ಕಾಲಮಾನದಲ್ಲಿನ ಬರಹಗಳಿಗೆ ಬಹುತೇಕ ಎಲ್ಲಾ ಕಾಲದ ಶೈಲಿಗಳ ಪ್ರಭಾವ ಬೀರಿದ್ದು, ಆಕರ್ಷಣೆಯೇ ಇದರ ಮೂಲ ಮಂತ್ರವಾಗಿದೆ. ಭಾಷೆಯೂ ಇಂಗ್ಲೀಷ್‌ನೊಂದಿಗೆ ಬೆರೆತುಕೊಂಡಿದ್ದು, ಆಡುಮಾತಿನ ಬಹುಪಾಲನ್ನು ಅಕ್ಷರದಲ್ಲಿಯೂ ಕಾಣಬಹುದು. ವಿಷಯ, ನಿರೂಪಣಾ ಶೈಲಿಯಷ್ಟೇ, ಪುಟ ವಿನ್ಯಾಸ, ಕಾದಂಬರಿ ಪ್ರಚಾರ ಇನ್ನು ಹತ್ತು ಹಲವು ರೀತಿಗಳನ್ನು ಪ್ರಸ್ತುತ ಶೈಲಿ ರೂಪಿಸಿಕೊಂಡಿದೆ. ಓದುಗನ್ನು ಕಾದಂಬರಿಯುದ್ದಕ್ಕೂ ಸೆರೆಹಿಡಿದು ನಿಲ್ಲಿಸುವುದು ಈ ಕಾಲದ ಸಾಧನೆಯಾದ್ದರಿಂದ ಸರಳ, ಭಾವನಾತ್ಮಕ, ವಾಸ್ತವ ಮಾದರಿಯು ಹೆಚ್ಚು ಜನಪ್ರಿಯಗೊಂಡಿತು. ವಿಜ್ಞಾನಕ್ಕೆ ಸಾಹಿತ್ಯದ ಘಮವನ್ನು ಸೇರಿಸಿ ಬರೆಯುವುದು, ಇತಿಹಾಸದೊಂದಿಗೆ ಕಾಲ್ಪನೆಯನ್ನು, ವಾಸ್ತವ ಘಟನೆಯನ್ನು ಸೇರಿಸಿ ಬೆರೆಯುವುದು ಈ ಕಾಲಮಾನದ ಗುರುತೂ ಹೌದು. ನಿತ್ಯವೂ ಕಾದಂಬರಿ ಲೋಕದಲ್ಲಿ ಹೊಸ ಬರಹಗಾರ ಉಗಮವು ಆಗುತ್ತಿರುವುದು ಸಾಹಿತ್ಯಲೋಕದಲ್ಲಿ ಆಶಾದಾಯಕ ಬೆಳವಣಿಗೆ, ಅದರಲ್ಲಿಯೂ ಯುವ ಲೇಖಕರು ಕಾದಂಬರಿ ಸಾಹಿತ್ಯದೆಡೆಗೆ ಮುಖ ಮಾಡಿರುವುದು ಈ ಕಾಲದ ಪ್ರಮುಖ ಬೆಳವಣಿಗೆಗಳಲ್ಲೊಂದು.


ಈ ಎಲ್ಲಾ ಹೋಲಿಕೆಯು ಕೆಲವೊಂದು ಕಾದಂಬರಿಯ ಆಧಾರಿತವಾದ್ದರಿಂದ ಅಪವಾದ ಎನ್ನುವಂತೆ ಹಲವು ಹೊತ್ತಿಗೆಗಳಿರಬಹುದು. ಪ್ರತಿಯೊಂದು ಕಾದಂಬರಿಗೂ ಆಯಾ ಪ್ರದೇಶ, ಕಾಲಮಾನ, ಲೇಖಕರ ಮನಸ್ಥಿತಿಯು ಪ್ರಭಾವ ಬೀರುವುದರಿಂದ ಕ್ರಮಬದ್ಧ ವಿಭಾಗೀಕರಣವೂ ತರವಲ್ಲ. ಪ್ರತಿಬಾರಿಯೂ ಒಂದು ಸಾಹಿತ್ಯಪ್ರಕಾರ ಬದಲಾವಣೆ ಕಂಡಿದೆ ಎಂದರೆ ಓದುಗನ ಅಭಿರುಚಿಯೂ ಭಿನ್ನವಾಗಿದೆ ಎಂದರ್ಥ. ಪ್ರತಿಯೊಂದು ಕಾಲಘಟ್ಟದಲ್ಲಿಯೂ ಎಲ್ಲಾ ಪ್ರಭಾವಗಳನ್ನೂ ಮೀರಿ ಲೇಖಕರು ತಮ್ಮ ಛಾಯೆಯನ್ನು ಮೂಡಿಸುತ್ತಿರುವುದು ಕೂಡ ಉತ್ತಮ ಬೆಳವಣಿಗೆ ವಸ್ತುವಿಷಯ, ವಿವರಿಸುವ ಭಾಷೆಯು ಲೇಖಕನ ಸ್ವತ್ತಾಗಿದ್ದರೂ, ಓದುಗನ ಮನಃ ತಣಿಸುವುದೇ ಗುರಿಯಾದ್ದರಿಂದ ಕಾದಂಬರಿಯ ಬದಲಾವಣೆಯಲ್ಲಿ ಲೇಖಕನಷ್ಟೇ ಓದುಗನ ಹೊಣೆಯೂ ಇರುತ್ತದೆ. ಈ ಎಲ್ಲಾ ಬದಲಾವಣೆಗಳನ್ನು ತನ್ನದಾಗಿಸಿಕೊಳ್ಳತ್ತ ಹಲವಾರು ಲೇಖಕರ ನೂರಾರು ಕೃತಿಗಳು ಶತಮಾನ ಕಳೆದರೂ ಪ್ರಸ್ತುತ ಎನಿಸುತ್ತಿದೆ. ಬಹುತೇಕ ಓದುಗರ ಮೊದಲ ಮೆಟ್ಟಿಲು ಪ್ರೇಮ ಕಾದಂಬರಿಗಳು, ಪತ್ತೇದಾರಿ ಕಾದಂಬರಿಗಳು ಇದಾದ್ದರಿಂದ, ಕಾದಂಬರಿಯ ಅಸ್ತಿತ್ವದ ಬಗ್ಗೆ ಎಂದೂ ಪ್ರಶ್ನೆ ಮೂಡಲಾದು ಎಂಬ ಭಾವನೆಯಿದೆ. ಆ ರೀತಿಯ ಕೃತಿಗಳು ಆಗಿನಷ್ಟೇ ಈಗೂ ಬರುತ್ತಿರುವುದು ಅಕ್ಷರಕ್ಕೆ ಸಾವಿಲ್ಲ ಎಂಬುದನ್ನು ಸಾಬೀತುಪಡಿಸಿದೆ.

(ಲೇಖಕರು ಎಸ್‌ಡಿಎಂ ಕಾಲೇಜಿನಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ವಿದ್ಯಾರ್ಥಿನಿ)

ಪುಸ್ತಕ ವಿರಹಿಗಳೂ ಇದ್ದಾರೆ !

ಪ್ರತಿಯೊಬ್ಬ ಓದುಗನ ಇಷ್ಟಗಳು ಬೇರೆಬೇರೆ ರೀತಿಯಲ್ಲಿರುತ್ತವೆ. ಅದೇ ರೀತಿ ಆತನ ಮೇಲೆ ಪುಸ್ತಕಗಳು ಬೀರುವ ರೀತಿ ಕೂಡ. ಎಲ್ಲರ ವಾದಗಳನ್ನು ಒಪ್ಪಿಕೊಳ್ಳುವುದಂತೂ ಕಷ್ಟವೇ. ಹಾಗಾಗಿ ವೈವಿಧ್ಯತೆ ಇದೆಯೆಂಬುದನ್ನು ಒಪ್ಪಿಕೊಳ್ಳಬೇಕು.

ಕಾಲೇಜು ಕತೆಗಳಲ್ಲಿ ಮಸ್ತಿ-ಕುಸ್ತಿಗಳಿದ್ದರೇನೆ ಚಂದ. ಅಥವಾ ಅದು ಹಾಗೆಯೇ ಇರಬೇಕೆನ್ನುವ ಮಿತಿಯನ್ನು ಯಾರೋ ಸೃಷ್ಟಿಸಿಟ್ಟುಬಿಟ್ಟಿರುವರು. ಯಾವುದೋ ಕಾಲದ ಶಾಸ್ತ್ರದ ಕಾರಣವನ್ನು ಬಿಟ್ಟು ಪದ್ಧತಿ ಪ್ರತೀತಿಗಳನ್ನಷ್ಟೇ ಪಾಲಿಸುವಂತೆಯೇ ಕಾಲೇಜಿನ ಕುರಿತಾದ ರಂಗಿನ ಚಿತ್ರಗಳನ್ನೂ ಬುದ್ಧಿ ಸ್ವೀಕರಿಸಿದೆ. ವಾದವೊಂದಕ್ಕೆ ಎರಡು ಮುಖ ಇರಲೇಬೇಕು. ಅವುಗಳೆಂದರೆ ಸರಿ ಹಾಗು ತಪ್ಪು ಎಂದು ನೀವಂದುಕೊಂಡದ್ದು ತಪ್ಪು. ಅವರವರ ಸಮರ್ಥನೆಗಳಲ್ಲಿ ಅವರವರು ಸರಿ-ತಪ್ಪುಗಳಾಗಿ ಕಾಣಿಸಿಕೊಳ್ಳುತ್ತಾರೆ. ಒಂದು ವಾದದ ಎರಡೂ ಬಣಗಳಿಗೆ ಇರುವ ಅಭಿಪ್ರಾಯಗಳಿಗೂ ಮೂರನೆಯ ವ್ಯಕ್ತಿ ಕಾಣುವ ಅಭಿಪ್ರಾಯಕ್ಕೂ ವ್ಯತ್ಯಾಸ ಅಲ್ಲಿಂದ ಆರಂಭವಾಗುತ್ತದೆ.




ದಶಮಿ ಜಿ.

ಈಗ ಪೀಠಿಕೆ ಬೇರೆಯೇ ವಿಷಯಕ್ಕೆ ಇಟ್ಟದ್ದಾದರೂ ಇರುವ ಮುನ್ನುಡಿ ಸಾರ್ವಕಾಲಿಕ. ಕತೆ ಕಾದಂಬರಿ ಕಾವ್ಯ ಪ್ರಬಂಧ ಹೀಗೆ ವಿವಿಧ ರೂಪಗಳಲ್ಲಿ ಅಗೋಚರವಾದ ವಿಚಾರವನ್ನು ತಿಳಿಯಲು ಹೆಣಗಾಡುತ್ತೇವೆ. ಕಣ್ಣೆದುರಿಗಿದ್ದ ವಸ್ತು ಕೂಡ ಯಾವುದೋ ತತ್ವವನ್ನು ಬೋಧಿಸುವಂತೆ ತೋರುವಲ್ಲಿ ಲೇಖಕ ತೊಡಗುತ್ತಾನೆ; ಓದುಗ ಅನುಸರಿಸುತ್ತಾನೆ ಅಥವಾ ಖಂಡಿಸುತ್ತಾನೆ. ಒಟ್ಟಾರೆಯಾಗಿ ಪುಸ್ತಕವೆಂಬ ಅನರ್ಘ್ಯ ರತ್ನದ ಬಳಕೆಯ ಕುರಿತಾಗಿ ಚಿಂತನೆಯನ್ನು ನಡೆಸುವುದಾದರೆ ನಮ್ಮ ಮುಂದೆ ಹಲವು ಪ್ರಾಥಮಿಕ ಸಮಸ್ಯೆಗಳು ಹಾಜರಾಗುತ್ತವೆ. ಅವುಗಳನ್ನು ಸಮಸ್ಯೆಗಳೆಂದುಕೊಳ್ಳಬೇಕೆ? ಎನ್ನುವಲ್ಲಿಯೇ ಸಮಸ್ಯೆ ಹಾಜರು.

ಪುಸ್ತಕ ಓದುವುದರ ಕುರಿತು ಕೂಡ ಅನೇಕ ಪೂರ್ವಾಗ್ರಹಗಳಿವೆ. ಉದಾಹರಣೆಗೆ ಒಬ್ಬ ವ್ಯಕ್ತಿ ಸದಾ ದಪ್ಪ ದಪ್ಪ ಪುಸ್ತಕಗಳನ್ನು ಹೊಕ್ಕಿ ಅಲ್ಲಿನ ಜ್ಞಾನವನ್ನು ಎರವಲು ಪಡೆಯುತ್ತಾನೆ. ಅಲ್ಲಿ ಇದ್ದ ವಿಷಯ ಪ್ರಸ್ತುತಿ ಆತನ ಬುದ್ಧಿ ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆ. ಆದರೆ ಪ್ರತಿಯೊಬ್ಬರೂ ಆ ವ್ಯಕ್ತಿಯಂತೆ ಜ್ಞಾನ ಪಡೆಯುವುದಕ್ಕಷ್ಟೇ ಓದುತ್ತಾರೆ ಎಂದುಕೊಳ್ಳುವುದು ತಪ್ಪು. ಮನರಂಜನೆಯ ಮಾಧ್ಯಮವಾಗಿ ಪುಸ್ತಕಗಳು ಅತ್ಯಂತ ಜನಪ್ರಿಯವಾಗಿದೆ. ಹೀಗೆ ಪುಸ್ತಕ ಓದುವುದು ಕೆಲವರಿಗೆ ಅಭ್ಯಾಸವಾಗಿಯೋ, ಕೆಲವರಿಗೋ ಹವ್ಯಾಸವಾಗಿಯೋ ಪರಿಚಿತ. ಓದುವಿಕೆಯ ನಾನಾ ಸ್ತರಗಳಲ್ಲಿ ನಾನಾ ರೀತಿಯ ವ್ಯಕ್ತಿತ್ವಗಳೂ ಕಾಣಸಿಗುತ್ತಾರೆ. ಪ್ರತಿಯೊಬ್ಬ ಓದುಗನ ಇಷ್ಟಗಳು ಬೇರೆಬೇರೆ ರೀತಿಯಲ್ಲಿರುತ್ತವೆ. ಅದೇ ರೀತಿ ಆತನ ಮೇಲೆ ಪುಸ್ತಕಗಳು ಬೀರುವ ರೀತಿ ಕೂಡ. ಎಲ್ಲರ ವಾದಗಳನ್ನು ಒಪ್ಪಿಕೊಳ್ಳುವುದಂತೂ ಕಷ್ಟವೇ. ಹಾಗಾಗಿ ವೈವಿಧ್ಯತೆ ಇದೆಯೆಂಬುದನ್ನು ಒಪ್ಪಿಕೊಳ್ಳಬೇಕು.

ನಮ್ಮ ಕಾಲೇಜುಗಳಲ್ಲಿ ಗ್ರಂಥಾಲಯದ ದೃಶ್ಯಗಳು ಹೆಚ್ಚು ಕಮ್ಮಿ ಹೀಗೆಯೇ ಇರುತ್ತವೆ. ಒಂದಷ್ಟು ಜನರು ನೋಟ್ಸು, ಅಸೈನ್ಮೆಂಟು ಎಂದು ಬಂದರೆ ಒಂದಷ್ಟು ಜನ ಪರೀಕ್ಷೆಯ ಅಪೂರ್ವ ತಯಾರಿಗೆ. ಮತ್ತೊಂದಷ್ಟು ಜನ ಮನರಂಜನೆಗೆ, ಕಾಲಹರಣಕ್ಕೆ ಬಂದರೆ, ಮತ್ತೊಂದಿಷ್ಟು ಕಾಟಾಚಾರಕ್ಕೆ. ಇಂಥ ವಿವಿಧ ವಿನೂತನ ವಿಷಯಗಳು ಮೇಳೈಸಿದ ಕಾಲೇಜು ಗ್ರಂಥಾಲಯಕ್ಕೆ ಕಾಲೇ ಇಡದವರದ್ದು ಮತ್ತೊಂದು ಪಂಥ. ಕಾಲೇಜುಗಳಲ್ಲಿ ಓದುಗರ ಇನ್ನೊಂದು ವರ್ಗವನ್ನು ಕಾಣೋಣ. ಖಾಲಿ ಕ್ಯಾಂಟೀನಿನ ಮೂಲೆಯಲ್ಲೋ ಪಾರ್ಕಿನ ಬೆಂಚಿನಲ್ಲೋ ಕೈಲೊಂದು ಪುಸ್ತಕವನ್ನಿಟ್ಟುಕೊಂಡು ಓದುವ ವರ್ಗಕ್ಕೆ ಗ್ರಂಥಾಲಯದ ಪ್ರಶಾಂತತೆಯ ಹಂಗಿಲ್ಲ. ಅಥವಾ ತುಂಬಿದ ಕ್ಯಾಂಟೀನಿನ ನಡುವೆ, ತುಂಬಿದ ಬಸ್ಸಿನ ಎಡೆಯಲ್ಲಿ ಪುಸ್ತಕ ಓದುವ ಹುಚ್ಚರಿದ್ದರೆ ಅವರಿಗಂತೂ ಲೋಕದ ಹಂಗು ಇಲ್ಲವೇ ಇಲ್ಲ.

ಕತೆಯೆನ್ನುವುದು ಮನೋಗತಿಯ ಜೊತೆ ಮೇಳೈಸಿ ಬುದ್ಧಿಗೆ ಹೊಸದಾದ ಹೊಳಹುಗಳನ್ನು ದಕ್ಕಿಸುತ್ತದೆ. ಮುಖ್ಯವಾಹಿನಿಯನ್ನು ಬಿಟ್ಟು ಮಾತುಗಳು ತಮ್ಮ ಪಾಡಿಗೆ ಕಟ್ಟಿಕೊಂಡ ವಿಷಯಗಳ ನಗರಕ್ಕೆ ದಾಂಗುಡಿಯಿಡುವ ದುಸ್ಸಾಹಸ ಕತೆಗಾರನ ಕೌಶಲಕ್ಕೆ ಸವಾಲಾದರೆ ಆ ಕತೆಗಳನ್ನು ತಮ್ಮದೇ ಪರಿಸರಕ್ಕೆ ಅನುವಾಗಿಸಿಕೊಂಡು ಓದುವುದು ಓದುಗನ ಸವಾಲು. ಇಂತಹ ಓದುಗನ ಚಿತ್ತದೊಳಗಿನ ಚಿತ್ರಗಾರನು ಶಾಂತಿಯಿಂದ ಇರಬೇಕು. ಹಾಗಾದಾಗ ಪುಸ್ತಕ ಲೋಕದಲ್ಲಿ ನಮಗೆ ಪ್ರವೇಶ.



ಹಾಗೆಂದು ಮನಸಿನ ಶಾಂತಿಗೆ ಹೊರ ಗದ್ದಲಗಳು ಮುಖ್ಯವೇನು ಆಗುವುದಿಲ್ಲ. ಮನ ಮಂದಿರದ ನೆಮ್ಮದಿ ಮುಖ್ಯ.

ಓದುಗರ ನಾನಾ ವರ್ಗಗಳು ಎಂದಿಗೂ ಸಮಸ್ಯೆಯಲ್ಲ. ಹೇಳುವ ವಿಷಯಗಳ ಪ್ರಸ್ತುತಿಯ ರೀತಿ ಬೇರೆಯಷ್ಟೆ. ಕೆಲವೊಮ್ಮೆ ನಮ್ಮ ಓದುವಿಕೆ ನಿಧಾನವಾಗಬಹುದು ಅಥವಾ ನಿಂತೇ ಹೋಗಬಹುದು. ಇದಕ್ಕೆ ಕೆಲ ಘಟನೆಗಳೋ ಕೆಲ ಸಂದರ್ಭಗಳೋ ತಡೆಯಾಗಬಹುದು. ಆದರೆ ಅವೆಲ್ಲವನ್ನು ಮೀರಿ ನಾವು ಪುಸ್ತಕ ಲೋಕದೊಳಗೆ ಪ್ರವೇಶ ಪಡೆಯುವುದು ಪುಸ್ತಕ ಪ್ರೇಮಿಯ ಗುರಿಯಾಗುತ್ತದೆ. ನಿಧಾನವಾದ ಓದುವಿಕೆ ಮತ್ತೊಮ್ಮೆ ವೇಗ ಪಡೆದೇ ಪಡೆಯುತ್ತದೆ. ನೆನಪಿಡಿ ಪುಸ್ತಕ ಪ್ರೇಮಿ ಎಂದಿಗೂ ಭಗ್ನ ಪ್ರೇಮಿಯಾಗಲ್ಲ, ಆತ ಪುಸ್ತಕ ವಿರಹಿಯಾಗುತ್ತಾನಷ್ಟೇ!

(ಲೇಖಕರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿನಿ)

ಮರುಳ ಮುನಿಯನ ಕಗ್ಗ


ಹವ್ಯವಾಹನ



ಡಿವಿಜಿ ಎಂಬ ಸಾಹಿತ್ಯವೃಕ್ಷದ ಸತ್ವಭರಿತ ಫಲಗಳಲ್ಲಿ "ಮರುಳಮುನಿಯನ ಕಗ್ಗ"ವೂ ಒಂದು. ಇದು ಮಂಕುತಿಮ್ಮನ ಕಗ್ಗದ ಮುಂದುವರೆದ ಭಾಗ. ಮಂಕುತಿಮ್ಮನ ಕಗ್ಗ ಪ್ರಕಟವಾಗಿದ್ದು 1943. ಇದು ಪ್ರಕಟವಾಗಿದ್ದು ಡಿವಿಜಿಯವರ ಮರಣೋತ್ತರವಾಗಿ, ಅಂದರೆ 1984 ರಲ್ಲಿ. ಮಂಕುತಿಮ್ಮನ ಕಗ್ಗದಷ್ಟು ಪ್ರಸಿದ್ಧವಲ್ಲದಿದ್ದರೂ, ಅದರಷ್ಟೇ ಸತ್ವ, ಸ್ವಾರಸ್ಯ, ಲಾಲಿತ್ಯ ಇದರಲ್ಲೂ ಇದೆ.

ಮರಣೋತ್ತರ ಪ್ರಕಟಣೆಯ ಹಿನ್ನೆಲೆ

ಈ ಕಗ್ಗಗಳನ್ನು ಡಿವಿಜಿಯವರು ತಮ್ಮ ಜೀವನದ ಕಡೆಯ ದಿನಗಳಲ್ಲಿ ರಚಿಸಿದವು. ಡಿವಿಜಿಯವರ ಜೀವಿತದಲ್ಲೇ ಪ್ರಕಟವಾಗಿದ್ದರೆ ಇನ್ನಷ್ಟು ಸೊಗಸಾಗಿರುತ್ತಿತ್ತು. ಆದರೆ ಅನಾರೋಗ್ಯದಿಂದಾಗಿ ಬರೆದಿದ್ದನ್ನು ತಿದ್ದಲು, ಪರಿಷ್ಕರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅವರ ಮರಣದ ನಂತರ ಅವುಗಳ ಹಕ್ಕುಸ್ವಾಮ್ಯ ಪುತ್ರರಾದ ಬಿ.ಜಿ.ಎಲ್.ಸ್ವಾಮಿ ಅವರಿಗೆ ಬಂದಿತು. ಅವರು ಪ್ರಕಟಿಸುವಷ್ಟರಲ್ಲಿ ಅವರನ್ನೂ ಅಕಾಲಿಕವಾಗಿ ವಿಧಿ ಸೆಳೆದುಕೊಂಡಿತು. ನಂತರ ಅವರ ಶ್ರೀಮತಿ ವಸಂತಾ ಸ್ವಾಮಿಯವರು ಪ್ರಕಟಣೆಯ ಹೊಣೆಯನ್ನು ಡಿವಿಜಿಯವರೇ ಸ್ಥಾಪಿಸಿದ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಗೆ ವಹಿಸಿದರು. ಗೋಖಲೆ ಸಂಸ್ಥೆಯು ವಿದ್ವಾನ್ ರಂಗನಾಥ ಶರ್ಮರಿಂದ ಈ ಕೃತಿಯನ್ನು ಪರಿಷ್ಕರಿಸಿತು.



ಮಹಾಮಹೋಪಾಧ್ಯಾಯ ವಿದ್ವಾನ್ ಎನ್ ರಂಗನಾಥ ಶರ್ಮ

ಶ್ರೀ ಶರ್ಮರು ಡಿವಿಜಿಯವರ ಆಪ್ತವಲಯದವರು. ಸಂಸ್ಕೃತ-ಕನ್ನಡ ವಿದ್ವಾಂಸರು. ಡಿವಿಜಿ-ಶರ್ಮರ ಬಾಂಧವ್ಯ ಎಷ್ಟಿತ್ತೆಂದರೆ ಶರ್ಮರು ಬರೆದ ಶ್ರೀಮದ್ ವಾಲ್ಮೀಕಿ ರಾಮಾಯಣದ ಕನ್ನಡ ಭಾಷಾಂತರ ಸರಣಿ ಪುಸ್ತಕಗಳಿಗೆ ಡಿವಿಜಿ ವಿದ್ವತ್ಪೂರ್ಣವಾಗಿ ಮುನ್ನುಡಿ ಬರೆದರು. ಡಿವಿಜಿಯವರೂ ತಮಗೇನಾದರೂ ವ್ಯಾಕರಣದ ಸಂದೇಹಗಳಿದ್ದರೆ ಶರ್ಮರ ನೆರವು ಪಡೆಯುತ್ತಿದ್ದರು. ಹೀಗಾಗಿ ಗೋಖಲೆ ಸಂಸ್ಥೆಯು ಗ್ರಂಥ ಪರಿಷ್ಕರಣೆಗೆ ಅವರನ್ನೇ ಆಯ್ಕೆ ಮಾಡಿತು.

ಶರ್ಮರ ಪರಿಷ್ಕರಣೆ

ಡಿವಿಜಿಯವರು ಇದರಲ್ಲಿರುವ ಕಗ್ಗಗಳನ್ನು ಪೂರ್ತಿಯಾಗಿಸಿರಲಿಲ್ಲ. ಕೆಲವು ಕಗ್ಗಗಳ ನಾಲ್ಕನೇ ಸಾಲನ್ನು ಬರೆದಿರಲಿಲ್ಲ, ಇನ್ನು ಕೆಲವುಗಳಲ್ಲಿ ಮಧ್ಯಮಧ್ಯದ ಪದಗಳನ್ನು ಬರೆದಿರಲಿಲ್ಲ. ಡಿವಿಜಿಯಂತಹ ವಿದ್ವಾಂಸರು ಖಾಲಿ ಬಿಟ್ಟ ಸಾಲುಗಳನ್ನು ಪೂರ್ತಿಯಾಗಿಸುವ ಸೂಕ್ಷ್ಮ ಮತ್ತು ಕಷ್ಟಕರ ಜವಾಬ್ದಾರಿ ಶರ್ಮರ ಹೆಗಲೇರಿತು. ಶರ್ಮರು ತಾವು ಮಾಡಿರುವ ಡಿವಿಜಿಯವರ ಸಾಹಿತ್ಯ ಅಧ್ಯಯನ ಮತ್ತು ತಮ್ಮ ವಿದ್ವತ್ತನ್ನು ಬಳಸಿ ಬಿಟ್ಟುಹೋದ ಪದಗಳನ್ನು ಪೂರ್ತಿಗೊಳಿಸಿದರು. ಜೊತೆಗೆ ತಾವು ಸೇರಿಸಿರುವ ಪದಗಳನ್ನು ಆವರಣದಲ್ಲಿಸಿ () ಯೇ ಪ್ರಕಟಿಸಬೇಕೆಂದು ಪ್ರಕಾಶಕರಲ್ಲಿ ವಿನಂತಿಸಿದರು. ಇವತ್ತಿಗೂ ಈ ಪುಸ್ತಕ ಕೊಂಡರೆ, ಶರ್ಮರು ಸೇರಿಸಿದ ಪದಗಳು ಆವರಣ () ದಲ್ಲಿವೆ. ಎಂಥಾ ನಿಸ್ವಾರ್ಥ ಪರಿಷ್ಕರಣೆ!

ಮರುಳಮುನಿಯನೆಂದರೆ ಮಂಕುತಿಮ್ಮನ ತಮ್ಮ

ಮಂಕುತಿಮ್ಮನ ಕಗ್ಗದ ಮುಂದುವರೆದ ಭಾಗ "ಮರುಳ ಮುನಿಯ ಕಗ್ಗ". ಇದರ ಕಗ್ಗವೊಂದರಲ್ಲಿ "ಮರುಳಮುನಿಯನು ನಾನು, ಮಂಕುತಿಮ್ಮನ ತಮ್ಮ" ಎಂದು ಡಿವಿಜಿಯವರೇ ಬರೆದಿದ್ದಾರೆ. ಮಂಕುತಿಮ್ಮನ ಕಗ್ಗದ ಆರಂಭದಲ್ಲಿರುವಂತೆ ಪೂರ್ವಕಥೆ ಇದರಲ್ಲಿಲ್ಲ, ಡಿವಿಜಿ ಇದ್ದಿದ್ದರೆ ಬರೆಯುತ್ತಿದ್ದರೇನೊ!

ಮಂಕುತಿಮ್ಮನ ಕಗ್ಗವನ್ನು ರಾಜರತ್ನಂ ಅವರು ವಿಷಯಾನುಕ್ರಮಣಿಕೆ ಮಾಡಿದಂತಯೇ ಶರ್ಮರು ಇದನ್ನು ವಿಷಯಾಧಾರಿತವಾಗಿ ವಿಂಗಡಿಸಿದ್ದಾರೆ. ಒಟ್ಟು 825 ಕಗ್ಗಗಳಿದ್ದು, ಟಿಪ್ಪಣಿ, ಕ್ಲಿಷ್ಟಪದಗಳ ಅರ್ಥವನ್ನು ಪುಸ್ತಕದ ಕೊನೆಯ ಭಾಗದಲ್ಲಿ ಕೊಟ್ಟಿರುವುದು ಓದುಗರಿಗೆ ಸಹಾಯಕವಾಗಿದೆ.

ಗುಂಡ್ಮಿ ಚಂದ್ರಶೇಖರ ಐತಾಳರು ಮಂಕುತಿಮ್ಮ ಮತ್ತು ಮರುಳ ಮುನಿಯನ ಕಗ್ಗ ಎರಡನ್ನೂ ಸೇರಿಸಿ "ಗುಂಡೋಪನಿಷತ್ತು" ಎನ್ನಬಹುದೆಂದು ಮೆಚ್ಚುನುಡಿದಿದ್ದಾರೆ. ಓದುಗರು ಮಂಕುತಿಮ್ಮನ ಕಗ್ಗದಂತೆಯೇ ಮರುಳ ಮುನಿಯನ ಕಗ್ಗವನ್ನೂ ಓದಿ ಆಸ್ವಾದಿಸಬೇಕು. ಡಿವಿಜಿಯವರು ಇದೇ ಕೃತಿಯಲ್ಲಿ "ನೆನೆನೆನೆಯುತೊಂದೊಂದು ಪದ್ಯವನು ಅದೊಮ್ಮೊಮ್ಮೆ ಅನುಭವಿಸಿ ಚಪ್ಪರಿಸೊ-ಮರುಳ ಮುನಿಯ" ಎಂದಿದ್ದಾರೆ. •

(ಹವ್ಯವಾಹನ, ಹಳಗನ್ನಡ ಸಾಹಿತ್ಯಾಸಕ್ತ. ವೃತ್ತಿಯಿಂದ ತೆರಿಗೆ ಸಲಹೆಗಾರ. ಊರು ತೀರ್ಥಹಳ್ಳಿ. ವಾಸ ಶಿವಮೊಗ್ಗ)




ಚೈತನ್ಯ ಮಜಲುಕೋಡಿ

ಕಾದಂಬರಿಲೋಕದಲ್ಲಿ ಶುಕ್ರದೆಸೆ

ಹಿರಿಯ ವಿದ್ವನ್ಮಣಿಗಳಾದ ಶ್ರೀ ಶ್ರೀಧರ ಡಿ.ಎಸ್ ಅವರು ಯಕ್ಷಗಾನ ಕ್ಷೇತ್ರದ ಎಲ್ಲ ವಿಭಾಗಗಳಲ್ಲೂ ಸಾರ್ಥಕ ಸೇವೆಯನ್ನು ಮಾಡಿ ಸೈ ಎನಿಸಿಕೊಂಡವರು. ಅವರ ಬಹುಕಾಲದ ಅಧ್ಯಯನ-ಅಧ್ಯಾಪನಗಳ ಫಲವೆಂಬಂತೆ ಪ್ರಸಿದ್ಧ ಪುರಾಣಪಾತ್ರವಾದ ಶುಕ್ರಾಚಾರ್ಯರ ಜೀವನದ ಮೂಲಚೂಲಗಳನ್ನು ಸಮೀಕ್ಷಿಸುವ ಪೌರಾಣಿಕ ಕಾದಂಬರಿ 'ಅಸುರಗುರು ಶುಕ್ರಾಚಾರ್ಯ'ವು ಮೂಡಿಬಂದಿದೆ. ಭೃಗುಕುಲತಿಲಕನಾದ ಶುಕ್ರಾಚಾರ್ಯನು ಜನಸಾಮಾನ್ಯರಿಗೆಲ್ಲಾ ಒಂದು ರೀತಿಯ ಋಣಾತ್ಮಕ ವ್ಯಕ್ತಿತ್ವವಾಗಿ ಮಾತ್ರವೇ ಕಂಡಿರುವುದು. ಅದಕ್ಕೆ ಕಾರಣವೂ ಇದೆ; ಆತನ ಮುಂಗೋಪ, ಅಸುರಗುರುತ್ವ ಮತ್ತು ಪಕ್ಷಪಾತ, ಸ್ವಭಾವದಲ್ಲಿರುವ ರಾಜಸ ಗುಣ, ಸುರೆ ಕುಡಿಯುವ ದೌರ್ಬಲ್ಯ, ಬಲಿಗೆ ದಾನ ನೀಡಲು ಬಿಡದೆ ಒಕ್ಕಣ್ಣನಾದ ಎಂಬ ಕತೆಗಳೆಲ್ಲ ಕೂಡಿ ಒಂದು ಪೂರ್ವಗ್ರಹದ ಚಹರೆಯು ನಮ್ಮೊಳಗೆ ನಿಂತುಬಿಟ್ಟಿದೆ.



ತಪಸ್ಸಿನಲ್ಲಿದ್ದ ವಿಶ್ವಾಮಿತ್ರ ಮೇನಕೆಯ ಬಲೆಗೆ ಬಿದ್ದ, ವಸಿಷ್ಠರ ವಿರುದ್ಧ ತೊಡೆತಟ್ಟಿ ಮಕ್ಕಳನ್ನೆಲ್ಲ ಕೊಂದು ಹಾಕಿದ ಎಂಬುವ ವಿಷಯಗಳನ್ನೇ ಗುನುಗುತ್ತಿದ್ದ ಜನಗಳು, ಅವನೇ ಗಾಯತ್ರಿಯ ಸಾಕ್ಷಾತ್ಕಾರಕ್ಕೂ ಕಾರಣನಾದವನೆಂಬ ಹಿರಿದಾದ ಸತ್ಯವು ಮುನ್ನೆಲೆಗೆ ಬಂದು ಗಟ್ಟಿಯಾದುದು ದೇವುಡುರವರ ಮಹಾಬ್ರಾಹ್ಮಣ ಕಾದಂಬರಿ ಬಂದ ನಂತರ. ಅಂತೆಯೇ ಶುಕ್ರನ ಸಾಹಸ, ಪುರುಷ ಪ್ರಯತ್ನದ ಪರಾಕಾಷ್ಠೆಯಿಂದ ಶಿವಪುತ್ರನೇ ಆಗುವ, ಅಸುರರನ್ನು ದೇವತ್ವಕ್ಕೇರಿಸಲು ಹೆಣಗುವ, ಅವರ ಉದ್ಧಾರಕ್ಕೆ ಸ'ವ'ಂರ್ಪಿ'ತ'ವಾ'ಗ'ುವ' ಜೀವನವನ್ನು ಉಜ್ವಲವಾಗಿ ಶ್ರೀಧರರವರು ಚಿತ್ರಿಸಿದ್ದಾರೆ. ಯುಗ ಯುಗಗಳನ್ನು ಮೀರಿ ಬೆಳೆದು ಬಾಳಿದ ಆ ಪುರಾಣಪುರುಷನು ನಮ್ಮಿಂದ ಎಷ್ಟೋ ದೂರದಲ್ಲಿ ಬೆಳಗುತ್ತಿರುವ ಗ್ರಹಾಧಿಪತಿ ಶುಕ್ರನಾಗಿ ಕಾದಂಬರಿಯ ಎಲ್ಲ ದಿಕ್ಕುದೆಸೆಗಳಲ್ಲಿ ವ್ಯಾಪಿಸಿದ್ದಾನೆ.



ಲೇಖಕರ ಕೃತಿಕಲ್ಪದಲ್ಲಿ ಪುರಾಣ ಭಂಜನೆಯಿಲ್ಲ, ಅಂತೆಯೇ ವೃಥಾ ರಂಜನೆಯೂ ಇಲ್ಲ, ಪುರಾಣಪಾತ್ರಗಳ ನಡೆಯಲ್ಲಿ ಸಾರವನ್ನು ಹುಡುಕುವ ವಿಚಕ್ಷಣ ದೃಷ್ಟಿ ಅದನ್ನು ಸೊಗಸಾದ ನುಡಿಗಳಲ್ಲಿ ಕಡೆದು ನಿಲ್ಲಿಸುವ ಅರ್ಥಗಾರಿಕೆಯ ಬಲ, ಸ್ವಭಾವತಃ ಕವಿಯಾಗಿರುವುದರಿಂದ ಭಾವನಾತ್ಮಕ ಸನ್ನಿವೇಶಗಳಲ್ಲಿ ಅಪ್ರಯತ್ನವಾಗಿ ಮೂಡಿಬರುವ ಕಾವ್ಯದ ಸೊಬಗು ಇವೆಲ್ಲ ಕಾದಂಬರಿಯನ್ನು ಘನವಾಗಿಸಿವೆ. ಶುಕ್ರನ ಜೀವನ ಯುಗದಾಚೆಗೂ ನಿಲ್ಲುವಂತದ್ದು. ಆತನ ಬದುಕಿನ ಘಟ್ಟಗಳನ್ನು ಅನುಕ್ರಮವಾಗಿ ಕಟ್ಟಿಕೊಡುತ್ತ, ಸುಸಂಬದ್ಧವಾಗಿ ಕತೆಯನ್ನು ಮುಂದುವರೆಸುವುದು ಇಲ್ಲಿನ ಬಹುಮುಖ್ಯ ಸವಾಲು. ಅದನ್ನು ಸಮರ್ಥವಾಗಿ ನಿರ್ವಹಿಸುತ್ತ, ಜೊತೆಗೆ ದೇವಾಸುರರ ನಡುವಿನ ಸಂಘರ್ಷವನ್ನು ಭೌತಿಕ ನೆಲೆಗಷ್ಟೇ ಸೀಮಿತಗೊಳಿಸದೆ ಆಧ್ಯಾತ್ಮದ ಮಟ್ಟಕ್ಕೆ ಇಳಿಸುವುದರಿಂದ ನಮಗೆ ಕಾದಂಬರಿಯ ಓದು ಒಂದು ಸುದೀರ್ಘವಾದ ತತ್ವಚಿಂತನೆಯಾಗಿಯೂ ಮನದಲ್ಲಿ ಮನೆ ಮಾಡುತ್ತದೆ. ದೇರಾಜೆಯವರಂತಹ ಮಹಾನ್ ಕಲಾವಿದರು ಹಾಕಿಕೊಟ್ಟ ಲೇಖನದ ಹಾದಿಯಲ್ಲಿ ಮಾನ್ಯ ಶ್ರೀಧರರು ಗಟ್ಟಿಯಾದ ಹೆಜ್ಜೆಯನ್ನಿಟ್ಟು ಮುಂದುವರೆದಿದ್ದಾರೆ. ಓದುವಾಗ ಅಲ್ಲಲ್ಲಿ ಯಕ್ಷಗಾನದ ಸವಿಯ ಪುಳಕವೂ ಆಗುವುದು ಖಚಿತ.

ಇಂತಹವರು ಪುರಾಣದ ಸ್ವಾರಸ್ಯವನ್ನ ಹೆಚ್ಚಾಗಿ ಬರೆವಣಿಗೆಯಲ್ಲಿ ತಾರದಿರುವುದರಿಂದಲೇ ಇಂದು ಮಾರುಕಟ್ಟೆಯಲ್ಲಿ ಅಂದಾದುಂದಿಯಾಗಿ ಕತೆ ಹೊಸೆಯುವವರು ಪ್ರಸಿದ್ಧರಾಗುತ್ತಿದ್ದಾರೆ ಎನ್ನುವುದು ಸುಳ್ಳಿನ ಮಾತಲ್ಲ. ಇಂತಹ ದುಷ್ಕಾಲದಲ್ಲಿ ಮತ್ತೆ ಪೌರಾಣಿಕ ಪ್ರಸಂಗಕ್ಕೆ ಸಾಹಿತ್ಯಕ್ಷೇತ್ರದೊಳಗೆ ಹೀಗೊಂದು ಶುಕ್ರದೆಸೆ ಒದಗಿದೆ. ಅದು ಬಲಿತು ಬೆಳಗಲಿ ಎಂಬುದು ಸಹೃದಯರ ಆಶಯವೂ ಆಗಿದೆ. •

ಅಸುರಗುರು ಶುಕ್ರಾಚಾರ್ಯ (ಕಾದಂಬರಿ)
ಶ್ರೀಧರ ಡಿ ಎಸ್
ಸಾಹಿತ್ಯ ಭಂಡಾರ
ಬಳೇಪೇಟೆ ಬೆಂಗಳೂರು
ಬೆಲೆ : ರೂ. 350/-

ಸರಸ್ವತಿಯ ಗತಿ - ಚ್ಯುತಿ


ಅತಿ ಪ್ರಾಚೀನಕಾಲದ ಕತೆಯನ್ನೊರೆಯಲು ಹೊರಟ ಶಶಾಂಕ ಪರಾಶರರ ಚ್ಯುತಿ ಕಾದಂಬರಿಯು ಈ ಕಾಲದ ವಿಪ್ಲವ ವಿಕೋಪಗಳನ್ನೇ ಅಂತರ್ವಾಹಿನಿಯಾಗಿ ಹೊಂದಿರುವುದು ವಿಶೇಷ. ರಾಜ್ಯ ವಿಸ್ತರಣೆಯ ದಾಹವೇ, ಅನ್ಯದೇಶಿಗರ ನುಸುಳುವಿಕೆಯೇ, ನಿರಾಶ್ರಿತರ ದುಮ್ಮಾನವೇ, ಸಾಂಸ್ಕೃತಿಕ ಕಲಹವೇ, ಆರ್ಥಿಕ ಪೈಪೋಟಿಯೇ... ಯಾವುದೂ ಇಲ್ಲಿಲ್ಲ ಎನ್ನುವಂತಿಲ್ಲ. ವರ್ತಮಾನದ ವರದಿಯೇ ಭೂತಕಾಲದಲ್ಲೂ ಕಾಡಿದೆ ಎಂಬ ಚಿಂತನೆ ಎಲ್ಲ ಭಾಗಗಳಲ್ಲೂ ಕಂಡಿದೆ. ಇವೆಲ್ಲವನ್ನೂ ಯಾವತ್ತಿಗೂ ಗಮನಿಸಿಕೊಂಡೇ ಬದುಕುವ ಮನುಷ್ಯನ ಜೀವಿಸುವ ಬಯಕೆಯು ಕಾದಂಬರಿಯನ್ನು ಸುಪ್ತವಾಗಿ ಪ್ರಭಾವಿಸಿದೆ.



ಸಿಂಧೂ ಸರಸ್ವತಿ ನಾಗರೀಕತೆಯ ಕಾಲದ ಕತೆಯಾಗಿ ಹರಡಿಕೊಂಡಿರುವ ಕಾದಂಬರಿಯ ವಿವರಗಳಲ್ಲಿ, ಆ ಕಾಲದ ಕುರಿತಾದ ಜನಜೀವನದ ಯಥೇಚ್ಛವಾದ ವಿವರಗಳೇನೂ ದೊರೆಯುವುದಿಲ್ಲ, ಕತೆಯ ಓಘಕ್ಕೆ ತಕ್ಕಂತೆ ಅಲ್ಲಲ್ಲಿ ಪೂರಕವಾದ ವಿವರಗಳಿವೆ ಅಷ್ಟೇ. ಕಾರಣ, ಲೇಖಕರಿಗೆ ಆಸಕ್ತಿಯಿರುವುದು ಮನುಷ್ಯ ವರ್ತನೆ ಮತ್ತು ಭೌಗೋಳಿಕ ಬದಲಾವಣೆಯ ಚಿತ್ರಣದಲ್ಲಿ, ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ನಡುವಿನ ಪರ/ವಿರೋಧಗಳು ಇಂದಿಗೂ ಇದ್ದದ್ದೇ. ಅದರ ಜಿಜ್ಞಾಸೆಯ ಜೊತೆಗೆ ಪ್ರಜಾಪ್ರಭುತ್ವದ ಜಾರಿಯೊಳಗೇ ಬೆಳೆಯುತ್ತ ಹೋಗುವ ಮನುಷ್ಯನ ಅಧಿಕಾರ ದಾಹ, ದಾಕ್ಷಿಣ್ಯಪರವಾದ ಬುದ್ಧಿಯನ್ನು ಕಾದಂಬರಿ ಸೂಕ್ಷ್ಮವಾಗಿ ಗ್ರಹಿಸಿದೆ. ಕುಲಕಸುಬಿನ, ಸ್ವಧರ್ಮದ ಆಚರಣೆಯ ಬಗ್ಗೆ ಇರುವ ಶ್ರದ್ಧೆಯನ್ನೂ, ಅದನ್ನು ಭಗ್ನಗೊಳಿಸುವ ಅತಿಶಯವಾದ ವಿದೇಶೀ ಒಳಸುರಿಯನ್ನೂ ಕತೆಯು ಚೆನ್ನಾಗಿ ಒಳಗೊಂಡಿದೆ.

ಜನರ ಐಕ್ಯತೆಯನ್ನು ಒಡೆದುಹಾಕುವ ಪಿಸುಣಬುದ್ಧಿ, ನಯವಾದ ಮಾತುಗಳನ್ನಾಡುತ್ತಾ ಬುದ್ಧಿಭಾವಗಳೊಂದಿಗೆ ಆಟವಾಡಿ ಸ್ವಾರ್ಥಕ್ಕೆ ಅಮಾಯಕರನ್ನು ಬಳಸಿಕೊಳ್ಳುವ ಕುಟಿಲತನ, ಕ್ರಾಂತಿಯ ಕಾವಿನಲ್ಲಿ ಇರುವ ಸ್ಥಿತಿಗತಿಗಿಂತ ಹೀನಾಯವಾಗುವ ಅವಿವೇಕ, ಅರಿವಿಲ್ಲದೆ ಉಂಟಾಗುವ ಪ್ರಣಯ ವ್ಯಾಪಾರ; ಆಕಾರ, ಬದುಕುವ ನೆಲೆ ದೊರೆಯುತ್ತಿದ್ದಂತೆ ಮೊಳೆತು ಬೆಳೆಯುವ ಮಹತ್ವಾಕಾಂಕ್ಷೆಗಳೇ ಮುಂತಾಗಿ ಮನುಷ್ಯನ ಮೂಲಭೂತಗುಣಗಳೆಲ್ಲಾ ಪಾತ್ರಗಳಲ್ಲಿ ತಾನಾಗಿ ಬಂದಿದೆ. ರಾಜ್ಯ ವಿಸ್ತರಣೆಯ ದಾಹ, ಸಿಂಹಾಸನಾಕ್ರಮಣದ ದುರ್ದಮ್ಯ ಆಸೆಗಳೊಳಗೆ ದುಸ್ತರವಾಗುವ ಜನಸಾಮಾನ್ಯರ ಬದುಕು, ಕಾಡುಜನರ ಅನ್ಯದೇಶಿಗರ ಕಳ್ಳತನ ಒತ್ತುವರಿಗಳೊಂದಿಗೆ ಇನ್ನಷ್ಟು ಬಿಗಡಾಯಿಸುವ ದುರಂತವನ್ನು ಕತೆಯು ಸಂಯಮದಿಂದ ಚಿತ್ರಿಸಿದೆ.

ಎಲ್ಲ ಅವ್ಯವಸ್ಥೆಗಳ ನಡುವೆ ಸರಸ್ವತಿ ನದಿಯ ಮಟ್ಟವೂ ತಗ್ಗುವ ಪ್ರಕ್ರಿಯೆಯಿಂದ ಉಂಟಾಗುವ ಹಾಹಾಕಾರ ಜನಾಂಗದ ವಲಸೆಗೆ ಮುಖ್ಯಕಾರಣ ಎಂಬುದನ್ನು ಕೃತಿ ವಿವೇಚಿಸಿದೆ. ತಗ್ಗುವಿಕೆಯ ಕಾರಣಕ್ಕಿಂತ ಅದರ ಪರಿಣಾಮದಿಂದ ಆಗುವ ಬೆಳವಣಿಗೆಯ ಕಡೆಗೆ ಕೃತಿಕಾರರ ಲಕ್ಷ್ಯವಿದೆ. ಕೃತಿಯೊಳಗೆ ಬರುವ ದಾರ್ಶನಿಕ ಪಾತ್ರಗಳು ಕತೆಯ ವೇಗವನ್ನು ತಗ್ಗಿಸಿದಂತೆ ಕಂಡರೂ, ಅವರ ಚಿಂತನೆಗಳಲ್ಲಿರುವ ಪ್ರಶಾಂತಿಯು ಕಾದಂಬರಿಯ ಮೌಲ್ಯವನ್ನು ಹೆಚ್ಚಿಸಿದೆ. ಸ್ವಲ್ಪ ಅಂಜಿಕೆಯಿಂದಲೇ ಕೈಗೆತ್ತಿಕೊಳ್ಳಬಹುದಾದ ಕಾಲ-ದೇಶಗಳ ಕಥನವನ್ನುಲೇಖಕರು ತಮ್ಮ ಅಧ್ಯಯನ ಆಲೋಚನೆಗಳ ಬಲದಿಂದ, ಆತ್ಮ ವಿಶ್ವಾಸದಿಂದ ಕಡೆದಿದ್ದಾರೆ. ಕಾದಂಬರಿಯ ಸಂಕೀರ್ಣತೆ, ತೆರೆದುಕೊಳ್ಳುವ ಕೂತೂಹಲ ತಿರುವುಗಳು, ಭಾರವೆನಿಸದ ನಿರೂಪಣಕ್ರಮದಿಂದ ಚ್ಯುತಿಯು ನಮ್ಮ ಮನಸ್ಸನ್ನು ಹೊಕ್ಕು ಕೆಲಕಾಲ ಕೆದಕಬಲ್ಲ ಕೃತಿಯಾಗಿದೆ. •



ಚ್ಯುತಿ (ಕಾದಂಬರಿ)
ಶಶಾಂಕ ಪರಾಶರ
ಸಮನ್ವಿತ ಪ್ರಕಾಶನ
ಬೆಂಗಳೂರು
ಬೆಲೆ : ರೂ. 250/-

ಅಸ್ವಸ್ಥ

ಒಂದು ದಿನ ಅಂತೂ ಮನೆಗೆ ಸಲಿಲ್‌ನ ಚಿಕ್ಕಮ್ಮ, ಚಿಕ್ಕಪ್ಪ ಕುಂದಾಪುರದಿಂದ ಬಂದು, ತಾನು ಬರುತ್ತಿದ್ದೇನೆ ಬರುತ್ತಿದ್ದೇನೆ ಅಂತ ಹೇಳಿ ಹೇಳಿ, ಬರೋದು ತಡವಾಗಿ ಚಿಕ್ಕಮ್ಮನೇ ಅಡುಗೆ ಮಾಡಿಟ್ಟು, ಕೆಲಸದಿಂದ ಬಂದ ಸ್ವಸ್ತಿಗೇ ಬಡಿಸಿದಾಗ ಅಳುವೇ ಬಂದುಬಿಟ್ಟಿತ್ತು. ಅದಾಗಿ ಎರಡು ರಾತ್ರಿ ಸಲಿಲ್ ಜೊತೆ ಒಂದು ಮಾತೂ ಆಡದೇ ಸತಾಯಿಸಿದ್ದಳು. ತನ್ನ ತಪ್ಪೇನೆಂದು ತಿಳಿದುಕೊಳ್ಳಲು ಒಂದು ದಿನ, ಬರಿದೇ ಹಠ ಸಾಧಿಸುತ್ತೀಯಾ ಅಂತ ಮತ್ತೊಂದು ದಿನ ಸಲಿಲ್ ಕೂಡ ಅವಳ ಹಠವನ್ನು ವಿಸ್ತರಿಸಿದ್ದ.



ವಿಕಾಸ್ ನೇಗಿಲೋಣಿ

ಕತೆ



ಸ್ವಸ್ತಿಗೆ ಹೊಸ ಯಾವುದೇ ಸಾಹಸಗಳನ್ನೂ ಮಾಡುವ ಮನಸ್ಸಿರಲಿಲ್ಲ, ತುಂಬ ಆಸೆಪಟ್ಟು ಒಂದು ಮದುವೆ ಆಗಿದ್ದೇ ಸಾಕಾಗಿತ್ತು. ಅದೂ ಸಾಕಷ್ಟು ಹುಡುಗರನ್ನು ಹುಡುಕಾಡಿ, ಕೆಲವರನ್ನು ಭೇಟಿ ಮಾಡಿ, ಒಂದಿಬ್ಬರು ಅಂತಿಮ ಕೂಡ ಆಗಿ, ಒಂದು ನಿಶ್ಚಿತಾರ್ಥ ಮುರಿದಮೇಲೆ ಈ ಮದುವೆ ಏರ್ಪಟ್ಟಿತ್ತು. ಕುಂದಾಪುರದ ಹುಡುಗ, ಶಿಕಾರಿಪುರದ ಸ್ವಸ್ತಿಯನ್ನು ಮದುವೆಯಾಗಿದ್ದ. ಬಹಳ ಇಷ್ಟಪಟ್ಟು ತೆಗೆದುಕೊಂಡ ಧಾರೆ ಸೀರೆ, ಅದಕ್ಕಾಗಿ ಮೊದಲ ಸಲ ಎನ್ನುವಂತೆ ಮನೆಗೇ ಬ್ಯೂಟೀಶನ್ನನ್ನು ಕರೆಸಿಕೊಂಡು ಬ್ರೈಡಲ್ ಬ್ಯೂಟಿ ಮೇಕೋವರ್ ಮಾಡಿಸಿ, ಮದುವೆಗಾಗಿ ಶಿವಮೊಗ್ಗದಿಂದ ಒಬ್ಬ ವೀಡಿಯೋಗ್ರಾಫರನ್ನು ಕರೆಸಿ, ನಾಲ್ಕು ದಿನ ಎಲ್ಲ ಕ್ಯಾಂಡಿಡ್ ವೀಡಿಯೋ, ಫೋಟೋಗಳನ್ನೂ ಮಾಡಿಸಿ ಮದುವೆ ಮುಗಿಸಿದ ಮೇಲೆ ಸ್ವಸ್ತಿಗೆ ಏನೋ ಸುಸ್ತು, ನಿರಾಶೆ.

ಎಂಗೇಜ್ಮೆಂಟ್‌ಗೆ ಕೆಲ ದಿನಗಳ ಹಿಂದೆ ಪರಿಚಯವಾಗಿ, ಮದುವೆ ಹೊತ್ತಿಗೆ ಅಪ್ಪಟ ಪ್ರೇಮಿಯೇ ಆಗಿದ್ದ ಸಲಿಲ್ ಜೊತೆಗೆ ಮದುವೆ ಆಗುವುದು ಸ್ವಸ್ತಿಗೆ ತೀರಾ ಇಷ್ಟದ, ಹೆಮ್ಮೆಯ ವಿಷಯವೇ ಆಗಿತ್ತು. ಆದರೂ ಮದುವೆ ಮುಗಿಸಿದ ದಿನ ರಾತ್ರಿ ಎಲ್ಲ ಸೇರಿ ಜೋಕು ಮಾಡುತ್ತಾ, ಸೂರು ಹಾರುವಂತೆ ಕೂಗಿ ಗದ್ದಲವೆಬ್ಬಿಸುತ್ತಿದ್ದರೆ ಸ್ವಸ್ತಿಗೆ ಯಾಕೋ ಮದುವೆ ಮುರಿದು ಹೋದ ಭಾವ ಬಂತು. ಸುಮ್ಮನೆ ಎದ್ದು ಹೋಗಿ ಸ್ನಾನದ ಮನೆಯಲ್ಲಿ ರಜಗೆಂಪು ಮಾಡಿದ ಮದರಂಗಿಯ ಕೈಯನ್ನು ತೊಳೆಯುತ್ತಾ, ತೊಳೆಯುತ್ತಾ ಅದು ಹೋಗುವುದಿಲ್ಲ ಅಂತ ಗೊತ್ತಾದಂತಾಗಿ ಮತ್ತೂ ಅಳು ಬಂದಿತು. ಆ ರಾತ್ರಿಯೆಲ್ಲ ಯಾಕೋ ಅಳು ಬರುತ್ತಲೇ ಇತ್ತು. ಮನೆ ಬಿಟ್ಟು ಹೋಗುತ್ತಿರುವುದಕ್ಕೆ ಅಷ್ಟೊಂದು ಅಳುತ್ತಿದ್ದಾಳೆ ಅಂತ ನೆಂಟರೆಲ್ಲ ತಿಳಿದರು. ಸಲಿಲ್ ಅವಳನ್ನು ಸಮಾಧಾನಿಸಲು ನೋಡಿ ಸಾಧ್ಯವಾಗದೇ, ಅವಳಷ್ಟಕ್ಕೇ ಬಿಟ್ಟರೆ ಸರಿ ಹೋದಾಳೆಂದು ಹಾಗೇ ಬಿಟ್ಟ.

ಆದರೆ ಏಕೋ ಗೊತ್ತಿಲ್ಲ, ತಾಯಿ ಮನೆಯನ್ನು ಬಿಟ್ಟು ಕುಂದಾಪುರಕ್ಕೆ ಸಲಿಲ್‌ನ ಮನೆಗೆ ಹೋಗಿ, ತನ್ನಿಚ್ಛೆಯಂತೆ ಹನಿಮೂನ್‌ಗೆ ಮಾಲ್ಡೀವ್ಸ್‌ಗೆ ಹೋಗಿಬಂದ ಮೇಲೂ ಆ ಮಂಕು ಯಾಕೋ ಹಾಗೇ ಉಳಿದುಕೊಂಡುಬಿಟ್ಟಿತು. ಇರುವ ಫೋಟೋಗಳನ್ನೆಲ್ಲ ನಾಲ್ಕು ವಾರ ಬಿಟ್ಟೂ ಬಿಡದೇ ವಾಟ್ಸಪ್, ಫೇಸ್ ಬುಕ್ ಸ್ಟೇಟಸ್ ಮಾಡಿ, ಪ್ರೊಫೈಲ್ ಪಿಕ್ ಮಾಡಿ, ಬರುವ ಕ್ಯೂಟ್, ಲವ್ಲಿ, ಎಪಿಕ್ ಕಾಮೆಂಟುಗಳಿಗೆ ಲವ್ ಸಿಂಬಲ್ಲಿನ ರಿಪ್ಲೇ ಹಾಕಿ ಕುಳಿತ ಮೇಲೂ ಅವಳ ಎದೆಯಲ್ಲೊಂದು ಖಾಲಿ ಸ್ಲೇಟ್ ಹಾಗೇ ಉಳಿದಿತ್ತು.

ಸ್ವಸ್ತಿ ಆಫೀಸು ಇದ್ದದ್ದು ಮಲ್ಲೇಶ್ವರಂ ಎಯ್ತ್ ಕ್ರಾಸ್‌ನಲ್ಲಿ. ತಾವು ಮನೆ ಮಾಡಿರುವ ಸುಬ್ರಹ್ಮಣ್ಯಪುರದಿಂದ ಅದು ತೀರಾ ದೂರ. ನೀನು ಮಾಡುತ್ತಿರುವ ಕೆಲಸಕ್ಕೆ, ಜಾಬ್‌ಗೆ ಅಷ್ಟು ದೂರ ಹೋಗಬೇಕಾಗಿಲ್ಲ, ಅಲ್ಲಿ ಕೆಲಸ ಬಿಟ್ಟುಬಿಡು, ಹತ್ತಿರದಲ್ಲೇ ಅಂಥ ಒಂದು ಕೆಲಸಕ್ಕೆ ಸೇರಿಸುತ್ತೇನೆ ಅಂತ ಸಲಿಲ್ ಹೇಳಿನೋಡಿದ್ದ. ಒಮ್ಮೆ ಅವಳಿಗೆ ಅದು ಸರಿ ಅಂತಲೂ ಅನ್ನಿಸಿತ್ತು. ಯಾಕೆಂದರೆ ಹೋಗುವಾಗ ಗಡಿಬಿಡಿಯಲ್ಲಿ ಅಡುಗೆ ಮಾಡಿಡಬೇಕಿತ್ತು. ಓಡಿ ಬಂದು ಮತ್ತೇನೋ ಅಡುಗೆ ಮಾಡಬೇಕಾಗುತ್ತಿತ್ತು. ಹಾಗಂತ ಸಲಿಲ್ ಆಗಾಗ ಅನ್ನಕ್ಕೊಂದು ಇಟ್ಟು, ತಳ ಹೊತ್ತಿಸಿ, ಸ್ವಿಗ್ಗಿಯಿಂದ ತರಿಸಿಟ್ಟು ಮ್ಯಾನೇಜ್ ಮಾಡುತ್ತಿದ್ದನಾದರೂ ತಾನೇ ಅಡುಗೆ ಮಾಡಬೇಕು, ಇಲ್ಲವೆಂದರೆ ತಾನು ಈ ಅಡುಗೆ ಮನೆಯಿಂದ ವಿಮುಖಿನಾಗುತ್ತಿದ್ದೇನೆ, ತನ್ನ ಕರ್ತವ್ಯದಿಂದ ದೂರ ಹೋಗುತ್ತಿದ್ದೇನೆ ಅಂತ ಸ್ವಸ್ತಿಗೆ ಕಿರಿಕಿರಿಯಾಗುತ್ತಿತ್ತು. ಸಲಿಲ್ ಎಷ್ಟೇ ಸಮಾಧಾನಿಸಲು ಬಂದರೂ ಅವಳಿಗೆ ಅವನ ಮೇಲೆ, ತನ್ನ ಮೇಲೆ ವಿಪರೀತ ಕೋಪ ಉಕ್ಕುತ್ತಿತ್ತು.

ಹತ್ತಿರದಲ್ಲೇ ಕೆಲಸಕ್ಕೆ ಸೇರು, ಹೋಗಲಿ ಕೆಲಸ ಬಿಡು, ಹೋಗಲಿ, ನಾನೇ ಅಡುಗೆ ಮಾಡಿಕೊಳ್ಳುತ್ತೇನೆ ಅಂತ ಸಲಿಲ್ ಹೇಳಿದರೂ ಅವಳಿಗೆ ಯಾವುದನ್ನೂ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಒಂದು ದಿನ ಅಂತೂ ಮನೆಗೆ ಸಲಿಲ್‌ನ ಚಿಕ್ಕಮ್ಮ, ಚಿಕ್ಕಪ್ಪ ಕುಂದಾಪುರದಿಂದ ಬಂದು, ತಾನು ಬರುತ್ತಿದ್ದೇನೆ ಬರುತ್ತಿದ್ದೇನೆ ಅಂತ ಹೇಳಿ ಹೇಳಿ, ಬರೋದು ತಡವಾಗಿ ಚಿಕ್ಕಮ್ಮನೇ ಅಡುಗೆ ಮಾಡಿಟ್ಟು, ಕೆಲಸದಿಂದ ಬಂದ ಸ್ವಸ್ತಿಗೇ ಬಡಿಸಿದಾಗ ಅಳುವೇ ಬಂದುಬಿಟ್ಟಿತ್ತು. ಅದಾಗಿ ಎರಡು ರಾತ್ರಿ ಸಲಿಲ್ ಜೊತೆ ಒಂದು ಮಾತೂ ಆಡದೇ ಸತಾಯಿಸಿದ್ದಳು. ತನ್ನ ತಪ್ಪೇನೆಂದು ತಿಳಿದುಕೊಳ್ಳಲು ಒಂದು ದಿನ, ಬರಿದೇ ಹಠ ಸಾಧಿಸುತ್ತೀಯಾ ಅಂತ ಮತ್ತೊಂದು ದಿನ ಸಲಿಲ್ ಕೂಡ ಅವಳ ಹಠವನ್ನು ವಿಸ್ತರಿಸಿದ್ದ. ಆಫೀಸಿನಲ್ಲಿ ಟ್ರಾವೆಲ್ ಬುಕ್ ಮಾಡುವ ಕೆಲಸದಲ್ಲಿರುವ ಸ್ವಸ್ತಿ ಎಲ್ಲ ಊರುಗಳನ್ನೂ ಕಂಪ್ಯೂಟರ್ ಸ್ಕ್ರೀನ್ ಮೇಲೇ ನೋಡಿರುತ್ತಿದ್ದಳು. ಯಾರು ಬಂದರೂ ಅವರಿಗೆ ನಿಮ್ಮ ಟೇಸ್ಟ್ ಏನು ಅಂತ ತಿಳಿದುಕೊಂಡು ಸರಿಯಾದ ಜಾಗಕ್ಕೇ ಬುಕ್ ಮಾಡಿಕೊಡುತ್ತಿದ್ದಳು. ಹೋದವರು ತಿರುಗಿ ಬಂದು, ಪ್ಲೇಸ್ ಚೆನ್ನಾಗಿತ್ತು ಅಂತ ಹೇಳಿ ತಮ್ಮ ಪರಿಚಯದ ವ್ಯಕ್ತಿಗಳನ್ನು ಅವಳ ಏಜೆನ್ಸಿಗೆ ರೆಫರ್ ಮಾಡುತ್ತಿದ್ದರು. ಹೀಗೆ ಅವಳ ಕೆಲಸ ಮ್ಯಾನೇಜರ್‌ಗೂ ಮೆಚ್ಚುಗೆಯಾಗಿ, ಅವಳ ಕರ್ತವ್ಯಕ್ಕೆ ಬೆಲೆ ಬಂದಿತ್ತು. ಈ ಹೊತ್ತಿಗೆ ಕೆಲಸ ಬಿಟ್ಟು, ಹತ್ತಿರದಲ್ಲೇ ಕೆಲಸಕ್ಕೆ ಸೇರಿಕೋ ಅನ್ನುವ ಒತ್ತಡ, ಒತ್ತಾಸೆ ಸಲಿಲ್ ಕಡೆಯಿಂದ, ಅವನ ಮೂಲಕ ಸ್ವಸ್ತಿಯ ಅಪ್ಪಾಮ್ಮನ ಕಡೆಯಿಂದ ಹೆಚ್ಚುತ್ತಾ ಹೋಗುತ್ತಿತ್ತು. ಅವಳಿಗೆ ಆ ಕೆಲಸ ಹಿಡಿಸಿರಲಿಲ್ಲವಾದರೂ, ದೂರ ಅಂತ ಗೊತ್ತಿದ್ದರೂ ಸಲಿಲ್ ಒತ್ತಾಯ ಮಾಡಿದಷ್ಟೂ ಅವಳಿಗೆ ಆ ಕೆಲಸವನ್ನು ಏನಾದರೂ ಬಿಡಬಾರದೆಂಬ ಹಠ ಹೆಚ್ಚುತ್ತಾ ಹೋಯಿತು. ಇದನ್ನು ತಿಳಿಯದ ಸಲಿಲ್, ನಿನ್ನ ಕೆಲಸದ ಆಸಕ್ತಿಯಲ್ಲಿ ಮೂಗು ತೂರಿಸುತ್ತಿಲ್ಲ, ನಿನ್ನ ಸಂಬಳ ನನಗೆ ಬೇಕಾಗಿಲ್ಲ, ಹೋಗಲಿ, ಬೈಕ್ ಆದರೂ ತೆಗೆದುಕೊಂಡು ಬಸ್ಸಲ್ಲಿ ಓಡಾಡುವ ತಲೆನೋವನ್ನು ಕಮ್ಮಿ ಮಾಡಿಕೋ, ಕ್ಯಾಬ್‌ಗೆ ಹೋಗು, ನಾನೇ ಹಣ ಕೊಡುತ್ತೇನೆ ಎಂಬಿತ್ಯಾದಿಯಾಗಿ ಅವಳನ್ನು ಬೇರೆ ಬೇರೆ ದಾರಿಗಳಿಂದ ಬಂದು ಅಡ್ಡಗಟ್ಟಲು ನೋಡುತ್ತಿದ್ದ.

ಹಾಗೇ ಸ್ವಸ್ತಿ ಮಲ್ಲೇಶ್ವರಂ ಟ್ರಾವೆಲ್ಸ್ ಕೆಲಸವನ್ನು ಬಿಡದಿರಲು ನಿರ್ಧಾರ ಮಾಡಿದ್ದು.

ಸ್ವಸ್ತಿ ಬಸ್ಸು ಹತ್ತುವ ಹೊತ್ತಿಗೆ ಯಾವಾಗಲೂ ಮೊದಲ ನಾಲ್ಕು ರೋ ಸೀಟುಗಳು ಭರ್ತಿಯಾಗಿರುತ್ತಿದ್ದವು. ಮಾರುಕಟ್ಟೆಗೆ ಹೋಗುವ ಹೆಂಗಸರು ಬುಟ್ಟಿ ಇಟ್ಟುಕೊಂಡು ಹೂ ಕಟ್ಟುತ್ತಲೋ, ವಯಸ್ಸಾದವರು ನಿದ್ದೆ ಮಾಡುತ್ತಲೋ, ಕಾಲೇಜು ಹುಡುಗಿಯರು ಇಯರ್ ಫೋನ್ ಸಿಕ್ಕಿಸಿಕೊಂಡೋ ಆ ಪ್ರಯಾಣವನ್ನು ತಮ್ಮ ಸ್ವತ್ತನ್ನಾಗಿ ಮಾಡಿಕೊಂಡಿರುತ್ತಿದ್ದರು. ಹಾಗಾಗಿ ತಮಗೇ ಅಂತ ಇರುವ ಸೀಟುಗಳು ತನಗಾಗಿ ಕಾದಿರುವುದಿಲ್ಲ ಅಂತ ಅವಳಿಗೆ ಅರ್ಥವಾದಂತೇ ಅವಳು ಮಿಕ್ಕ ಸೀಟುಗಳ ತಲಾಶ್‌ಗೆ ತೊಡಗುತ್ತಿದ್ದಳು. ಹೇಗೋ ಗಂಡಸರ ಸೀಟೇ ಸಿಗುತ್ತಿತ್ತು, ಹೋಗುತ್ತಾ ಹೋಗುತ್ತಾ ಅವಳಿಗೆ ಗಂಡಸರ ಸೀಟುಗಳೇ ಹೆಚ್ಚು ಆಪ್ತವಾಗುತ್ತಿತ್ತು. ಗಂಡಸರೇ ತುಂಬಿರುವ ಜಾಗದಲ್ಲಿ ಕೂತಾಗ ಒಂದಷ್ಟು ಗಂಡಸರೇ ಸೇರಿಕೊಂಡು ಆಡುವ ಮಾತುಗಳು ಮಜಾ ಕೊಡುತ್ತಿದ್ದವು. ತೀರಾ ಪೋಲಿ ಜೋಕುಗಳನ್ನು ಸಿಡಿಸುವ ಗುಂಪಷ್ಟೇ ಅಲ್ಲ, ಆಫೀಸು, ಪಾರ್ಟಿ, ವೀಕೆಂಡು ಅಂತ ಒಂದು ಅವರದೇ ಜಗತ್ತಿನ ಮಾತುಗಳನ್ನು ಅವರು ಆಡುತ್ತಿರುವಾಗೆಲ್ಲ ಸ್ವಸ್ತಿಗೆ ಅದನ್ನು ಸುಮ್ಮನೇ ಕೇಳಿಸಿಕೊಳ್ಳಬೇಕು ಅನ್ನಿಸುವುದು. ಗಾಳಿಯಲ್ಲಿ ಹಾರಾಡುವ ಮಾತಿನಂತೆ ಹಗುರವೂ, ಕಚಗುಳಿ ಇಡುವಂಥವೂ ಆಗಿದ್ದರಿಂದ, ಇಯರ್ ಫೋನ್ ಹಾಕಿಕೊಂಡು, ಕೇಳಿಸಲೇ ಇಲ್ಲ ಅನ್ನುವಂತೆ ನಾಟಕವಾಡುತ್ತಾ, ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಅದೇನೋ ವಿಚಿತ್ರ ಆನಂದವನ್ನು ಮೈದುಂಬಿಕೊಂಡು ಸ್ವಸ್ತಿ ಮನೆಗೆ ಬರುತ್ತಿದ್ದಳು.

ಹೀಗಿರುವಾಗ ಸಲಿಲ್‌ನ ಅಮ್ಮ ಒಂದು ತಿಂಗಳ ಮಟ್ಟಿಗೆ ಬೆಂಗಳೂರಿಗೆ ಬಂದರು. ಅವಳೇ ಅಡುಗೆ ಮಾಡುತ್ತಿದ್ದ ಕಾರಣ ಸ್ವಸ್ತಿಗೆ ಸ್ವಲ್ಪ ಆರಾಮವೂ ಆಯಿತು. ಸ್ವಲ್ಪ ತಡವಾಗಿಯೂ ಎದ್ದೇಳುತ್ತಿದ್ದ ಸ್ವಸ್ತಿ, ಕಾರ್ಟೂನ್ ನೋಡಿ, ನಿಧಾನಕ್ಕೆ ತಿಂಡಿ ತಿಂದು, ಎರಡು ಬಸ್ಸುಗಳನ್ನು ಬದಲಾಯಿಸಿ ಮಲ್ಲೇಶ್ವರಂಗೆ ಹೋಗುತ್ತಿದ್ದಳು. ಕೆಲವೊಮ್ಮೆ ಮಲ್ಲೇಶ್ವರಂನ ದಾರಿಗಳಲ್ಲಿ ಒಬ್ಬಳೇ ಸುಮ್ಮನೇ ನಡೆದಾಡುತ್ತಾ, ಗದ್ದಲ ಮತ್ತು ಗಾಳಿಯನ್ನು ಕಿವಿಗೆ ತುಂಬಿಕೊಳ್ಳುತ್ತಾ ಸಾಕಷ್ಟು ಖಾಲಿ ಇರುವ ಬಸ್ಸುಗಳನ್ನೇ ಹತ್ತಿ, ಮನೆಗೆ ಬರುತ್ತಿದ್ದಳು. ತಡವಾಯಿತೆಂದರೆ ಮಲ್ಲೇಶ್ವರಂನ ಕ್ರಾಸ್‌ನಲ್ಲಿ ಸುಮ್ಮನೇ ಓಡಾಡುವ ಖುಷಿಯನ್ನು ಸಲಿಲ್‌ನ ಹತ್ತಿರ ಹಂಚಿಕೊಳ್ಳುತ್ತಿದ್ದಳು. ಅವನು ಅವಳನ್ನು ಹಾಗೇ ನೋಡುತ್ತಿದ್ದ, ನಿನ್ನದು ಹುಚ್ಚಾಟ ಮಾರಾಯ್ತಿ ಅಂತ ಕೆನ್ನೆ ಚಿವುಟುತ್ತಿದ್ದ. ಅಮ್ಮನಿಗೊಂದು ಹೇಳಬೇಡ ಅಂತ ಶ್ ಶ್ ಅಂತ ಮಾಡುತ್ತಿದ್ದ. ಹಾಗಲಕಾಯಿಯನ್ನು ಕಹಿ ಇಲ್ಲದಂತೆ ಪದಾರ್ಥ ಮಾಡುವುದು ಹೇಗೆ ಅಂತ ಬೆಳಿಗ್ಗೆ ಅತ್ತೆ ಸ್ವಸ್ತಿಗೆ ಹೇಳುತ್ತಿದ್ದರೆ ಅದು ಕಿವಿಗೇ ಬೀಳುತ್ತಿರಲಿಲ್ಲ, ಅವಳ ಕಿವಿಯ ತುಂಬ ಮಲ್ಲೇಶ್ವರಂ ಒಳದಾರಿಗಳ ಮಬ್ಬುಗತ್ತಲ ಗಾಳಿಯೇ ತುಂಬಿಕೊಂಡ ಹಾಗೆ ಉನ್ಮತ್ತತೆ ಆವರಿಸಿಕೊಳ್ಳುತ್ತಿತ್ತು.

ಹಾಗೆ ಇರುವಾಗಲೇ ಸಲಿಲ್‌ನ ಅಮ್ಮ, ಅವಳು ಬಸ್ಸಲ್ಲೇಕೆ ಸುತ್ತಬೇಕು, ನೀನು ಹೇಗಿದ್ದರೂ ವರ್ಕ್ ಫ್ರಂ ಹೋಮ್ ಮಾಡುತ್ತಿದ್ದಿ, ಬೆಳಿಗ್ಗೆ ಅವಳನ್ನು ಕೊಂಡು ಹೋಗಿ ಬಿಟ್ಟು ಬಾ, ರಾತ್ರಿ ಕರೆದುಕೊಂಡು ಬಾ ಅಂತ ಆಜ್ಞೆ ಹೊರಡಿಸಿದಳು. ಅಷ್ಟಕ್ಕೂ ಸಲಿಲ್‌ಗೆ ಇದರಲ್ಲಿ ಆಸಕ್ತಿ ಇಲ್ಲದಿರಲಿಲ್ಲ. ಬೈಕಿನಲ್ಲಿ ಕರೆದೊಯ್ದು, ಬರುವಾಗ ಫುಡ್ ಸ್ಟ್ರೀಟ್‌ನಲ್ಲಿ ಒಂದೇ ತಟ್ಟೆಯಲ್ಲಿ ಇಬ್ಬರೂ ಅವರೆಕಾಳು ದೋಸೆ ತಿಂದುಕೊಂಡು ಬರಬೇಕು, ಅವಳು ತನ್ನನ್ನು ತಬ್ಬಿ ಹಿಡಿಯಬೇಕು, ಯಾವುದೋ ಕತ್ತಲಲ್ಲಿ ಅಚಾನಕ್ ನಿಲ್ಲಿಸಿ, ಸುಖಿಸಬೇಕು ಅಂತೆಲ್ಲ ಫ್ಯಾಂಟಸಿಗಳಿದ್ದವು. ಆದರೆ ಯಾವುದರಲ್ಲೂ ಸ್ವಸ್ತಿಗೆ ಒತ್ತಾಯ ಮಾಡಬಾರದು ಅಂತ ಮೊದಲೇ ಸಲಿಲ್ ನಿರ್ಧರಿಸಿದ್ದ. ಆದರೆ ಈಗ ಅಮ್ಮನೇ ಸ್ವಸ್ತಿ ಎದುರು ಈ ಮಾತನ್ನು ಹೇಳಿ, ಅವಳಿಗೆ ನಿರ್ಧಾರ ತೆಗೆದುಕೊಳ್ಳುವುದಕ್ಕೇ ಅವಕಾಶ ಆಗದಾಗ ಬೆಳಿಗ್ಗೆ ಬಿಡಲು ಹೋದ. ಬಿಟ್ಟು, ಕೈ ಮಾಡುವಾಗ ಸ್ವಸ್ತಿ ಇದೆಲ್ಲ ಇಷ್ಟ ಆಗ್ತಾ ಉಂಟೋ, ಇಲ್ಲವೋ ಅಂತ ತೋರಿಸಿಕೊಳ್ಳದೇ ಎಂದಿನಂತೆ ಸಹಜವಾಗಿ ಬಾಯ್ ಮಾಡಿ ಹೊರಟು ಹೋಗಿದ್ದಳು. ಹಾಗೇ ರಾತ್ರಿ ಕರೆದುಕೊಂಡು ಬರುವುದಕ್ಕೆ ಸಲಿಲ್ ಹೋಗುವ ನಿರ್ಧಾರ ಮಾಡಿದ.

★★★

ಮಲ್ಲೇಶ್ವರಂನಲ್ಲಿ ಸ್ವಸ್ತಿ ಕೆಲಸ ಮಾಡುತ್ತಿದ್ದ ಏಜೆನ್ಸಿಯ ಹಿಂದೆ ದೊಡ್ಡ ಮರವಿತ್ತು, ಅದು ಯಾವ ಮರವೇ ಆಗಿರಲಿ, ಅದನ್ನು ಆಲದ ಮರ ಅಂತ ಕರೆಯುತ್ತೇನೆ ಅಂತ ಸದಾ ಸ್ವಸ್ತಿ ವಾದಿಸುತ್ತಿದ್ದಳು. ಆ ಮರದ ಎಲೆಗಳು ಹಾರಿ ಬಂದು ಕಿಟಕಿಯಿಂದ ಇವರ ಫರ್ಮ್‌ಗೆ ಬೀಳುತ್ತಿದ್ದವು. ಇರುವ ಕಸದ ಜೊತೆ ಮತ್ತೊಂದು ಅಂತ ಕೆಲಸದವಳು ಬೈಯುತ್ತಲೇ ಇರುತ್ತಿದ್ದಳು, ಆದರೆ ಯಾಕೋ ಸ್ವಸ್ತಿಗೆ ಹಾರಿ ಬರುವ ಆ ಎಲೆಗಳೆಂದರೆ ಇಷ್ಟ, ಅದೂ ಕೆಲವೊಮ್ಮೆ ಅವಳ ಸೀಟಿನ ಕಳಗೇ ಬಂದು ಬೀಳುತ್ತಿದ್ದವು. ಸ್ವಸ್ತಿ ಅವುಗಳನ್ನು ಕೈಗೆತ್ತಿಕೊಂಡು ನೇವರಿಸುತ್ತಿದ್ದಳು. ಆಗೆಲ್ಲ ದೊರಗುದೊರಗಾದ ಆ ಎಲೆಗಳು ಅವಳ ಮೃದು ಕೈಗೆ ಹಿತವಾದ ಸ್ಪರ್ಶ ಕೊಡುತ್ತಿದ್ದವು.

ಅವತ್ತೇ ಬೆಳಿಗ್ಗೆ ಒಂದು ಹೊಸ ಜೋಡಿ ಏಜೆನ್ಸಿಗೆ ಬಂತು. ಬಾಲಿಗೆ ತ್ರಿ ಡೇಸ್, ಟೂ ನೈಟ್ಸ್ ಪ್ಯಾಕೇಜು ಬುಕ್ ಮಾಡಿಕೊಡಲು ಹೇಳಿದರು. ಸ್ವಸ್ತಿ ಅವರನ್ನು ಕೂರಿಸಿ, ಬುಕ್ ಮಾಡುವ ಕೆಲಸದಲ್ಲಿ ತೊಡಗಿದಳು. ಆ ನವವಧು ಆಗಾಗ ನಗುತ್ತಾ, ಅವನು ಅವಳ ಕಿವಿಯಲ್ಲೇನೋ ಪಿಸುಗುಡುತ್ತಾ, ಅವನವಳ ಕಪ್ಪು ವೇಲನ್ನು ಸರಿಸಿ ಮದರಂಗಿ ಬೆರಳುಗಳನ್ನು ನೇವರಿಸುತ್ತಾ ತನ್ನದೇ ಲೋಕದಲ್ಲಿ ಇರುವುದನ್ನು ಸ್ವಸ್ತಿ ನೋಡುತ್ತಾ ನೋಡುತ್ತಾ ಸುಖಾಸುಮ್ಮನೆ ಸಿಡಿಮಿಡಿಯಾದಳು. ಟೀ ಯಾಕೆ ಬಿಸಿ ಇದೆ ಅಂತ ಆಯಾಳನ್ನು ಬೈದಳು, ಬರೆವ ಪೆನ್ನೆಲ್ಲ ಇಂಕು ಕಾರಿಕೊಂಡು, ಕೈಯೆಲ್ಲ ಮಸಿಯಾಗಿ, ಅವಳು ಅದನ್ನು ತೊಳೆದುಕೊಳ್ಳಲು ವಾಶ್‌ರೂಮಿಗೆ ಹೋಗಿ ಜಾಸ್ತಿ ಸಮಯವನ್ನೇ ತೆಗೆದುಕೊಂಡಳು.

ಕನ್ನಡಿಯಲ್ಲಿ ಬಿದ್ದುಕೊಂಡ ತನ್ನನ್ನೇ ತಾನು ನೋಡುವಾಗ ಸಲಿಲ್ ಬೈಕಿನಲ್ಲಿ ಬಿಟ್ಟು ಹೋಗಿದ್ದು ಮತ್ತು ಸಂಜೆ ಅವನು ಕರೆದುಕೊಂಡು ಹೋಗಲು ಬರುತ್ತಿವುದು ಜ್ಞಾಪಕಕ್ಕೆ ಬಂತು. ಹೊರಗೆ ಬಂದವಳು ಆಚೆ ನಿಂತು ಕಿಟಕಿಯಿಂದ ನೋಡಿದಳು. ಮರ ಕಾಣುತ್ತಿರಲಿಲ್ಲ, ಆದರೆ ಅಲ್ಲಿನುಗ್ಗಿ ಬರುವ ಗಾಳಿ ಆ ಮರದ್ದೇ ಅಂತ ಅನ್ನಿಸಿ, ಹೋಗಿ ಕಿಟಕಿಯಿಂದ ಹಣಕಿ ಹಣಕಿ ಆ ಮರದ ಕೆಲ ಭಾಗವಾದರೂ ಕಾಣಿಸಬಹುದು ಅಂತ ಪ್ರಯತ್ನಿಸಿದಳು. ಮರ ತನ್ನ ಮೈಯನ್ನು ಅವಳಿಂದ ಅಡಗಿಸಿ ಇಟ್ಟಂತೆ ಆಚೆಕಡೆಗೆ ಬಾಗಿಕೊಂಡಿತು.

ಹೀಗೆ ತಪ್ಪಿಸಿಕೊಂಡು ಎಷ್ಟು ದಿನ ಇರುತ್ತೀಯಾ, ಹೆಚ್ಚು ಆಟ ಆಡಿದರೆ ನಿನ್ನನ್ನು ಕಡಿಸಿ ಹಾಕಿಸುತ್ತೇನೆ ಅಂತ ಸ್ವಸ್ತಿ ಮನಸಲ್ಲೇ ಅಂದುಕೊಂಡಳು. ಕೈಲಿರುವ ಎಲೆಯನ್ನು ನೆಲದ ಮೇಲೆ ಎಸೆದು, ಕಸ ಎಲ್ಲ ಹಾಗೇ ಉಂಟಲ್ಲ ಅಂತ ಜೋರಾಗಿ ಕೂಗುವಂತೆ ಕಂಪ್ಲೇಂಟ್ ಮಾಡಿದಳು. ಇನ್ನೂ ಎಷ್ಟು ಹೊತ್ತು ಆಗ್ತದೆ ಅಂತ ಆ ನವವಿವಾಹಿತ ಗಂಡಸು ಬಂದು ಕಿರಿಕಿರಿಯಲ್ಲೇ ಕೇಳಿದಾಗ, ವಾಪಾಸ್ ಚೇರ್‌ಗೆ ಬಂದು ಕುಳಿತು ಕೆಲಸ ಪ್ರಾರಂಭಿಸಿದರೂ ಅವಳಿಗೇಕೋ ಮಂಕು ಆವರಿಸಿಕೊಂಡೇ ಇತ್ತು.

★★★


ನೀನು ಹೊರಡುವುದಿಲ್ಲವಾ ಅಂತ ಫ್ಯೂನ್ ಕೇಳಿದಾಗ ಸಂಜೆಯಾಯ್ತೆಂದು ಅರಿವಾಯಿತು. ಅದೇನೋ ಉದಾಸೀನದಿಂದ ಎದ್ದು ಬ್ಯಾಗ್ ತೆಗೆದುಕೊಂಡು ಸ್ವಸ್ತಿ ಹೊರಟಳು. ಹಿಂದೆ ಹೋಗೇ ಇರದ ಒಂದು ಮಬ್ಬುಗತ್ತಲ ರಸ್ತೆಯಲ್ಲಿ ಹೀಗೇ ನಡೆಯತೊಡಗಿದಳು. ಆಗಾಗ ಎದುರಾಗುವ ಬೀದಿ ಬೆಳಕು, ಇದ್ದಕ್ಕಿದ್ದ ಹಾಗೇ ಎದುರಾಗುವ ಮಸುಕು ಕತ್ತಲು, ಯಾವುದೋ ತಿರುವಿನಲ್ಲಿ ಸಿಗಬಹುದಾದ ಅಪರಿಚಿತರ ಹಿಂಡು, ಎಲ್ಲೋ ಮಲ್ಲಿಗೆ ದಂಡೆಯ ಕುತ್ತರಿ ಇಟ್ಟುಕೊಂಡು ಹೂವಿಗೆ ನೀರು ಚಿಮುಕಿಸುತ್ತಾ ಕುಳಿತ ಜೀವಗಳು, ಹಿಂದೆ ಹಿಂದೆ ಬರುವವರೆಲ್ಲ ಹಿಂಬಾಲಿಸುವವರೋ ಅಲ್ಲವೋ ಅನ್ನುವ ಗೊಂದಲ, ಬೈಕಿನ ಹಾರನ್ನಾದರೆ ಅದು ಸಲಿಲ್‌ನದೇ ಇರಬಹುದು ಎಂಬ ಅನುಮಾನಗಳನ್ನು ದಾಟುತ್ತಾ ಸ್ವಸ್ತಿ ನಡೆಯುತ್ತಲೇ ಹೋದಳು.

ದೂರದಲ್ಲಿ ಯಾವುದೋ ಸ್ಟಾಪ್ ಅಲ್ಲದ ಸ್ಟಾಪ್‌ನಲ್ಲಿ ಬಸ್ಸು ಕಂಡಿತು. ಓಡತೊಡಗಿದಳು, ಓಡುತ್ತಲೇ ಹೋದಳು. ಅದು ನಿಲ್ಲಲಿಕ್ಕಿಲ್ಲ ಅಂತ ಅನ್ನಿಸಿದಾಗ ಹಿಡಿಯಲೇ ಬೇಕನ್ನಿಸಿ ಇನ್ನೂ ಓಡಿದಳು.
ಕಡೆಗೂ ಹಿಂದಿನ ಬಾಗಿಲಿನಿಂದ ಸ್ವಸ್ತಿ ಹತ್ತಿಕೊಂಡಳು. ಅಂತೂ ಸಿಕ್ಕಿತು ಅಂತ ಹೆಮ್ಮೆಯಿಂದ ಸರಳು ಹಿಡಿದು ನಿಂತಾಗ ಎಲ್ಲರೂ ಅವಳನ್ನೇ ಮಿಕಿಮಿಕಿ ನೋಡಿದರು. ಓಡಿ ಸುಸ್ತಾಗಿದ್ದರಿಂದ ಯಾರಾದರೂ ಒಂದು ಸೀಟು ಬಿಟ್ಟುಕೊಡಬಹುದಾ ಅಂತ ಆಸೆಯಿಂದ ನೋಡಿದರೆ ಎಲ್ಲ ಆಸನಗಳೂ ಎಂದಿನಂತೆ ಫುಲ್ಲಾಗಿದ್ದವು.

ಸ್ವಸ್ತಿ ಹಾಗೇ ನಿಂತುಕೊಂಡು ಜೋರಾಗಿ ನಿಟ್ಟುಸಿರು ಬಿಟ್ಟಳು.

★★★

ಅವಳನ್ನು ಡ್ರಾಪ್ ಮಾಡಿದ ಜಾಗದಲ್ಲೇ ಬೈಕು ತಂದು ನಿಲ್ಲಿಸಿದ ಸಲಿಲ್, ಅವಳು ಬರುವ ಮೊದಲು ಒಂದು ಪಾನ್ ಹಾಕಿಬಿಡೋಣ ಅಂತ ಪಾನ್ ಶಾಪ್‌ಗೆ ಓಡಿದ.





ಕಲರ್ಸ್ ಕನ್ನಡ ವಾಹಿನಿಯಲ್ಲಿ ಬರಹಗಾರರಾಗಿರುವ ವಿಕಾಸ್ ನೇಗಿಲೋಣಿ ಪತ್ರಕರ್ತ ಮತ್ತು ಕಥೆಗಾರ. ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಪತ್ರಿಕೋದ್ಯಮ ಪದವಿ ವ್ಯಾಸಂಗ ಮಾಡಿದ್ದಾರೆ. ಹಲವು ಧಾರವಾಹಿಗಳಿಗೆ ಶೀರ್ಷಿಕೆ ಗೀತೆ, ಸಂಭಾಷಣೆ, ಚಿತ್ರಕಥೆಗಳನ್ನೂ ಬರೆದಿದ್ದಾರೆ.

ಎಷ್ಟೋ ಕಾಲದ ಇತಿಹಾಸ ಇರೋ ವಂಡಾರು ಕಂಬಳ ನೋಡೋದೇ ಚಂದ ; ಈಗೀಗ ಕಾಂತಾರ ಬಂದಮೇಲೆ ಕೆರಾಡಿ ಕಂಬಳ ಅಂತ ಜನ ಹೇಳ್ತಾ ಇದ್ರೂ ವಂಡಾರು ಕಂಬಳದ ಹೆಸರೇ ಬೇರೆ ಇದೆ . ಯಕ್ಷಗಾನಂ ವಿಶ್ವಗಾನಂ ಅನ್ನೋದು ಇಲ್ಲಂತೂ ಸತ್ಯ

ನಾನು ಕಂಡ ಕುಂದಾಪುರ







ಪ್ರಬಂಧ



ಸಾಧನಾ ಶಾಸ್ತ್ರಿ

ಮಲೆನಾಡು ಹಸಿರು ಮಳೆ ಚಳಿ ಇದರಲ್ಲೇ ಇದ್ದ ನನಗೆ ನೀನು ಇಲ್ಲಿ ಓದಿದ್ದು ಸಾಕು ಇನ್ನು ಕುಂದಾಪುರದಲ್ಲಿ ಓದು ಅಂತ ಮನೇಲಿ ಎಲ್ಲರೂ ಹೇಳೋಕೆ ಶುರು ಮಾಡಿದಾಗ ಏನು ಕುಂದಾಪುರನ? ಅದೆಲ್ಲಿ ಇದೆ ಅಂತ ಪೆದ್ದಾಗಿ ಕೇಳಿದ್ದೆ. ನಮ್ಮ ಊರಿನ ಮೇಲೆ ಹೋಗುವ ಎಲ್ಲಾ ಬಸ್ಸುಗಳ ನೇಮ್‌ಪ್ಲೇಟ್ ಮೇಲೆ ಕುಂದಾಪುರ ಎಕ್ಸ್‌ಪ್ರೆಸ್ ಅನ್ನೋದು ಓದಿದ್ದು ಬಿಟ್ಟರೆ, ಆ ಊರನ್ನು ಒಮ್ಮೆಯೂ ನೋಡಿರಲೇ ಇಲ್ಲ! ಮೊದಲ ಬಾರಿಗೆ ಬಸ್ ಕಂಡಕ್ಟರ್ ಬಳಿ ಅಪ್ಪ ಟಿಕೆಟ್ ಮಾಡಿಸುವಾಗ ಕುಂದಾಪುರಕ್ಕೆ ಎಷ್ಟು ಹೊತ್ತು ಬೇಕು ಎಂದಾಗ ಏನಿಲ್ಲ ಒಂದು ಮೂರು ಗಂಟೆ ಅಷ್ಟೇ ! ಎಂದಿದ್ರು ನಾನಾಗಲೇ ಅಯ್ಯೋ ಮೂರಾ ಎಂದು ಸುಸ್ತಾಗಿದ್ದೆ. ಅಂತೂ ಕುಂದಾಪುರ ಎನ್ನುವ ಊರಿಗೆ ನಾನು ಸೇರಿಯಾಗಿತ್ತು. ಬರೀ ತಂಪಿನ ವಾತಾವರಣ ನೋಡಿದ ನನಗೆ ಇಲ್ಲಿನ ಬಿಸಿಲು ನಿನ್ನ ಕೈಲಿ ಆಗಲ್ಲ ಎನ್ನುವಷ್ಟು ಹೆದರಿಕೆ ಮೂಡಿಸಿತ್ತು. ಭಿನ್ನ ಆಚರಣೆ ; ಭಿನ್ನ ಭಾಷೆ ; ಎಲ್ಲವನ್ನೂ ಕಲಿಯುವ ಅನಿವಾರ್ಯ ಇದ್ದೇ ಇತ್ತು.

ಬೇಸ್ತು ಬೀಳಿಸಿದ ಭಾಷೆ

ಕುಂದಾಪ್ರ ಕನ್ನಡ ಎನ್ನುವ ಭಾಷೆ ಬಿಟ್ಟು ಇಲ್ಲಿನ ಜನಕ್ಕೆ ಬೇರೆ ಭಾಷೆ ಇದೆ ಎನ್ನುವುದು ಗೊತ್ತಿಲ್ಲ. ನನಗೋ ಇವರ ಭಾಷೆ ಅರ್ಥವಾಗದೆ ಆದ ಯಡವಟ್ಟು ಒಂದೆರಡಲ್ಲ. ಮೊದಲ ಬಾರಿ ಕಾಲೇಜಿಗೆ ಹೋಗುವ ಭಯ ಒಂದೆಡೆ.

ಹೇಗೋ ಧೈರ್ಯ ಮಾಡಿ ಹೊರಟಾಗ ಜಾಗ್ರತೆ ಅಕಾ ಅಂತ ಸೀನಿಯರ್ ಹೇಳಿದ್ದು ಕೇಳಿ, ಅಕ್ಕಾ ನಾನು ಚಿಕ್ಕವಳು ಯಾಕೆ ಅಕ್ಕಾ ಅಂತೀರಾ ಅಂದಿದ್ದೆ! ಅಯ್ಯೋ ಹೆಣಾ ಅದು ಅಕ್ಕಾ ಅಲ್ದೇ ಅಕಾ ಅಂದ್ರೆ ಆಯ್ತಾ ಅಂತ ಅರ್ಥ ಅಂದಿದ್ರು. ಹೆಣ ಎಲ್ಲಿದೆ ಅಂತ ಮತ್ತೆ ಹೆದರಿ ಕೇಳಿದ್ದಕ್ಕೆ, ಹೆಣ ಅಲ್ವೇ ಹೆಣ್ಣೇ ಅಂತ; ಇಲ್ಲಿ ಭಾಷೆ ಕಲಿದೇ ಹೆಂಗ್ ಬದ್ಕೆ ನೀನು ಅಂತ ನಕ್ಕಿದ್ದು ಇನ್ನೂ ನೆನಪಿದೆ. ಇಲ್ಲಿನ ಭಾಷೆಯೇ ಹಾಗೆ! ಒಂಥರ ವಿಚಿತ್ರ ಅನ್ನಿಸ್ತಾ ಇದ್ರು ಈಗೀಗ ಅಭ್ಯಾಸ ಆಗಿ ಇಷ್ಟ ಆಗಿದೆ.

ಎಲ್ಲವನ್ನೂ ಶಾರ್ಟ್‌ಕಟ್ ಆಗಿ ಹೇಳೋದು; ಊಟ ಆಯ್ತಾ ಅನ್ನುವ ಬದಲು ಉಂಡ್ಯ, ಬರೆದು ಬರಬೇಕಾ ಅನ್ನೋಕೆ ಬರ್ಕಬರ್ಕ, ಇದಂತೂ ನಾನು ಮೊದಲು ಮಂಗ ಅಂತ ಮಾಡಿದ್ದೆ. ಹೋಗಿ ಅನ್ನೋಕೆ ಹೊಯ್ನಿ! ಕನ್ನಡವ ಬೇರೆ ಭಾಷೆಯ ಅಂತ ಎಷ್ಟೋ ಬಾರಿ ಅನ್ನಿಸಿದ್ದು ಇದೆ; ಇಲ್ಲಿನ ಜನ ಎಂತ ಬೇಕಾರು ಬಿಡ್ತೋ ಭಾಷಿ ಬಿಡುದಿಲ್ಲ ಅನ್ನೋದು ನಿಜಕ್ಕೂ ಸತ್ಯ . ಮಲೆನಾಡಿನ ಕನ್ನಡಕ್ಕೂ ಇವರ ಶುದ್ಧ ಕರಾವಳಿ ಕನ್ನಡಕ್ಕೂ ಎಷ್ಟು ವ್ಯತ್ಯಾಸ. ಬೈಗುಳ ಕೂಡ ಹಾಗೆ, ಇಲ್ಲಿ ಮಾತಿಗೆ ಮುಂಚೆ ಹೆಕ್ಕ ತಿಂಬವ ಎಂದು ನಗ್ತಾರೆ! ಹ್ವಾಯ್ ಹೆಂಗಿದ್ರಿ ಎಲ್ಲಾ ಸಾಪ ಅಂತ ಹೇಳದೇ ಮಾತು ಶುರುವಾಗಲ್ಲ; ಭಾಷೆ ಕಲಿದೇ ಇದ್ದರೆ ಬೇರೆಯೋದೆ ಇಲ್ಲ ನಮ್ಮ ಜೊತೆಗೆ.

ಕಾಡು-ಕಡಲ ಮಧ್ಯೆ ಜೀವನ

ಬರೀ ಹಳ್ಳ ಕೊಳ್ಳ ಜಲಪಾತ ಅಲ್ಲಿದ್ದ ನೀರು ಮಾತ್ರವೇ ಚೆಂದ ಎಂದು ತಿಳಿದಿದ್ದ ನನಗೆ ಅದೆಷ್ಟು ನೋಡಿದರೂ ಮುಗಿಯದ ಸಮುದ್ರಗಳ ನೋಡಿ ಅಬ್ಬಾ ಎನಿಸಿತ್ತು. ಕಡಲ ತೀರದ ಊರು ಎಷ್ಟು ಚೆಂದವಿದೆ. ಅತ್ತ ಕಣ್ಣು ಹಾಯಿಸಿದಷ್ಟೂ ದೂರವೂ ಸಮುದ್ರ, ಮರಳ ರಾಶಿಯಲ್ಲಿ ಕುಳಿತು ಅಲೆಗಳ ನೋಡೋದೇ ಖುಷಿ. ಸೂರ್ಯ ಮುಳುಗುವ ಹೊತ್ತು ಕಣ್ಣಿಗೆ ನಿಜಕ್ಕೂ ಹಬ್ಬ.

ಮೊದಲೆಲ್ಲ ಈ ಊರು ಅಂತ ಹೇಳುತ್ತಿದ್ದ ನಾನು ದಿನ ಕಳೆದ ಹಾಗೆ 'ನಮ್ಮ ಕುಂದಾಪ್ರ' ಎಂದು ಹೇಳಲು ಶುರು ಮಾಡಿದ್ದೆ! ಅತ್ತ ದೊಡ್ಡ ಪಟ್ಟಣವೂ ಅಲ್ಲದ ಇತ್ತ ಹಳ್ಳಿಯೂ ಅಲ್ಲದ

ನಮ್ಮ ಭಾಷೆ ನಮ್ಮ ಸಂಸ್ಕೃತಿ ಮೇಲೆ ಇವರಿಗೆ ಇರುವ ಅಭಿಮಾನ ನಿಜವಾಗಿಯೂ ನನಗೇ ಇಲ್ಲ. ಹೊಸ ಜನರ ಬಳಿ ನಾವೋ ಅವ್ರ ಭಾಷೇಲಿ ಮಾತಾಡಿ ಹತ್ತಿರ ಆಗುವ ಕಾಲದಲ್ಲಿ ಇಲ್ಲಿನ ಜನ ಹಾಗಲ್ಲ ಜಾಪ್ ಬಿಡ್ ಕುಂದಾಪ್ರ ಕನ್ನಡ ಮಾತಾಡ್ ಅಂತ ಭಾಷೆಯೇ ಬರದ ನಮಗೂ ಭಾಷೆ ಕಳಿಸಿ ನಮ್ಮನ್ನೂ ಅವರ ಜೊತೆ ಸೇರಿಸಿಕೊಳ್ತಾರೆ.

ಊರಿದು. ಇನ್ನೂ ವಿಶೇಷ ಅಂದರೆ ಇಲ್ಲಿ ಕೆಲವು ಊರುಗಳು ನೀರಿನ ಮಧ್ಯೆ ಇರೋದು. ನನಗಂತೂ ಮೊದಲ ಬಾರಿ ಆ ಊರುಗಳನ್ನು ನೋಡಿದಾಗ ಅಬ್ಬಾ ಇವರೆಲ್ಲ ನೀರಿನ ನಡುವೆ ಹೇಗೆ ಇರುತ್ತಾರೆಂದು ಹೆದರಿಕೆ ಆಗಿತ್ತು. ಆಚೆ ಕಾಡು ಇದೆ ಈಚೆ ಕಡಲು ಇದೆ. ಮಧ್ಯದ ಜೀವನ ಇಲ್ಲಿಯವರದ್ದು.

ಇಷ್ಟೆಲ್ಲದರ ಮಧ್ಯೆ ನಂಗೆ ಹಲವು ಬಾರಿ ತಮಾಷೆ ಆಗಿದ್ದು ಕಾಲೇಜಿನ ಹೆಸರು. ಭಂಡಾರಕಾರ್ಸ್ ಎನ್ನುವ ಹೆಸರನ್ನ ನಾನು ಹೆಚ್ಚು ಕಡಿಮೆ ಒಂದು ವರ್ಷ ಭಂಡಾರ್ ಕರ ಕಾಲೇಜು ಎಂದೇ ಹೇಳುತ್ತಿದ್ದೆ. ಎಂತ ನಿನ್ ಕಾಲೇಜಿನ ಹೆಸ್ರು ಹೇಳೋಕೆ ಬರಲ್ವಾ ಅಂತ ಎಷ್ಟೋ ಜನ ನಗ್ತಾ ಇದ್ರು. ಕಾಲೇಜ್ ಹೆಸ್ರು ಹೇಳುಕ್ ಆಗ್ದಿರ್ ಮೇಲ್ ಇಲ್ ಎಂತ ಮಾಡ್ತಿ ಗೆಂಟಿ ಮೆಯ್ಸುಕ್ ಹೋಗ್ ಅಂತ ಜೊತೇಲಿ ಇರೋರು ಹೇಳ್ತಾ ಇದ್ರು. ಗೆಂಟಿ ಅಂದ್ರೆ ದನ ಅಂತ ಈಗೀಗ ಗೊತ್ತಾಗಿದ್ದು.

ತುಸು ಹೆಚ್ಚೇ ಎನ್ನುವಷ್ಟು ದೇವರ ಮೇಲೆ ಭಕ್ತಿ ಇರೋದು ಇಲ್ಲೇ ಅನಿಸುತ್ತದೆ. ಪ್ರತಿ ಕೆಲ್ಸಕ್ಕೂ ದೇವರ ಒಪ್ಪಿಗೆ ಬೇಕು. ದೇವರ ಪ್ರಸಾದ ಆಗದೆ ಇದ್ದರೆ ಎಷ್ಟೇ ಮುಖ್ಯದ ಕೆಲಸವೇ ಆದ್ರೂ ಮಾಡೋದಿಲ್ಲ. ದೈವದ ಮನೆ ಪಂಜುರ್ಲಿ ಗುಳಿಗ ನಾಗಾರಾಧನೆ ಜಾಸ್ತಿ. ಅಂದಹಾಗೆ ಇಲ್ಲೆಲ್ಲ ಹೇಗೆ ಅಂದ್ರೆ ಅವರ ಎಲ್ಲ ಕೆಲಸವನ್ನೂ ಬಿಟ್ಟು ದೇವಸ್ಥಾನಕ್ಕೆ ವಾರಕ್ಕೆ ಒಮ್ಮೆ ಆದ್ರೂ ಇಡೀ ಕುಟುಂಬವೇ ಹೋಗಿ ಬರ್ತಾರೆ. ಇಲ್ಲಿನ ಜನರ ಹಾಗ್ ಯಾರೂ ಹೋಗಲ್ಲ ನಾನು ನೋಡಿದ ಹಾಗೆ.


ಹೋಯ್ ಇಲ್ ಕೇಣಿ ಅಂತಾನೆ ಮಾತು ಶುರು ಮಾಡೋ ಮಂದಿ ಹುಡುಗೀರಾದ್ರೆ ಹೆಣೇ ಅಂತ ಶುರುವಾದರೆ ಹುಡುಗರಿಗೆ ಗಡಾ ಅಂತಾರೆ. ಇದೆಲ್ಲಿಂದ ಈ ಭಾಷೆ ಶುರುವಾಯ್ತು ದೇವ್ರೆ ಅಂತ ಅನ್ನಿಸ್ತಾ ಇರತ್ತೆ. ನಾವು ಹೇಳೋದು ಒಂದಾದರೆ ಇವರಿಗೆ ಅರ್ಥ ಆಗೋದು ಇನ್ನೊಂದು. ಬೇಸಿಗೆ ಬರ್ತಾ ಇದೆ ಅಂದ್ರೆ ಇಲ್ಲಿ ಬೆಂಕಿ ಬಿದ್ದ ಸೆಕೆ ಶುರುವಾದರೆ ಮಳೆಗಾಲದಲ್ಲಿ ಅಷ್ಟೇ ಮಳೆ. ಚಳಿಯೂ ಇರುವ ವಾತಾವರಣ ಯಾರಿಗೇ ಆದ್ರೂ ಬಹಳ ಬೇಗ ಒಗ್ಗಿ ಹೋಗತ್ತೆ. ಜನಗಳೂ ಹಾಗೆ ಕೊಂಚ ಮಾತು ಅರ್ಥ ಆಗಲ್ಲ ಅನ್ನೋದು ಬಿಟ್ರೆ ಎಲ್ಲರಿಗೂ ಮಗಾ ಎಂದು ರಾಶಿ ಪ್ರೀತಿ ಕೊಡ್ತಾರೆ. ಇಷ್ಟೆಲ್ಲಾ ಕುಂದಾಪುರ ಅಂತ ಹೇಳಿ ಶಂಕರ ಮಲ್ಲಿಗೆ ಬಗ್ಗೆ ಹೇಳದೆ ಇದ್ರೆ ಹೇಗೆ ಹೇಳಿ? ಇಲ್ಲಿನ ಘಮ ಘಮ ಮಲ್ಲಿಗೆಗೆ ಎಲ್ಲೆಡೆ ಬೇಡಿಕೆ ಇದೆ. ನಿಮ್ಮೂರಲ್ಲಿ ಏನಿದೆ ಅಂದ್ರೆ ನಾನು ಜಲಪಾತ ಕೋಟೆ ಬೆಟ್ಟ ಅಂತಾ ಇದ್ದೆ. ಆದ್ರೆ ಇಲ್ಲಿನ ಜನ ಹಾಗಲ್ಲ. ಒಂದು ಬೀದಿಗೆ ಒಂದು ದೇವಸ್ಥಾನ! ಕಡಲ ತೀರ ಬಿಟ್ರೆ ನೋಡೋಕೆ ಅಂತ ಇರೋದು ಬರೀ ದೇವಸ್ಥಾನ. ಅದೆಷ್ಟಿದೆ ಅಂತ ಈ ಉರೋರಿಗೆ ಗೊತ್ತಿದೆಯೋ ಇಲ್ಲವೋ ನಂಗೆ ಅನುಮಾನ. ಫಿಶ್ ಫ್ರೈ ತುಂಬಾ ಹೆಸ್ರು ಮಾಡಿದೆ ಅಂತಾರೆ. ಕುಂದಾಪುರ ಹೋಗಿ ಮೀನ್ ತಿಂದೇ ಹಾಗೆ ಬರೋಕೆ ಆಗತ್ತಾ ಅಂತ ಹೇಳಿದ್ದು ನಾನು ತುಂಬಾ ಸಲ ಕೇಳಿದಿನಿ.

ಎಷ್ಟೋ ಕಾಲದ ಇತಿಹಾಸ ಇರೋ ವಂಡಾರು ಕಂಬಳ ನೋಡೋದೇ ಚಂದ. ಈಗೀಗ ಕಾಂತಾರ ಬಂದಮೇಲೆ ಕೆರಾಡಿ ಕಂಬಳ ಅಂತ ಜನ ಹೇಳ್ತಾ ಇದ್ರೂ ವಂಡಾರು ಕಂಬಳದ ಹೆಸರೇ ಬೇರೆ ಇದೆ. ಯಕ್ಷಗಾನಂ ವಿಶ್ವಗಾನಂ ಅನ್ನೋದು ಇಲ್ಲಂತೂ ಸತ್ಯ. ಮಂದಾರ್ತಿ ಮೇಳ, ಸಾಲಿಗ್ರಾಮ, ಪೆರ್ಡೂರು ಮೇಳದ ಆಟ ಇದೆ ಅಂದ್ರೆ ಟಿಕೆಟ್ ವಾರದ ಮುಂಚೆಯೇ ಖಾಲಿ ಅಂತಾರೆ. ನಮ್ಮ ಭಾಷೆ ನಮ್ಮ ಸಂಸ್ಕೃತಿ ಮೇಲೆ ಇವರಿಗೆ ಇರುವ ಅಭಿಮಾನ ನಿಜವಾಗಿಯೂ ನನಗೇ ಇಲ್ಲ. ಹೊಸ ಜನರ ಬಳಿ ನಾವೋ ಅವ್ರ ಭಾಷೇಲಿ ಮಾತಾಡಿ ಹತ್ತಿರ ಆಗುವ ಕಾಲದಲ್ಲಿ ಇಲ್ಲಿನ ಜನ ಹಾಗಲ್ಲ 'ಜಾಪ್ ಬಿಡ್ ಕುಂದಾಪ್ರ ಕನ್ನಡ ಮಾತಾಡ್' ಅಂತ ಭಾಷೆಯೇ ಬರದ ನಮಗೂ ಭಾಷೆ ಕಳಿಸಿ ನಮ್ಮನ್ನೂ ಅವರ ಜೊತೆ ಸೇರಿಸಿಕೊಳ್ತಾರೆ.


ಜಾತಿ ವರ್ಗ ಅನ್ನೋದಕ್ಕಿಂತ ಮಾತು ಪ್ರೀತಿ ವಿಶ್ವಾಸ ಮುಖ್ಯ ಅನ್ನೋದು ಇಲ್ಲಿನವರು ಚೆನ್ನಾಗೇ ಅರ್ಥ ಮಾಡಿಕೊಂಡು ಬದುಕ್ತಾರೆ. ಕಲೆ ಸಾಹಿತ್ಯ ಸಂಸ್ಕೃತಿ ಎಲ್ಲದರಲ್ಲೂ ಸದಭಿರುಚಿ ಇವರಿಗೆ ಚೆನ್ನಾಗೇ ಇದೆ . ಕಾರಂತರ ಊರು; ಅದು ಎಲ್ಲರಿಗೂ ಹೆಮ್ಮೆಯೇ! ಇದ್ದ ನಾಲ್ಕು ವರ್ಷಗಳಲ್ಲಿ ನಾನು ಇಲ್ಲಿಯ ಹುಡುಗಿಯೇ ಎನ್ನುವಷ್ಟು ಆಪ್ತತೆ ಈ ಊರು ನೀಡಿದೆ. ಎಲ್ ಇರೋದು ಅಂತ ಕೇಳಿದ್ರೆ ಕುಂದಾಪ್ರ ಅಂತ ಹೇಳೋಕೆ ಖುಷಿ ಜೊತೆಗೆ ಹೆಮ್ಮೆಯೂ ಇದ್ದೇ ಇದೆ. ಪೂರ್ತಿ ವಿರುದ್ಧವಾದ ಜಾಗಕ್ಕೆ ಹೊಂದಿಕೊಳ್ಳುವ ಹೊತ್ತಿಗೆ ಆಗುವ ತೊಂದರೆಗಳೇ ಕೊನೆಗೆ ಸದಾ ನೆನಪಿನಲ್ಲಿ ಉಳಿಯುವ ಸುಂದರ ಕ್ಷಣಗಳಾಗಿ ಹೋಗುತ್ತದೆ.

(ತೃತೀಯ ವರ್ಷದ ಬಿಎ ಪತ್ರಿಕೋದ್ಯಮ ವಿದ್ಯಾರ್ಥಿನಿ. ಭಂಡಾರಕರ್ಸ್ ಕಾಲೇಜು, ಕುಂದಾಪುರ)





ಚಿತ್ರಗಳು: ರಾಹುಲ್ ಅಂಚನ್



ಒಂದು ಚಿತ್ರ ತನ್ನ ಸುತ್ತ ಬಹಳಷ್ಟು ನೆನಪುಗಳನ್ನು ಕಾಪಿಟ್ಟುಕೊಂಡಿರುತ್ತದೆ. ಮನೆಯವರ ಜೊತೆ ಕೂತು ಒಂದು ಬಾರಿ ಹಳೆಯ ಆಲ್ಬಮ್‌ಗಳನ್ನು ತೆರೆದು ನೋಡಿ. ಮುಖ ಹೂವಿನಂತೆ ಅರಳುತ್ತದೆ. ಚಿತ್ರ ಮಾತನಾಡಲು ಆರಂಭಿಸುತ್ತದೆ. ಹಳೆಯ ನೆನಪಿನ ಯಾನ ಶುರುವಾಗುತ್ತದೆ!



ಚಂದನ ಭಟ್ ಕೋಣೆಮನೆ


ಛಾಯಾಗ್ರಹಣ ನನ್ನಿಷ್ಟದ ಹವ್ಯಾಸ. ಬಿಡುವಿದ್ದಾಗ ಕೈಯಲ್ಲಿ ಕ್ಯಾಮೆರಾ ಹಿಡಿದು ಹೊರಟರೆ ಬರುವಾಗ ಒಂದಿಷ್ಟು ಮುದ ಕೊಡುವ ದೃಶ್ಯಗಳು ಸೆರೆಯಾಗಿ ಜೊತೆ ಬರುತ್ತವೆ. ಬಹಳಷ್ಟು ಸಂದರ್ಭದಲ್ಲಿ ತೆಗೆದ ಚಿತ್ರಗಳನ್ನು ತಿಂಗಳುಗಟ್ಟಲೇ ನೋಡದೇ ಇರುವುದುಂಟು. ಹಸಿರು-ಪರಿಸರ ಮತ್ತು ಕ್ಯಾಂಡಿಡ್ ಫೋಟೊಗ್ರಾಫಿ ನನಗೆ ಇನ್ನಷ್ಟು ಖುಷಿ ಕೊಡುವಂತವು. ಮಲೆನಾಡಿನ ನಮಗೆ ಪರಿಸರದ ಜೊತೆ ಅವಿನಾಭಾವ ಸಂಬಂಧ. ಕಣ್ಣು ತಿರುಗಿಸಿದಷ್ಟು ಚಂದದ ಚಿತ್ರಣಗಳು ಕಾಣಸಿಗುತ್ತದೆ.

ಮೊದಲೆಲ್ಲಾ ಫೋಟೊಗಳನ್ನು ತೆಗೆಯಬೇಕೆಂದರೆ ಕ್ಯಾಮೆರಾಗೆ ರೀಲ್ ಗಳನ್ನು ಹಾಕಬೇಕಿತ್ತಂತೆ. ಸೀಮಿತ ಸಂಖ್ಯೆಯ ಫೊಟೊಗಳನ್ನು ಮಾತ್ರ ತೆಗೆಯಬಹುದಾಗಿದ್ದ ಆ ಕ್ಯಾಮೆರಾಗಳಲ್ಲಿ ರೀಲ್ ತುಂಬಿದಾಗ ಅದನ್ನು ಸ್ಟುಡಿಯೋಗೆ ಹೋಗಿ ಫೋಟೊ ತೊಳೆಸಿ ತರಬೇಕಾಗಿತ್ತಂತೆ. ಆಮೇಲೆ ಕ್ಯಾಂಪ್ಯಾಕ್ಟ್ ಕ್ಯಾಮೆರಾಗಳು, ಡಿಎಸ್‌ಎಲ್ ಆರ್‌ಗಳು ಬಂದವು. ಮೆಮೊರಿ ಕಾರ್ಡ್ ಫುಲ್ ಆಗುವಷ್ಟೂ ಫೋಟೊಗಳನ್ನು ತೆಗೆಯಬಹುದು. ಅದನ್ನೂ ನಾವೇ ನಮ್ಮ ಕಂಪ್ಯೂಟರ್‌ಗೋ, ಲ್ಯಾಪ್‌ಟಾಪ್ ಗಳಲ್ಲೋ ಸಂಗ್ರಹ ಮಾಡಿ ಇಡಬಹುದು. ಹಾಗಂತ ತಂತ್ರಜ್ಞಾನ ಅಷ್ಟಕ್ಕೇ ನಿಲ್ಲಲಿಲ್ಲ. ಮೊಬೈಲ್‌ಗಳಲ್ಲೂ ಉತ್ಕೃಷ್ಟ ಕ್ಯಾಮೆರಾಗಳು ಬರತೊಡಗಿದವು. ಈಗ ಚಂದದ ಫೋಟೊಗಳನ್ನು ತೆಗೆಯಲು ದೊಡ್ಡ ದೊಡ್ಡ ಕ್ಯಾಮೆರಾಗಳೇ ಬೇಕಾಗಿಲ್ಲ. ಏನಾದರೂ ಚಂದದ ದೃಶ್ಯ ಕಂಡಾಗ ಕಿಸೆಯಿಂದ ಮೊಬೈಲ್ ತೆಗೆದು ಕ್ಲಿಕ್ಕಿಸಿಬಿಡಬಹುದು. ಅದೇ ಕ್ಷಣದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲೂಬಹುದು. ಹಾಗಂತ ಕ್ಯಾಮೆರಾಕ್ಕಿಂತ ಮೊಬೈಲೇ ಬೆಸ್ಟು ಅಂತ ನಾನು ಹೇಳ್ತಾ ಇಲ್ಲ. ಅದಕ್ಕೆ ಅದರದ್ದೇ ಆದ ಸಾಧಕ-ಬಾಧಕಗಳಿವೆ. ಇರಲಿ ಬಿಡಿ.

ಒಂದು ಫೋಟೊದೊಂದಿಗೆ ಬಹಳಷ್ಟು ನೆನಪುಗಳು ತಳಕು ಹಾಕಿಕೊಂಡಿರುತ್ತದೆ. ಶಾಲೆ-ಕಾಲೇಜಿನ ಗ್ರುಪ್ ಫೋಟೊ, ಎಲ್ಲೋ ಪ್ರವಾಸಕ್ಕೆ ಹೋದಾಗ ತೆಗೆದ ಫೋಟೋ, ಮನೆಯ ಮದುವೆಯೋ-ಮುಂಜಿಯಲ್ಲಿಯೋ ತೆಗೆದ ಚಿತ್ರಗಳು ಎಲ್ಲದಕ್ಕೂ ಒಂದು ಕತೆಯಿದೆ. ಒಂದು ಬಾರಿ ಮನೆಯವರ ಜೊತೆ ಕೂತು ಹಳೆಯ ಆಲ್ಬಮ್ ಗಳನ್ನು ತೆರೆದು ಕೂತುಬಿಡಿ. ಸಮಯ ಕಳೆದದ್ದೇ ಗೊತ್ತಾಗುವುದಿಲ್ಲ, ಅಲ್ಲಿ ಚಿತ್ರಗಳು ಮಾತಾಡುತ್ತವೆ. ಸವಿನೆನಪುಗಳ ಹಂಚಿಕೆಯಾಗುತ್ತದೆ. "ಆ ದಿನ ಏನಾಗಿತ್ತು ಗೊತ್ತಾ?" ಎಂದು ಮಹಾಪುರಾಣ ಆರಂಭವಾಗುತ್ತದೆ. ಖುಷಿ ಹಂಚಿಕೆಯ ಮಾರುಕಟ್ಟೆ ಓಪನ್ ಆಗುತ್ತದೆ. ಮನೆ ಕಾಲದಲ್ಲಿ ಹಿಂದಕ್ಕೆ ಚಲಿಸುತ್ತದೆ.

ಕಾಲ ಅದೆಷ್ಟು ವೇಗವಾಗಿ ಚಲಿಸುತ್ತಿದೆ. ಕಾಲವನ್ನು ನಿಲ್ಲಿಸಿಕ್ಕಂತೂ ನಮ್ಮಿಂದ ಸಾಧ್ಯವಿಲ್ಲ, ಆದರೆ ಇಂದಿನ ಜೀವನವನ್ನು ಚಿತ್ರಗಳ ಮೂಲಕ ಜೀವಂತವಾಗಿಸಬಹುದು. ಓಹ್! ಆವಾಗ ಜನಜೀವನ ಹೀಗಿತ್ತಾ ಎಂದು ಮುಂದೆ ಬರುವ ಜನರು ಉದ್ಗರಿಸಬಹುದು. ಇಂದು ಒಂದು ಚಿತ್ರದ ಬೆಲೆ ಗೊತ್ತಾಗದೇ ಇರಬಹುದು. ಮುಂದೊಂದು ದಿನ ನಮ್ಮದೊಂದು ಚಿತ್ರ

16 ನೇ ಪುಟಕ್ಕೆ ಮುಂದುವರೆಯುತ್ತದೆ..



ಸಾಲ ಕೊಡುವ ಸಂಸ್ಥೆಗಳ ಕಥೆ-ವ್ಯಥೆ

ವ್ಯವಸ್ಥೆಯಲ್ಲಿ ಎಲ್ಲವೂ ಸರಿ ಅನ್ನಿಸುವಾಗ ಎಡವಟ್ಟುಗಳು ಘಟಿಸಿಬಿಡುತ್ತದೆ. ಸಾಮಾನ್ಯ ಜನರ ನಂಬಿಕೆಗಳಿಗೆ ಘಾಸಿ ಉಂಟುಮಾಡುವಂತಹ ಹಗರಣಗಳು ಬೆಳಕಿಗೆ ಬಂದುಬಿಡುತ್ತದೆ. ಈ ವ್ಯವಸ್ಥೆಯಲ್ಲಿ ಕೂಡ ಹಾಗೆ ಆಗಿದ್ದು ವಿಪರ್ಯಾಸ. ಎನ್ ಬಿ ಎಫ್ ಸಿಗಳು ದೇಶದ ಆರ್ಥಿಕತೆಗೆ ಸವಾಲಾಗುತ್ತಿವೆಯ? ಹೀಗೊಂದು ದಟ್ಟವಾದ ಪ್ರಶ್ನೆ ಈಗ ಏಳುತ್ತಿದೆ.

ಕೆಲವೊಂದು ಘಟನೆಗಳು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಘಟಿಸಬಾರದು ಎಂಬುದು ಎಲ್ಲರ ಆಶಯವಾಗಿರುತ್ತದೆ; ಆದರೆ ಯಾವುದು ಆಗಬಾರದಿತ್ತೋ ಅದು ವಾಸ್ತವವಾಗಿಯೇಬಿಡುತ್ತದೆ. ಕೋಟ್ಯಂತರ ಜನರ ಬದುಕು ರಾತ್ರಿ ಬೆಳಗಾಗುವುದರಲ್ಲಿ ಬೀದಿಗೆ ಬಂದುಬಿಡುತ್ತದೆ. ಬಹುಶಃ ನಿಮಗೆಲ್ಲ ಸೆಪ್ಟೆಂಬರ್ 2008ರಲ್ಲಿ ಅಮೇರಿಕದಲ್ಲಿ ನಡೆದ ಲೇಮನ್ ಬ್ರದರ್ಸ್ ಕಂಪನಿಯ ಹಗರಣದ ಬಗ್ಗೆ ತಿಳಿದಿರುತ್ತದೆ. ಈ ಒಂದು ಹಗರಣ ಇಡೀ ವಿಶ್ವದ ಆರ್ಥಿಕತೆಯ ಮೇಲೆ ಬೀರಿದ ಪರಿಣಾಮ ಭೀಕರವಾದದ್ದು. ಆಗ ಒಮ್ಮೆಲೆ ಜಾಗತಿಕ ಆರ್ಥಿಕರಂಗ ಈ ಹಗರಣದಿಂದ ಬೆಚ್ಚಿಬಿದ್ದಿತ್ತು. ಈಗ ಕೋವಿಡ್‌ನಿಂದ ಜಗತ್ತು ಚೇತರಿಸಿಕೊಂಡು ಎಲ್ಲದೂ ಸರಿಯಾದ ಹಾದಿಗೆ ಬರುತ್ತಿದೆ ಎಂದು ಸಮಾಧಾನದಿಂದಿರುವಾಗ ಮೂರು ತಿಂಗಳಿಂದೀಚೆಗೆ ಮತ್ತೆ 'ಆರ್ಥಿಕ ಹಿಂಜರಿತ'ದ ಬಗ್ಗೆ ಗುಸು ಗುಸು ಶುರುವಾಯಿತು; 'ಭಾರತದಲ್ಲಿ ಸಮಸ್ಯೆಯಾಗುವುದಿಲ್ಲ' ಎಂದು ನಮ್ಮಷ್ಟಕ್ಕೆ ನಾವೇ ಸಮಾಧಾನ ಪಡುತ್ತಿರುವಾಗ ಒಂದೊಂದೇ ಕಂಪನಿಗಳು ಉದ್ಯೋಗಿಗಳನ್ನು ವಜಾಗೊಳಿಸುತ್ತಿರುವ ಸುದ್ದಿ ಬಿತ್ತರವಾಗತೊಡಗಿತು.

ಏನಿದು ಬ್ಯಾಂಕಿಗೇತರ ಸಂಸ್ಥೆಗಳು

ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ) ಗಳೆಂದರೆ ಬ್ಯಾಂಕ್ ಲೈಸೆನ್ಸ್ ಇಲ್ಲದೆ ಬ್ಯಾಂಕ್ ನೀಡುವ ಸಾಲಗಳ ಸೇವೆ ನೀಡುವ ಸಂಸ್ಥೆಗಳು. ಒಬ್ಬ ವ್ಯಕ್ತಿಯು ಕಾರನ್ನು ಖರೀದಿಸಲು ಸಾಲಕ್ಕಾಗಿ ಬ್ಯಾಂಕ್‌ಗೆ ಅರ್ಜಿ ನೀಡಿರುತ್ತಾನೆ ಆದರೆ ಬ್ಯಾಂಕ್ ಆತನ ಅರ್ಜಿಯನ್ನು ಪರಿಶೀಲಿಸಿ ಆ ವ್ಯಕ್ತಿಯ ಮರುಪಾವತಿಸುವ ಸಾಮರ್ಥ್ಯವನ್ನೂ ಪರೀಕ್ಷಿಸಿ ಹಣ ಮಂಜೂರು ಮಾಡಲು ಕನಿಷ್ಟವೆಂದರೂ 20 ದಿನ ಬೇಕಾಗುತ್ತದೆ. ಅದೂ ಅಲ್ಲದೆ ಬ್ಯಾಂಕಿಂಗ್ ನಿಯಮಗಳ ಅಡಿಯಲ್ಲಿ ಅರ್ಜಿ ಪುರಸ್ಕಾರಗೊಳ್ಳದೆ ಸಾಲ ಮಂಜೂರು ಕೂಡ ಆಗದಿರಬಹುದು. ಆದರೆ ಇದೇ ವ್ಯಕ್ತಿಗೆ ಕೇವಲ ಎರಡು ದಿನದಲ್ಲಿ ಕಾರ್ ಲೋನನ್ನು ಸಂಸ್ಥೆಯೊಂದು ಮಂಜೂರು ಮಾಡುತ್ತದೆ. ಹೀಗೆ ಬ್ಯಾಂಕಿನ ನೆರಳಿನಂತೆ ಕೆಲಸ ಮಾಡುವ ಸಂಸ್ಥೆಗಳೇ ಬ್ಯಾಂಕಿಂಗೇತರ ಸಂಸ್ಥೆಗಳು (ಎನ್‌ಬಿಎಫ್‌ಸಿ). ಹಾಗಾಗಿಯೇ ಶ್ಯಾಡೋ ಬ್ಯಾಂಕಿಂಗ್ ಕಂಪನಿಗಳು ಎಂದು ಕೂಡ ಈ ಸಂಸ್ಥೆಗಳನ್ನು ಕರೆಯುತ್ತಾರೆ.

2023 ಶುರುವಾಗಿ ಇನ್ನೂ ಒಂದು ತಿಂಗಳು ಆದದ್ದಷ್ಟೇ, ಆದಾಗಲೇ 20,000 ಕ್ಕೂ ಅಧಿಕ ಜನ ಉದ್ಯೋಗ ಕಳೆದುಕೊಂಡಿದ್ದಾರೆ. ಪ್ರತಿದಿನವೂ ಒಂದೊಂದು ಸಂಸ್ಥೆ ಉದ್ಯೋಗಿಗಳನ್ನು ವಜಾಗೊಳಿಸುವುದರ ಬಗ್ಗೆ ಸುದ್ದಿಯನ್ನು ಪ್ರಕಟಿಸುತ್ತಲೇ ಇವೆ. ಚಿಗುರುತ್ತಿದ್ದ ಆರ್ಥಿಕತೆಯ ಮೇಲೆ ಇವುಗಳು ದೊಡ್ಡ ಪ್ರಮಾಣದಲ್ಲಿ ಪರಿಣಾಮ ಬೀರುವುದಂತೂ ಸತ್ಯವಾಗಿದ್ದು ಒಳ್ಳೆಯದಾಗಬಹುದೆಂದು ನಿರೀಕ್ಷಿಸಬಹುದಷ್ಟೇ. ಇವೆಲ್ಲ ಸಮಸ್ಯೆಗಳ ನಡುವೆ ನಮ್ಮ ದೇಶದಲ್ಲಿ ಆಗಾಗ ಸದ್ದು ಮಾಡುವುದು 'ಹಗರಣಗಳು'. ದುರ್ದೈವವೆಂದರೆ ಪ್ರತೀ ಬಾರಿಯೂ ಸಮಾಜದಲ್ಲಿ 'ದೊಡ್ಡವರು' ಅನ್ನಿಸಿಕೊಂಡವರು ಮಾಡುವ ಹಗರಣಗಳ ಬಲಿಪಶುವಾಗುವುದು ಕಷ್ಟಪಟ್ಟು ದುಡಿದು ಜೀವನ ಸಾಗಿಸುವ 'ಸಾಮಾನ್ಯ ಜನರೇ' ಆಗಿದ್ದಾರೆ.

ಈಗ ನಮ್ಮ ದೇಶದ ಬ್ಯಾಂಕಿಂಗೇತರ ಸಂಸ್ಥೆಗಳು (ಎನ್‌ಬಿಎಫ್‌ಸಿ) ಮತ್ತವುಗಳ ಸ್ಥಿತಿಗತಿಗಳ ಬಗ್ಗೆ ನೋಡೋಣ. ಅಧಿಕೃತವಾಗಿ ಆರ್‌ಬಿಐ 1964ರಲ್ಲಿ ಎನ್‌ಬಿಎಫ್‌ಸಿ ಗಳಿಗೆ ಪರವಾನಿಗೆ ನೀಡಿತು. ಆದರೆ ಅದಕ್ಕೂ ಮುಂಚೆ 1940ರಿಂದಲೇ ಈ ತೆರನಾದ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದವು. ನಮ್ಮ ದೇಶದ ಜಿಡಿಪಿಗೆ ಶೇ 13ರಷ್ಟು ಕೊಡುಗೆ ನೀಡುವ ಈ ವಿಭಾಗದ ಸಂಸ್ಥೆಗಳು ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆಗಳ ಚೌಕಟ್ಟನ್ನು ಮೀರಿ ಕಾರ್ಯನಿರ್ವಹಿಸುತ್ತವೆ. ಇವುಗಳು ಪ್ರಮುಖವಾಗಿ ಬ್ಯಾಂಕುಗಳಿಗೆ ಪೈಪೋಟಿ ನೀಡುವ ಸಂಸ್ಥೆಗಳಾಗಿ ಬದಲಾಗಿದ್ದು ಈಗ ಇತಿಹಾಸ. ಬ್ಯಾಂಕುಗಳು ತಲುಪದ ಜಾಗಗಳನ್ನು ಮತ್ತು ವಿಭಾಗಗಳನ್ನು ಈ ಸಂಸ್ಥೆಗಳು ತಲುಪಿದ್ದು ದೊಡ್ಡ ಗ್ರಾಹಕ ವಲಯವನ್ನು ಸೃಷ್ಟಿಸಿಕೊಳ್ಳಲು ಪ್ರಮುಖ ಕಾರಣವಾಗಿದೆ. ವಾಹನ ಸಾಲ, ಚಿನ್ನದ ಸಾಲ, ಕೃಷಿ ಸಾಲ ಮತ್ತು ಅನೇಕಾನೇಕ ವಿಧವಿಧದ ಸಾಲಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಸಾಮಾನ್ಯ ಜನರಿಗೆ ತಲುಪಿಸಿದ್ದು ಇದೇ ಎನ್‌ಬಿಎಫ್‌ಸಿಗಳು. ನಮ್ಮ ದೇಶದಲ್ಲಿ ಬ್ಯಾಂಕಿಂಗ್ ಸಂಸ್ಥೆಗಳು ತಲುಪಲಾಗದ ಅಥವಾ ಒಂದು ಆರ್ಥಿಕ ವ್ಯವಸ್ಥೆಯಲ್ಲಿನ ಅಂತರವನ್ನು ಕಡಿಮೆ ಮಾಡಿದ್ದು ಇದೇ ಬ್ಯಾಂಕಿಂಗೇತರ ಸಂಸ್ಥೆಗಳು.





ಅರ್ಥಲೋಕ
ಪ್ರಸನ್ನ ಕಂಬದಮನೆ

ವ್ಯವಸ್ಥೆಯಲ್ಲಿ ಎಲ್ಲವೂ ಸರಿ ಅನ್ನಿಸುವಾಗ ಎಡವಟ್ಟುಗಳು ಘಟಿಸಿಬಿಡುತ್ತದೆ. ಸಾಮಾನ್ಯ ಜನರ ನಂಬಿಕೆಗಳಿಗೆ ಘಾಸಿ ಉಂಟುಮಾಡುವಂತಹ ಹಗರಣಗಳು ಬೆಳಕಿಗೆ ಬಂದುಬಿಡುತ್ತದೆ. ಈ ವ್ಯವಸ್ಥೆಯಲ್ಲಿ ಕೂಡ ಹಾಗೆ ಆಗಿದ್ದು ವಿಪರ್ಯಾಸ. ಎನ್‌ಬಿಎಫ್‌ಸಿಗಳು ದೇಶದ ಆರ್ಥಿಕತೆಗೆ ಸವಾಲಾಗುತ್ತಿವೆಯ? ಹೀಗೊಂದು ದಟ್ಟವಾದ ಪ್ರಶ್ನೆ ಈಗ ಏಳುತ್ತಿದೆ. 2018ರ ಅಕ್ಟೋಬರ್ ವರೆಗೆ ಎನ್‌ಬಿಎಫ್‌ಸಿ ನಮಗೊಂದು ಸಮಸ್ಯೆಯಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಆದರೆ ಯಾವಾಗ ಐಎಲ್ & ಎಫ್ಎಸ್ ಹಗರಣ ಬೆಳಕಿಗೆ ಬಂತೋ ಆಗಿನಿಂದ ಈ ಬ್ಯಾಂಕಿಂಗೇತರ ಸಂಸ್ಥೆಗಳ ಹುಳುಕುಗಳು ಒಂದಾದ ಮೇಲೊಂದು ಹೊರಗೆ ಬೀಳುತ್ತಲೇ ಇದೆ. ರಾಷ್ಟ್ರೀಯ ಬ್ಯಾಂಕ್‌ಗಳು ಸಾಲ ಕೊಡುವುದೊಂದೇ ಅಲ್ಲದೆ ಗ್ರಾಹಕರಿಂದ ಠೇವಣಿ ಗಳನ್ನು ಸಂಗ್ರಹಿಸುತ್ತವೆ ಜೊತೆಗೆ ಹಣ ಪಾವತಿ, ವರ್ಗಾವಣೆಯಂತಹ ಇತರ ಸೌಲಭ್ಯಗಳನ್ನೂ ನೀಡುತ್ತವೆ ಅಂದರೆ ಬ್ಯಾಂಕುಗಳು ಸುರಕ್ಷಿತ ಎಂದರ್ಥ . ಆದರೆ ಠೇವಣಿ ಸಂಗ್ರಹಿಸುವ ಎನ್‌ಬಿಎಫ್‌ಸಿಗಳ ಸಂಖ್ಯೆ ತೀರಾ ಕಡಿಮೆಯಿದ್ದು ಸಾಲ ಕೊಡುವ ಸಂಸ್ಥೆಗಳೇ ಜಾಸ್ತಿ ಇವೆ. ಇವುಗಳ ಆದಾಯದ ಮೂಲವೇ ಮುಕ್ತ ಮಾರುಕಟ್ಟೆಗಳು, ಮ್ಯೂಚುವಲ್ ಫಂಡ್ ಹೂಡಿಕೆದಾರರುಗಳಾಗಿವೆ. ಅನೇಕ ವಿಧದ ಎನ್‌ಬಿಎಫ್‌ಸಿಗಳು ನಮ್ಮ ನಡುವೆ ಕೆಲಸ ಮಾಡುತ್ತಿವೆ. ಕೆಲವೊಂದು ಸಂಸ್ಥೆಗಳು ಬಂಗಾರವನ್ನು ಅಡವಿಟ್ಟುಕೊಂಡು ಸಾಲ ನೀಡಿದರೆ ಇನ್ನೂ ಕೆಲವು ಸಂಸ್ಥೆಗಳು ಕೇವಲ ವಾಹನಗಳ ಖರೀದಿಗೆ ಮಾತ್ರ ಸಾಲ ನೀಡುತ್ತವೆ. ಇನ್ನೊಂದಿಷ್ಟು ಸಂಸ್ಥೆಗಳು ಗೃಹಸಾಲ ಹಾಗೂ ವೈಯಕ್ತಿಕ ಸಾಲವನ್ನು ನೀಡುತ್ತವೆ. ಒಟ್ಟಿನಲ್ಲಿ ಸಾಲ ಕೊಡಲು ತಾ ಮುಂದು ತಾ ಮುಂದು ಎಂದು ಈ ಎನ್‌ಬಿಎಫ್‌ಸಿಗಳು ಬಂದು ನಿಲ್ಲುತ್ತವೆ.

ನಮ್ಮ ದೇಶದಲ್ಲಿ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ (ಎನ್‌ಬಿಎಫ್‌ಸಿ) ಮೇಲೆ ಆರ್‌ಬಿಐ ಹೆಚ್ಚಿನ ನಿಯಂತ್ರಣವನ್ನು ಹೊಂದಿರಲಿಲ್ಲ. ಈ ಒಂದು ಕಾರಣದಿಂದಲೇ ಈ ಸಂಸ್ಥೆಗಳು ಬೇಕಾಬಿಟ್ಟಿ ವ್ಯವಹಾರ ಮಾಡಲು ಪ್ರಾರಂಭಿಸಿದವು; ಜೊತೆ ಜೊತೆಗೆ ವಿಪರೀತವಾಗಿ ಬೆಳೆದವು ಕೂಡ. ನಮ್ಮ ದೇಶದಲ್ಲಿ ಸುಮಾರು 11,400 ಎನ್‌ಬಿಎಫ್‌ಸಿ ಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳು ನೀಡಿದ ಸಾಲದ ಮೊತ್ತ ರಾಷ್ಟ್ರೀಯ ಬ್ಯಾಂಕುಗಳು ನೀಡಿದ ಸಾಲವನ್ನೂ ಮೀರಿಸುವಷ್ಟಿದೆ ಅಂದರೆ ಈ ಸಂಸ್ಥೆಗಳ ವ್ಯಾಪ್ತಿಯನ್ನು ನೀವೇ ಅಂದಾಜಿಸಿಕೊಳ್ಳಿ.

ಕಳೆದ ಅಕ್ಟೋಬರ್ 2018 ರಲ್ಲಿ ನಮ್ಮ ದೇಶದ ಅತ್ಯಂತ ಹಳೆಯ ಎನ್‌ಬಿಎಫ್‌ಸಿಗಳಲ್ಲೊಂದಾದ ಐಎಲ್ & ಎಫ್ಎಸ್ ಸಂಸ್ಥೆಯ ಹಗರಣ ಬೆಳಕಿಗೆ ಬಂತು. ಅದಾದ ಮೇಲೆ ಡಿಎಚ್‌ಎಫ್‌ಎಲ್, ಅಲ್ಟಿಕೊ ಕ್ಯಾಪಿಟಲ್ ಲಿಮಿಟೆಡ್ ಹೀಗೆ ಒಂದರ ಮೇಲೆ ಒಂದು ಎನ್‌ಬಿಎಫ್‌ಸಿಯ ಹಗರಣ ಬೆಳಕಿಗೆ ಬರುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಂತೂ ಅಲ್ಲ. ಮುಕ್ತ ಮಾರುಕಟ್ಟೆಯಿಂದ ಮನಸೋ ಇಚ್ಛೆ ಸಾಲವನ್ನು ಎತ್ತುವಳಿ ಮಾಡಿ, ಶಂಕಾಸ್ಪದವಾದ ಅನೇಕ ಯೋಜನೆಗಳಲ್ಲಿ ಹೂಡಿಕೆ ಮಾಡುವ ಕೆಲಸವನ್ನು ಈ ಎನ್‌ಬಿಎಫ್‌ಸಿಗಳು ಮಾಡಿದವು. ದುರ್ದೈವವೆಂದರೆ ಭಾರತದ ಕಾರ್ಪೋರೇಟ್ ಜಗತ್ತಿನ ಅನೇಕ ಗಣ್ಯರು ಇಂಥ ಸಂಸ್ಥೆಗಳ ನಿರ್ದೇಶಕ ಮಂಡಳಿಗಳಲ್ಲಿದ್ದರು ಮತ್ತೆ ಇದ್ದಾರೆ. ಇವರುಗಳೆಲ್ಲ ಇದ್ದು ಕೂಡ ಸಾಲ ಮರುಪಾವತಿ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಯಿತು. ಇಂತಹ ಬೆಳವಣಿಗೆಗಳನ್ನು ನೋಡುತ್ತಾ ಮೂಕಪ್ರೇಕ್ಷಕರಾಗಿ ಉಳಿದು ಕಂಪನಿಗಳಿಗೆ, ಹೂಡಿಕೆದಾರರಿಗೆ ಮತ್ತು ಸಾಲ ನೀಡಿದವರಿಗೆ ದ್ರೋಹ ಬಗೆಯುವ ಕೆಲಸವನ್ನು ಈ ನಿರ್ದೇಶಕರುಗಳು ಮಾಡಿದರು. ಈ ಕಂಪನಿಗಳು ಮಾಡಿರುವ ಹೂಡಿಕೆಯ ಗುಣಮಟ್ಟವನ್ನು ಪರಿಶೀಲಿಸುವಲ್ಲಿ ಆಂತರಿಕ ಮೌಲ್ಯಮಾಪನಾ ಸಮಿತಿಗಳು ವಿಫಲವಾದವು. ಆಂತರಿಕ ಲೆಕ್ಕಪರಿಶೋಧಕರು ಇಂತಹ ಅವ್ಯವಹಾರಗಳ ಕುರಿತು ಎಚ್ಚರಿಕೆ ನೀಡದೆ ಮೌನವಾಗುಳಿದರು. ಇದೆಲ್ಲದರ ಒಟ್ಟು ಪರಿಣಾಮದಿಂದ ಅತ್ಯಂತ ಸಾಮಾನ್ಯ ಮಟ್ಟದ ಪರಿಶೀಲನೆಯೂ ಇಲ್ಲವಾಯಿತು. ಮೂಲಸೌಕರ್ಯ ಮತ್ತು ರಿಯಲ್ ಎಸ್ಟೇಟ್ ಕಂಪನಿಗಳು ಬ್ಯಾಂಕ್‌ಗಿಂತ ಹೆಚ್ಚಿನದಾಗಿ ಮೆಚ್ಚಿಕೊಂಡಿದ್ದು ಇದೇ ಎನ್‌ಬಿಎಫ್‌ಸಿಗಳನ್ನು. ಎನ್‌ಬಿಎಫ್‌ಸಿಯ 45 ರಿಂದ 50 ಪ್ರತಿಶತ ಆದಾಯ ಬರುತ್ತಿದ್ದುದು ಮ್ಯೂಚುವಲ್ ಫಂಡ್‌ಗಳಿಂದ ಆದರೆ ಯಾವಾಗ ಐಎಲ್ & ಎಫ್ಎಸ್ ಹಗರಣ ಬೆಳಕಿಗೆ ಬಂತೋ ಆಗ ಅನೇಕ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಕಂಪನಿಗಳು ಹೂಡಿಕೆ ಮಾಡಲು ಹಿಂಜರಿದರು; ಇದರ ಪರಿಣಾಮ ದೇಶದ ಜಿಡಿಪಿಯ ಮೇಲೂ ಬಿತ್ತು.

ಎನ್‌ಬಿಎಫ್‌ಸಿಗಳನ್ನು ಫಂಡ್ ಮಾಡುತ್ತಿದ್ದ ಅನೇಕ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಕಂಪನಿಗಳು ಈಗ ಹೂಡಿಕೆ ಮಾಡಲು ಹಿಂದೇಟು ಹಾಕುತ್ತಿವೆ. ರಿಯಲ್ ಎಸ್ಟೇಟ್ ವಿಭಾಗದಲ್ಲಿ ಅನೇಕ ಬಿಲ್ಡರ್‌ಗಳು ಹಣ ತರುತ್ತಿದ್ದುದು ಇದೇ ಎನ್‌ಬಿಎಫ್‌ಸಿಗಳಿಂದ. ಆದರೆ ಯಾವಾಗ ಹಣದ ಹೂಡಿಕೆಯೇ ಇಲ್ಲದಾಯಿತೋ ಎನ್‌ಬಿಎಫ್‌ಸಿಗಳ ಬಳಿ ಬಿಲ್ಡರ್‌ಗಳಿಗೆ ನೀಡಲು ಹಣ ಇಲ್ಲದಾಯಿತು; ರಿಯಲ್ ಎಸ್ಟೇಟ್ ಸೆಕ್ಟರ್‌ನಲ್ಲಿನ ಅನೇಕ ಬಿಲ್ಡರ್‌ಗಳು ದೊಡ್ಡ ದೊಡ್ಡ ಯೋಜನೆಗಳನ್ನು ಅರ್ಧಕ್ಕೆ ನಿಲ್ಲಿಸಬೇಕಾಗಿ ಬಂತು. ಇವೆಲ್ಲವೂ ಒಟ್ಟಿಗೆ ಸೇರಿ ನಮ್ಮ ಆರ್ಥಿಕತೆಯ ಮೇಲೆ ಪರಿಣಾಮ ಬೀರಿತು.

ಆರ್‌ಬಿಐ ಅಂದಾಜು 4 ಸಾವಿರ ಎನ್‌ಬಿಎಫ್‌ಸಿಗಳ ನೋಂದಣಿ ರದ್ದುಪಡಿಸಿ, ಅವುಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ. ಆದರೂ ಆಗಬೇಕಾದ ಬದಲಾವಣೆ ಅಥವಾ ನಿರ್ಧಾರಗಳು ಹಲವಿದೆ. ಈಗ ಆರ್‌ಬಿಐ ಎನ್‌ಬಿಎಫ್‌ಸಿಗಳ ಮೇಲೆ ಅಂಕುಶ ಹಾಕಲು ಶುರು ಮಾಡಿದೆ. ಕಳೆದ ಜನವರಿ 2022 ರಲ್ಲಿ ಬ್ಯಾಂಕಿಂಗೇತರ ಸಂಸ್ಥೆಗಳಿಗಾಗಿಯೇ 'ಮಾಸ್ಟರ್ ಸರ್ಕ್ಯುಲರ್' ಒಂದನ್ನು ಹೊರಡಿಸಿದ್ದು ಇದರಲ್ಲಿ ಅನೇಕ ನಿಯಮಗಳನ್ನು ಅಳವಡಿಸಿಕೊಳ್ಳಲು ಈ ಸಂಸ್ಥೆಗಳಿಗೆ ಸೂಚಿಸಿದ್ದು ಇವುಗಳಲ್ಲಿ ಪ್ರಮುಖವಾಗಿ ಲಿಕ್ವಿಡಿಟೀ ಕವರೇಜ್ ರೇಶಿಯೋ (LCR) ವನ್ನು ಕಾಪಾಡಿಟ್ಟುಕೊಳ್ಳಲು ಸೂಚಿಸಿದೆ. ಇದರಿಂದ ಆಗುವ ಪ್ರಯೋಜನವೆಂದರೆ ಅಲ್ಪಾವಧಿ ಹಣಕಾಸು ಬಾಧ್ಯತೆಗಳನ್ನು ಈ ಬ್ಯಾಂಕಿಂಗೇತರ ಸಂಸ್ಥೆಗಳು ಯಶಸ್ವಿಯಾಗಿ ನಿಬಾಯಿಸಬಹುದಾಗಿದೆ ಮತ್ತು ಗ್ರಾಹಕರ ಹಿತವನ್ನು ಕಾಪಾಡಬಹುದಾಗಿದೆ. ಇದಲ್ಲದೇ ಸ್ಕೇಲ್ ಬೇಸ್ಡ್ ರೆಗ್ಯುಲೇಶನ್ (SBR) ಅನ್ನು ಘೋಷಿಸಿದ್ದು ಇದರ ಪ್ರಕಾರ ಎನ್‌ಬಿಎಫ್‌ಸಿಗಳ ವರ್ಗೀಕರಣ ನಡೆಯಲಿದ್ದು ಸಾಲಗಳ ಮರುಪಾವತಿ 90 ದಿನಗಳಲ್ಲಿ ಆಗದಿದ್ದರೆ NPA ಎಂದು ಘೋಷಿಸಬೇಕೆಂದು ಕೂಡ ಹೇಳಲಾಗಿದೆ; ಮುಂಚೆ 180 ದಿನಗಳ ವ್ಯಾಪ್ತಿಯಿತ್ತು. ಸಂಕಷ್ಟದ ಸುಳಿಗೆ ಸಿಲುಕಿರುವ ಎನ್‌ಬಿಎಫ್‌ಸಿಗಳನ್ನು ಪಾರು ಪಾರುಮಾಡಲು ಕೇಂದ್ರ ವಿತ್ತ ಸಚಿವಾಲಯ ಅನೇಕ ಕಾರ್ಯಸೂಚಿಗಳನ್ನು ಪ್ರಕಟಿಸಿದೆ. ಹಂತಹಂತವಾಗಿ ಅಂಕುಶವನ್ನು ಸಿದ್ದಪಡಿಸಿರುವ ಆರ್‌ಬಿಐ ಎನ್‌ಬಿಎಫ್‌ಸಿಯಲ್ಲಿನ ಹುಳುಕುಗಳನ್ನು ಸರಿ ಮಾಡಲು ಪ್ರಯತ್ನಿಸುತ್ತಿರುವುದಂತೂ ಸತ್ಯ. ಇದರಿಂದ ಮುಂದೆ ಇನ್ನೂ ಒಂದಿಷ್ಟು ಹಗರಣಗಳು ಬೆಳಕಿಗೆ ಬಂದರೂ ಅಚ್ಚರಿಯಿಲ್ಲ. ಇದಕ್ಕೆ ಪೂರಕವಾಗಿ ವಿತ್ತ ಸಚಿವಾಲಯ ಮಾರುಕಟ್ಟೆ ಪ್ರತಿನಿಗಳೊಂದಿಗೆ ಚರ್ಚಿಸಿ, ಮಾರುಕಟ್ಟೆಯಲ್ಲಿ ವಿಶ್ವಾಸ ಮರುಸ್ಥಾಪನೆಗೆ ಪ್ರಯತ್ನಿಸಬೇಕು.

ಹಳ್ಳಿಯಲ್ಲಿನ ಸಣ್ಣ ಸಹಕಾರಿ ಸಂಸ್ಥೆಗಳಿಂದ ಹಿಡಿದು ಸಾವಿರಾರು ಕೋಟಿ ವ್ಯವಹಾರ ಮಾಡುವ ದೊಡ್ಡ ಆರ್ಥಿಕ ಸಂಸ್ಥೆಗಳವರೆಗೆ ಎಲ್ಲೆಡೆ ಆರ್ಥಿಕ ಅಶಿಸ್ತು ಸ್ಪಷ್ಟವಾಗಿ ಈಗ ಗೋಚರಿಸುತ್ತಿದೆ. ಇವುಗಳಿಗೆ ಪರಿಹಾರ, ತನಿಖೆ ಮತ್ತು ಕಟ್ಟುನಿಟ್ಟಾದ ನಿಯಮಗಳೇ ಆಗಿವೆ. ವ್ಯವಸ್ಥೆಯ ಮೇಲಿನ ನಂಬಿಕೆಗೆ ಪದೇ ಪದೇ ಉಂಟಾಗುತ್ತಿರುವ ಘಾಸಿಯಿಂದ ಈ ದೇಶದ ಸಾಮಾನ್ಯ ಜನರು ಭಾವನಾತ್ಮಕವಾಗಿ ಬಳಲಿರುವುದಂತೂ ಸತ್ಯ. ದೇಶದ ಬ್ಯಾಂಕಿಂಗ್ ಸೆಕ್ಟರ್‌ನಲ್ಲಾದ ಹಗರಣಗಳು ಅನೇಕ. ಮತ್ತು ಆ ಸೆಕ್ಟರ್‌ಗಳನ್ನು ಸರಿಮಾಡಲು ಸರ್ಕಾರ ಶ್ರಮಿಸುತ್ತಿರುವುದಂತೂ ಸತ್ಯ. ಅದೇ ರೀತಿ ಬ್ಯಾಂಕಿಂಗೇತರ ಸಂಸ್ಥೆಗಳು ಕೂಡ ಆದಷ್ಟು ಬೇಗ ಶುದ್ಧವಾಗಲಿ.

ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ಪ್ರಸನ್ನ ಕಂಬದಮನೆ ಉತ್ತರಕನ್ನಡದ ಶಿರಸಿಯವರು. ಆರ್ಥಿಕ, ವಾಣಿಜ್ಯ ಇತ್ಯಾದಿ ವಿಷಯಗಳ ಕುರಿತು ಇವರು ಬರೆದ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಎನ್‌ಬಿಎಫ್‌ಸಿಗಳು ಸ್ತಬ್ಧವಾಗಲು ಕಾರಣವೇನು?

ಶೇಕಡಾ 40% ಕನ್ಸ್ಯೂಮರ್ ಫೈನಾನ್ಸಿಂಗ್ ಮಾಡುತ್ತಿದ್ದ ಇದೇ ಎನ್‌ಬಿಎಫ್‌ಸಿಗಳು ಇವತ್ತು ಭಾಗಶಃ ಸ್ತಬ್ದವಾಗಿವೆ. ಹಾಗಾದರೆ ಯಾಕೆ ಈ ಸ್ಥಿತಿ ಬಂತು? ಐಎಲ್ & ಎಫ್ಎಸ್, ಡಿಎಚ್‌ಎಫ್‌ಎಲ್ ನಂತಹ ಸಂಸ್ಥೆಗಳಲ್ಲಿ ಆಯಕಟ್ಟಿನ ಜಾಗದಲ್ಲಿದ್ದ ಅನೇಕ ವ್ಯಕ್ತಿಗಳು ವ್ಯವಹಾರವನ್ನು ಮುಚ್ಚಿಡಲು ಪ್ರಯತ್ನಿಸಿದರು. ಕಂಪನಿಯು ಭಾರಿ ನಷ್ಟದ ಹಾದಿಯಲ್ಲಿ ಸಾಗಿದ್ದರೂ ಪೂರ್ಣಕಾಲಿಕ ನಿರ್ದೇಶಕರು ಮಾತ್ರ ಸಿಬ್ಬಂದಿಗೆ ದೊಡ್ಡಮೊತ್ತದ ವೇತನದ ಚೆಕ್ ಗಳನ್ನು ಬರೆಯಲು ಸೀಮಿತಗೊಂಡಿದ್ದರು. ಸಂಸ್ಥೆಗಳ ಮೌಲ್ಯಮಾಪನ ವಿಷಯದಲ್ಲಿ ಅನೇಕ ಮೌಲ್ಯಮಾಪನ ಸಂಸ್ಥೆಗಳು ಅಪ್ರಾಮಾಣಿಕವಾಗಿ ವರ್ತಿಸಿದವು. ಇದೆಲ್ಲದರ ಪರಿಣಾಮದಿಂದ ಒದಗಬಹುದಾದ ಆಪತ್ತಿನ ಅರಿವಿದ್ದೂ, ಅದನ್ನು ತಡೆಗಟ್ಟಲು ತಕ್ಷಣವೇ ಕ್ರಮ ಕೈಗೊಳ್ಳಲು ಕಂಪನಿಗಳು ವಿಫಲವಾದವು. ಅಂದು ಆರ್‌ಬಿಐನ ಕಠಿಣ ನಿಯಮಗಳ ಅನ್ವಯವಾಗದಿರುವುದರಿಂದ, ಭದ್ರತೆಯಿಲ್ಲದೆ ಮಾರುಕಟ್ಟೆಯಿಂದ ಬೇಕಾಬಿಟ್ಟಿ ಸಾಲ ಎತ್ತುವಳಿ ಮಾಡಿದವು. ಭಾರತದಲ್ಲೇ ಅತ್ಯಂತ ಪ್ರತಿಷ್ಠಿತರು ಮತ್ತು ನಂಬಿಕಸ್ಥರು ಎನಿಸಿಕೊಂಡಿದ್ದ ನಿರ್ದೇಶಕ ಮಂಡಳಿ ಸದಸ್ಯರೇ ಇದ್ದ ಕಂಪನಿಗಳು ಅಪಾಯಕಾರಿ ಸ್ಥಳದಲ್ಲಿ ಹೂಡಿಕೆ ಮಾಡಿವೆ ಎಂಬುದನ್ನು ಅರಗಿಸಿಕೊಳ್ಳಲೇ ಕಷ್ಟವಾಗುತ್ತಿದೆ. ಇದನ್ನು ಮೈಮರೆವು ಅಥವಾ ಅಸಾಮರ್ಥ್ಯ ಎನ್ನುವುದೋ ಅಥವಾ ದುರಾಸೆ ಇಲ್ಲವೇ ದುರಹಂಕಾರ ಎಂದು ಬಣ್ಣಿಸುವುದೋ ಎಂಬುದೇ ತಿಳಿಯದಾಗಿದೆ. ಅದೇನೇ ಇದ್ದರೂ ಅವರ ಮೇಲಿರಿಸಿದ್ದ ನಂಬಿಕೆ ನಶಿಸಿರುವುದಂತೂ ಸ್ಪಷ್ಟ

ಫೋಟೋಗಳೆಂಬ
ನೆನಪಿನ ಬುತ್ತಿ
15 ನೇ ಪುಟದಿಂದ..

ಇರಬಾರದಿತ್ತಾ ಎಂದೂ ಅನಿಸಬಹುದು. ಕಾಲವನ್ನು ದಾಖಲಿಸುವಲ್ಲಿ ಫೋಟೊಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ನಾವು ನೋಡುತ್ತಾ ಹೋದಂತೆ ನಮ್ಮ ಸುತ್ತಮುತ್ತಲೂ ಚಿತ್ರ ತೆಗೆಯಲು ಬಹಳಷ್ಟು ಸರಕುಗಳು ಕಾಣಸಿಗುತ್ತದೆ. ಒಬ್ಬೊಬ್ಬರದ್ದೂ ಫೋಟೊ ತೆಗೆಯುವ ರೀತಿ, ಜಗತ್ತನ್ನು ನೋಡುವ ರೀತಿ ಬೇರೆಯಾಗಬಹುದು. ಒಂದೇ ದೃಶ್ಯವನ್ನು ಬೇರೆ ಬೇರೆ ಛಾಯಾಗ್ರಾಹಕರು ವಿಶಿಷ್ಟ ರೀತಿಯಲ್ಲಿ ತೆಗೆಯಬಹುದು.



ಅಷ್ಟಕ್ಕೂ ಒಂದು ಚಿತ್ರ ಚೆನ್ನಾಗಿ ಬರಲು ಯಾವುದು ಕಾರಣವಾಗುತ್ತದೆ? ಒಳ್ಳೆಯ ಕ್ಯಾಮೆರಾ ಇದ್ದರೆ ಸಾಕಾ? ಅಥವಾ ಛಾಯಾಗ್ರಾಹಕನಿಗೆ ಒಳ್ಳೆಯ ಕೌಶಲ್ಯ ಇರಬೇಕಾ? ಎನ್ನುವ ಪ್ರಶ್ನೆಗಳು ಬಹಳಷ್ಟು ಜನರ ಮನದಲ್ಲಿ ಮೂಡಬಹುದು. ಒಬ್ಬ ನಿಪುಣ ಚಿತ್ರಕಾರನಿಗೆ ಒಂದು ಚಂದದ ಚಿತ್ರ ಬಿಡಿಸಲು ಸಾವಿರಾರು ರೂಪಾಯಿ ಬೆಲೆಯ ಬಣ್ಣಗಳೇ ಬೇಕಾಗಿಲ್ಲ. ಕೈಗೆ ಸಿಕ್ಕ ಬಣ್ಣಗಳಲ್ಲೇ ಆತ ತನ್ನ ಕಲೆಯ ಝಲಕ್ ಅನ್ನು ತೋರಿಸಿಬಿಡುತ್ತಾನೆ. ಆದರೆ ಆತನಿಗೇ ಒಳ್ಳೆಯ ಸಲಕರಣೆಗಳು ದೊರೆತಲ್ಲಿ ಮಾಯಕಲೋಕವನ್ನೇ ಸೃಷ್ಟಿಸಿಬಿಡಬಲ್ಲ. ಚಿತ್ರ ಬಿಡಿಸಲು ಬಾರದವನಿಗೆ ಏನು ಕೊಟ್ಟರೂ 'ನೆಲ ಡೊಂಕು' ಎಂದಾಗಿಬಿಡುತ್ತದೆ. ಹಾಗೆಯೇ ಫೋಟೊಗ್ರಾಫಿಯಲ್ಲಿ ಕೂಡ. ನನ್ನ ಪ್ರಕಾರ ಒಂದು ಚಿತ್ರ ಬಹು ಚಂದವಾಗಿ ಬರಲು ಬಹಳಷ್ಟು ಸಂಗತಿಗಳು ಮುಖ್ಯವಾಗಬಹುದು. ಒಳ್ಳೆಯ ಕ್ಯಾಮೆರಾ, ಛಾಯಾಗ್ರಾಹಕನ ಕೌಶಲ್ಯ, ತಾಳ್ಮೆ, ಸರಿಯಾದ ಸಮಯ, ಅಳತೆ ಮೀರದ ಪೋಸ್ಟ್‌ಪ್ರೊಸೆಸಿಂಗ್, ಕಲರಿಂಗ್ ಹೀಗೆ ಬಹಳಷ್ಟು ವಿಷಯಗಳು ಒಂದು ಫೋಟೊದ ಹಿಂದೆ ಇರಬಹುದು.

ಮೇಲೆ ಹೇಳಿದೆನಲ್ಲ, ನನಗೆ ಕ್ಯಾಂಡಿಡ್ ಫೋಟೊಗ್ರಫಿಯೆಂದರೆ ಬಹಳ ಇಷ್ಟ ಅಂತ. ಜನರಿಗೆ ಗೊತ್ತಾಗದಂತೆ ಅವರ ಮುಖಭಾವಗಳನ್ನು ಸೆರೆಹಿಡಿದು ಕೊನೆಗೆ ಅವರಿಗೆ ಆ ಫೋಟೊಗಳನ್ನು ತೋರಿಸಿದಾಗ ಅವರ ಮುಖ ಅರಳುವುದನ್ನು ನೋಡಬೇಕು ನೀವು. ಫೋಟೊಗ್ರಾಫಿಯಲ್ಲಿ ಬಹಳ ಖುಷಿ ಕೊಡುವ ಸಂದರ್ಭ ಅದು. ಯಾರನ್ನೋ ಒಂದು ಕಡೆ ನಿಲ್ಲಿಸಿ ಫೋಟೊ ತೆಗೆದಾಗ ಅವರಿಗೆ ಫೋಟೊ ಹೀಗೆಯೇ ಬರಬಹುದು ಎಂಬ ನಿರೀಕ್ಷೆ ಇರುತ್ತದೆ, ಆದರೆ ಕ್ಯಾಂಡಿಡ್ ಫೋಟೊಗಳೆಂದರೆ ಹಾಗಲ್ಲ. ಹೀಗೊಂದು ಫೋಟೊ ಬರಬಹುದು ಎಂಬ ನಿರೀಕ್ಷೆಯೇ ಇಲ್ಲದಿದ್ದಾಗ ಆಗುವ ಸಂತಸ ಅಂತಿಂಥದ್ದಲ್ಲ. ಫೋಟೊಗಳು ಖುಷಿಯನ್ನು ಹಂಚುವ ಮಾಧ್ಯಮವೂ ಹೌದು. ಹಾಗೆಯೇ ನೆನಪನ್ನು ಕಾಪಿಡುವ ಸಾಧನವೂ ಹೌದು.

(ಚಂದನ ಭಟ್ ಯಲ್ಲಾಪುರದ ಕೋಣೆಮನೆಯವರು. ಪ್ರಸ್ತುತ ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ತೃತೀಯ ವರ್ಷದ ಬಿಬಿಎ ವಿದ್ಯಾರ್ಥಿ)



ಬದಲಾವಣೆಯ ಹಾದಿಯತ್ತ ಕನ್ನಡ ಚಿತ್ರರಂಗ

ಕನ್ನಡ ಚಿತ್ರರಂಗ ಈಗ ಮೊದಲಿನಂತಿಲ್ಲ. ಹಲವು ಬದಲಾವಣೆಗಳಿಗೆ ತೆರೆದುಕೊಂಡಿದೆ. ಕನ್ನಡ ಚಿತ್ರರಂಗ ಬಾಲಿವುಡ್‌ನ್ನೂ ಮಕಾಡೆ ಮಲಗಿಸುವ ಮಟ್ಟಕ್ಕೆ ಬೆಳೆದಿದೆ. 2022 ರಲ್ಲಿ 5 ಕನ್ನಡ ಸಿನೆಮಾಗಳು 100 ಕೋಟಿಗೂ ಅಧಿಕ ಕಲೆಕ್ಷನ್ ಮಾಡುವ ಮೂಲಕ ದಾಖಲೆಯನ್ನು ಬರೆದಿದೆ. ಹೀಗೆ ಕನ್ನಡ ಸಿನಿರಂಗದ ಬದಲಾದ ವಿದ್ಯಮಾನಗಳ ಕುರಿತಾದ ಅವಲೋಕನ ಇಲ್ಲಿದೆ.



ಇಂದುಧರ
ಹಳೆಯಂಗಡಿ

ಅದೊಂದು ಕಾಲವಿತ್ತು. ಭಾರತೀಯ ಸಿನಿಮಾ ಎಂದರೆ ಕೇವಲ ಬಾಲಿವುಡ್ ಎಂಬಂತಿತ್ತು. ಆದರೆ ಕಾಲಕ್ರಮೇಣ ತೆಲುಗು, ತಮಿಳು ಸಿನಿಮಾಗಳು ಬಾಲಿವುಡ್ ಸಿನಿಮಾಗಳಿಗೆ ಭಾರೀ ಪೈಪೋಟಿ ನೀಡಲಾರಂಭಿಸಿದವು. ಬಾಹುಬಲಿ ಸಿನಿಮಾ ಇಡೀ ಜಗತ್ತಿನ ಸಿನಿಪ್ರಿಯರನ್ನು ದಕ್ಷಿಣ ಭಾರತೀಯ ಸಿನಿಮಾಗಳತ್ತ ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ಆ ಮೂಲಕ ಭಾರತೀಯ ಸಿನಿಮಾ ಎಂದರೆ ಕೇವಲ ಬಾಲಿವುಡ್ ಅಲ್ಲ ಎಂಬುವುದನ್ನು ಬಾಹುಬಲಿ ಸಾರಿತ್ತು.

ತೆಲುಗು, ತಮಿಳು ಚಿತ್ರರಂಗ ವೇಗವಾಗಿ ಬೆಳೆಯುತ್ತಿದ್ದರೂ ಸಹ, ಕನ್ನಡ ಸಿನಿಮಾ ಎಂದರೆ ಅದು ಕರ್ನಾಟಕಕ್ಕೇ ಸೀಮಿತವಾಗಿತ್ತು. ವರ್ಷಂಪ್ರತಿ 200ಕ್ಕೂ ಅಧಿಕ ಸಿನಿಮಾಗಳು ಕನ್ನಡದಲ್ಲಿ ಬಿಡುಗಡೆ ಆಗುತ್ತಿದ್ದರೂ, ನಾಲ್ಕೈದು ಸಿನಿಮಾಗಳು ಗೆದ್ದರೆ ಅದೇ ದೊಡ್ಡದು. ಯಾವುದಾದರೂ ಸಿನಿಮಾಗೆ ಹೊರ ದೇಶ, ಹೊರ ರಾಜ್ಯಗಳಲ್ಲಿ ಒಂದಷ್ಟು ಶೋಗಳು ಸಿಕ್ಕರೆ ಅದೇ ಭಾರೀ ದೊಡ್ಡ ಸಂಭ್ರಮ. ಆದರೆ ಎಲ್ಲರನ್ನೂ ಕನ್ನಡ ಸಿನಿಮಾಗಳತ್ತ ಆಕರ್ಷಿಸಿದ್ದು ಕೆಜಿಎಫ್ ಸಿನಿಮಾ, 2019ರಲ್ಲಿ ಬಿಡುಗಡೆಯಾದ ಸಿನಿಮಾಗೆ ಭಾರೀ ದೊಡ್ಡ ಯಶಸ್ಸು ಸಿಕ್ಕಿದ್ದು ಮಾತ್ರವಲ್ಲದೇ, ಕೆಜಿಎಫ್ ಚಾಪ್ಟರ್ 2 ಗೆ ಜನರು ಬಹಳ ನಿರೀಕ್ಷೆಯಿಂದ ಕಾಯುವಂತೆ ಮಾಡಿತ್ತು. 2022ರಲ್ಲಿ ಬಿಡುಗಡೆಯಾದ ಕೆಜಿಎಫ್ ಚಾಪ್ಟರ್ 2 ಸಾವಿರ ಕೋಟಿ ಗಳಿಕೆ ಮಾಡಿ, ಕನ್ನಡ ಚಿತ್ರರಂಗವನ್ನು ಜಗತ್ತಿನ ಸಿನಿಮಾದ ಭೂಪಟದಲ್ಲಿ ತಲೆಯೆತ್ತಿ ನಿಲ್ಲಿಸಿತು.



ಒಟಿಟಿಗಳ ಕೊಡುಗೆ ಅಪಾರ..



ಕೆಲವೊಂದು ಸಿನೆಮಾಗಳು ಥಿಯೆಟರ್ ನಿಂದ ಬೇಗನೇ ಜಾಗ ಖಾಲಿ ಮಾಡಿದರೂ ಸಹ ಒಟಿಟಿಯಲ್ಲಿ ಉತ್ತಮ ಯಶಸ್ಸನ್ನು ಗಳಿಸಿವೆ. ಲವ್ ಮಾಕ್ಟೇಲ್ ಹಾಗೂ ದಿಯಾ ಸಿನಿಮಾ ಬೆಸ್ಟ್ ಉದಾಹರಣೆಗಳು. ಲವ್ ಮಾಕ್ಟೇಲ್ ಸಿನಿಮಾ ಒಟಿಟಿಯಲ್ಲಿ ಸಿಕ್ಕ ಯಶಸ್ಸಿನಿಂದಾಗಿಯೇ, ಅದರ ಎರಡನೇ ಭಾಗ ಸಿದ್ಧವಾಗಿ ತೆರೆಗೆ ಬಂದಿತ್ತು. ಅದಲ್ಲದೇ ಹಲವು ಹೊಸಬರ ಸಿನಿಮಾಗಳಿಗೆ ಒಟಿಟಿ ಹೊಸ ಭರವಸೆಯನ್ನು ನೀಡಿದೆ. ಒಟಿಟಿ ವೇದಿಕೆಗಳ ನಡುವೆಯೇ ಪೈಪೋಟಿ ಇರುವುದರಿಂದ ಒಬ್ಬರಲ್ಲ ಇನ್ನೊಬ್ಬರು ಸಿನಿಮಾವನ್ನು ಖರೀದಿಸುತ್ತಿದ್ದಾರೆ. ಝೀ5, ವೂಟ್ ಹಾಗೂ ಅಮೇಜಾನ್ ಪ್ರೈಮ್ ಈ ಮೂರರ ಪೈಕಿ ಒಂದರಲ್ಲಾದರೂ ಸ್ಥಾನ ಸಿಕ್ಕೇ ಸಿಗುತ್ತದೆ ಅನ್ನೋ ವಿಶ್ವಾಸ ಸಿನಿಮಾ ತಯಾರಕರಿಗಿದೆ.

100 ದಿನಗಳು ಪೂರೈಸಿದರೆ ಮಾತ್ರ ಸಿನಿಮಾ ಗೆದ್ದಂತೆ ಎಂಬ ದಿನಗಳು ಇಂದು ಇಲ್ಲ, ಬದಲಾಗಿ ಎಷ್ಟು ಕೋಟಿ ಕಲೆಕ್ಷನ್ ಮಾಡಿದೆ ಎಂಬುವುದರ ಮೇಲೆ ಸಿನಿಮಾದ ಯಶಸ್ಸು ನಿಂತಿದೆ.

2022ರ ವರೆಗೂ ಕನ್ನಡ ಸಿನಿಮಾರಂಗ ಬದಲಾವಣೆಗೆ ಮುಂದಾಗಿದ್ದೇ ಇಲ್ಲ, ಅದೇ ಹೀರೋ, ವಿಲನ್, ಒಂದೆರಡು ಕುಟುಂಬ, ಅಲ್ಲೊಬ್ಬಳು ಹೀರೋಯಿನ್ನು ಇದರ ನಡುವೆಯೇ ಸಿನಿಮಾ ಕಥೆ. ಬಹುತೇಕ ಸಿನಿಮಾಗಳು ಹೀಗೆ ಇರುತ್ತಿದ್ದವು. ಹಾಗಂತ ಹೊಸ ಅಲೆ ಸೃಷ್ಟಿಸಲು ಒಂದಷ್ಟು ಸಿನಿಮಾಗಳು ಯತ್ನಿಸಿದರೂ, ಅವು ನಿರೀಕ್ಷಿತ ಫಲಿತಾಂಶ ಗಳಿಸಲು ಯಶಸ್ವಿಯಾಗಿರಲಿಲ್ಲ. ಈ ಥಿಯರಿ ಹೊರತಾದ ಸಿನಿಮಾಗಳು ಬಿಡುಗಡೆ ಆಗುತ್ತಿದ್ದರೂ ಸಹ ಅವು ಯಶಸ್ಸು ಕಾಣುತ್ತಿರಲಿಲ್ಲ. ಕಾರಣ, ಸಿನಿಮಾಗಳಲ್ಲಿ ಯಾವುದೇ ದೊಡ್ಡ ನಟರು ಇರುತ್ತಿರಲಿಲ್ಲ. ಆದರೆ 2022 ರಲ್ಲಿ ಜನಪ್ರಿಯ ನಟರೇ ವಿಭಿನ್ನ ಕಥಾಹಂದರ ಇರೋ ಸಿನಿಮಾಗಳಲ್ಲಿ ಕಾಣಿಸತೊಡಗಿದರು. ಸಾಮಾನ್ಯವಾಗಿ ಯೂಟ್ಯೂಬರ್‌ಗಳು ಹೇಳೋ ಮಾತು – 'ಕಂಟೆಂಟೇ ಕಿಂಗು'. ಯಾರು ವೀಡಿಯೋ ಮಾಡ್ತಾರೆ ಅನ್ನೋದು ಮ್ಯಾಟರ್ ಆಗೋದೇ ಇಲ್ಲ, ಹೊಸ ಹೊಸ ಶೈಲಿಯ ಕಂಟೆಂಟ್ ಬಂದ್ರೆ ಗೆಲುವು ಗ್ಯಾರಂಟಿ ಅನ್ನೋದು ಅವರ ವಾದ. ಇದೇ ಥಿಯರಿ ಕನ್ನಡ ಸಿನಿಮಾರಂಗದಲ್ಲಿ ಅಳವಡಿಕೆ ಆದ್ದರಿಂದ ಇಂದು ಸ್ಯಾಂಡಲ್ವುಡ್ ವಿಶಾಲವಾಗಿ ಬೆಳೆದುನಿಂತಿದೆ. ಆಕ್ಷನ್, ಥ್ರಿಲ್ಲರ್ ಸಿನಿಮಾಗಳು ಮಾತ್ರ ಕೋಟಿ ಕೋಟಿ ಬಾಚುತ್ತವೆ ಅನ್ನೋದನ್ನು ಸುಳ್ಳಾಗಿಸಿದ್ದು 777 ಚಾರ್ಲಿ ಸಿನಿಮಾ. ಇನ್ನು ಸಣ್ಣ ಬಜೆಟ್ನಲ್ಲಿಯೇ ಭರ್ಜರಿ ಲಾಭ ಮಾಡಬಹುದು ಎಂಬುದನ್ನು ಸಾಬೀತು ಮಾಡಿದ್ದು ಕಾಂತಾರ ಸಿನಿಮಾ.

ಅದಿರ್ಲಿ, ನೂರಾರು ಕೋಟಿ ಬಾಚದಿದ್ದರೂ, 2022ರಲ್ಲಿ ಬಿಡುಗಡೆಯಾದ ಲವ್ ಮಾಕ್ಟೇಲ್ 2, ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ, ಮ್ಯಾನ್ ಆಫ್ ದಿ ಮ್ಯಾಚ್, ಸೆಲಿ ಮಮ್ಮಿ ಗೂಗಲ್ ಡ್ಯಾಡಿ, ಗಾಳಿಪಟ 2, ಮಾನ್ಸೂನ್ ರಾಗ, ಗುರು ಶಿಷ್ಯರು, ಗಂಧದ ಗುಡಿ, ಬನಾರಸ್, ಹೆಡ್ಬುಶ್, ವಿಜಯಾನಂದ ಇತ್ಯಾದಿ ಸಿನಿಮಾಗಳು ಜನರಿಂದ ಉತ್ತಮ ಪ್ರತಿಕ್ರಿಯೆ ಪಡೆದು, ಯಶಸ್ಸು ಗಳಿಸಿವೆ.

ಹಾಗಂತ ಸ್ಯಾಂಡಲ್‌ವುಡ್‌ನಲ್ಲಿ ಸಮಸ್ಯೆಯೇ ಇಲ್ಲ ಅಂತೇನಿಲ್ಲ!

ಕನ್ನಡ ಸಿನಿಮಾಗಳು ಗೆಲುವಿನ ನಾಗಾಲೋಟ ಮುಂದುವರೆಸಿದರೂ, ಒಂದಷ್ಟು ಸಮಸ್ಯೆಗಳು ಅದನ್ನು ಬಹಳಷ್ಟು ಕಾಡುತ್ತಿವೆ. ಅದರಲ್ಲಿ ಪ್ರಮುಖವಾದವು ಎಂದರೆ ಥಿಯೇಟರ್ ಹಾಗೂ ನಿರ್ಮಾಪಕರ ಸಮಸ್ಯೆ. ಒಂದೊಳ್ಳೆ ಕಥೆ ಸಿದ್ಧವಿದ್ದರೂ, ಅದಕ್ಕೆ ಸೂಕ್ತ ಬಂಡವಾಳ ಹಾಕುವ ನಿರ್ಮಾಪಕರು ಸಿಗುತ್ತಿಲ್ಲ, ಕೆಲವೆಡೆ ಸಿಕ್ಕರೂ, ಕಥೆಯನ್ನು ಒಂಚೂರು ತಿರುಚುವಂತೆ ಕೇಳುವುದು ಸೇರಿದಂತೆ ಅವರದ್ದೂ

2022

ಚಂದನವನದಲ್ಲಿ ಬದಲಾವಣೆಯ ಪರ್ವ

2018ರಲ್ಲಿ ತೆರೆಕಂಡ ಕೆಜಿಎಫ್ ಚಾಪ್ಟರ್ 1 ಸಿನಿಮಾ 100 ಕೋಟಿ ಕ್ಲಬ್ ಸೇರಿದ ಮೊದಲ ಕನ್ನಡ ಸಿನಿಮಾ ಎಂಬ ದಾಖಲೆ ಬರೆದಿತ್ತು. ಆ ಬಳಿಕ ಯಾವ ಕನ್ನಡ ಸಿನಿಮಾ ಸಹ ಶತಕೋಟಿ ಕಲೆಕ್ಷನ್ ಗಳಿಸಲಿಲ್ಲ. ಆದರೆ 2022 ರ ಒಂದೇ ವರ್ಷ 5 ಸಿನಿಮಾಗಳು 100 ಕೋಟಿಗೂ ಅಧಿಕ ಕಲೆಕ್ಷನ್ ಮಾಡಿರುವುದು, ಕನ್ನಡ ಸಿನಿಮಾರಂಗದ ಹೊಸ ಮೈಲಿಗಲ್ಲು ಅಂದರೂ ತಪ್ಪಾಗಲಿಕ್ಕಿಲ್ಲ. ರಕ್ಷಿತ್ ಶೆಟ್ಟಿ ಅಭಿನಯದ 777 ಚಾರ್ಲಿ (105 ಕೋಟಿ), ಪುನೀತ್ ರಾಜ್ ಕುಮಾರ್‌ಅಭಿನಯದ ಜೇಮ್ಸ್ (150 ಕೋಟಿ), ಕಿಚ್ಚ ಸುದೀಪ್ ಅಭಿನಯದ ವಿಕ್ರಾಂತ್ ರೋಣ (158 ಕೋಟಿ), ರಿಷಭ್ ಶೆಟ್ಟಿ ಅಭಿನಯದ ಕಾಂತಾರ (ರೂ. 450 ಕೋಟಿ) ಹಾಗೂ ಕೆಜಿಎಫ್ ಚಾಪ್ಟರ್ 2 (ರೂ. 1,200 ಕೋಟಿ ರೂಪಾಯಿ) ಗಲ್ಲಾಪೆಟ್ಟಿಗೆಯಲ್ಲಿ ಭಾರಿ ಸದ್ದು ಮಾಡಿದವು. ಅದಲ್ಲದೇ 2023 ರಲ್ಲೂ ಮತ್ತಷ್ಟು ಸಿನಿಮಾಗಳು ಈ ಪಟ್ಟಿ ಸೇರುವ ನಿರೀಕ್ಷೆಯೂ ಇದೆ.


ಕೆಲವು ಡಿಮ್ಯಾಂಡ್‌ಗಳು ಮೂಲ ಕಥೆಗಳನ್ನೇ ಹಾಳುಗೆಡವುತ್ತಿವೆ. ಅದಲ್ಲದೇ, ದೊಡ್ಡ ನಟರಿಲ್ಲದ ಸಿನಿಮಾಗಳನ್ನು ನಿರ್ಮಾಣ ಮಾಡಲು ಹಲವು ನಿರ್ಮಾಪಕರು ಒಪ್ಪುತ್ತಿಲ್ಲ, ಕಾರಣ ರಿಟರ್ನ್ಸ್ ಗ್ಯಾರಂಟಿ ಇಲ್ಲ ಎಂದು. ಹಾಕಿದ ಬಂಡವಾಳ ಹಿಂದೆ ಸಿಗದೇ ಇರೋದಿಕ್ಕೆ ಕಾರಣ ಥಿಯೇಟರ್‌ಗಳ ಕೊರತೆ. ಹಾಗಂತ ಬಹಳ ಕಡಿಮೆ ಎಂದೇನಿಲ್ಲ, ಬದಲಿಗೆ ಒಬ್ಬ ಜನಪ್ರಿಯ ಸ್ಟಾರ್ ನಟನ ಸಿನಿಮಾ ತೆರೆಕಂಡಾಗ, ಎಲ್ಲ ಸ್ಮಾಲ್ ಬಜೆಟ್ ಸಿನಿಮಾಗಳನ್ನು ಥಿಯೇಟರ್‌ನಿಂದ ತೆಗೆದುಹಾಕಲಾಗುತ್ತದೆ. ಹೀಗಿರುವಾಗ, ಜನರಿಂದ ಉತ್ತಮ ಸ್ಪಂದನೆ ಸಿಕ್ಕರೂ, ಥಿಯೇಟರ್ ಸಿಗದೇ ಒಂದಷ್ಟು ಸನಿಮಾಗಳು ಪರದಾಡುತ್ತಿರುತ್ತವೆ.

ಇದೆಲ್ಲವುದರ ನಡುವೆ 2023ರ ಹೊಸ ವರ್ಷ, ಕೆಜಿಎಫ್, ಕಾಂತಾರದಂತಹ ಬಿಗ್‌ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಹೊಂಬಾಳೆ ಫಿಲ್ಮ್ಸ್ ಅವರ ಒಂದು ಪ್ರತಿಜ್ಞೆ ಹೊಸ ಭರವಸೆಯನ್ನು ಮೂಡಿಸಿದೆ. ಮುಂದಿನ 5 ವರ್ಷಗಳಲ್ಲಿ 3000 ಕೋಟಿ ರೂಪಾಯಿಗಳನ್ನು ಮನೋರಂಜನಾ ಕ್ಷೇತ್ರದಲ್ಲಿ ಹೂಡಿಕೆ ಮಾಡುವುದಾಗಿ ನಿರ್ಮಾಣ ಸಂಸ್ಥೆಯ ವಿಜಯ್ ಕಿರಗಂದೂರು ಘೋಷಿಸಿದ್ದು, ಹೊಸ ಮುಖಗಳಿಗೂ ಆಶಾಭಾವನೆ ನೀಡಿದೆ ಅನ್ನಬಹುದು. ಹೀಗೆ ಮುಂದೆಯೂ ಬೇರೆ ಬೇರೆ ನಿರ್ಮಾಣ ಸಂಸ್ಥೆಗಳು ಹೊಸ ಪ್ರತಿಭೆಗಳಿಗೆ, ಹೊಸ ಕಥೆಗಳಿಗೆ ಮನ್ನಣೆ ಹಾಗೂ ಬೆಂಬಲ ನೀಡಿದಾಗ ಕನ್ನಡ ಚಿತ್ರರಂಗ ಇನ್ನಷ್ಟು ಬೃಹದಾಕಾರವಾಗಿ ಬೆಳೆಯುವುದರಲ್ಲಿ ಯಾವ ಸಂಶಯವೂ ಇಲ್ಲ.

(ಲೇಖಕರು ಉಜಿರೆಯ ಎಸ್ ಡಿ ಎಂ ಕಾಲೇಜಿನಲ್ಲಿ ಉಪನ್ಯಾಸಕರು ಮತ್ತು ಹವ್ಯಾಸಿ ಬರಹಗಾರರು)

ಸಿನಿ ವಿಚಾರ

ಶಂಕರ್ ನಾಗ್ ಅವರ 'ಮಾಲ್ಗುಡಿ ದಿನಗಳು'



ಸಾಹಿತ್ಯಲೋಕದಲ್ಲಿ ಆರ್.ಕೆ.ನಾರಾಯಣ ಅಗ್ರಗಣ್ಯ ಹೆಸರು. ಅವರ ಕಥೆ ಮತ್ತು ಕಾದಂಬರಿಗಳು ಇಂದಿಗೂ ಜನಪ್ರಿಯ. ಆರ್.ಕೆ.ಎನ್. ಅವರು ತಮ್ಮ ಬರಹಗಳನ್ನು ತೆರೆಯ ಮೇಲೆ ತರಲು ಯಾವುದೇ ನಿರ್ದೇಶಕರಿಗೆ ನೀಡಲಿಲ್ಲ ಎಂದು ಹೇಳಲಾಗುತ್ತದೆ. ಆದರೆ ಅವರೇ ಖುದ್ದಾಗಿ ತಮ್ಮ ಕಥೆಗೆ ದೃಶ್ಯರೂಪ ನೀಡಿ ನಿರ್ದೇಶಿಸಲು ಶಂಕರ್ ನಾಗ್ ಅವರಲ್ಲಿ ಕೇಳಿಕೊಂಡರು. ಹೀಗಾಗಿ 'ಮಾಲ್ಗುಡಿ ಡೇಸ್' ಧಾರಾವಾಹಿ ನಿರ್ಮಾಣವಾಯಿತು. ಅಂದಹಾಗೆ ಬೆಂಗಳೂರಿನ ಎರಡು ಜನಪ್ರಿಯ ಪ್ರದೇಶಗಳಾದ ಮಾಲ್ (ಮಲ್ಲೇಶ್ವರಂ) ಮತ್ತು ಗುಡಿ (ಬಸವನಗುಡಿ) ಯಿಂದ ಬಂದಿದೆ.

ಕ್ಯಾಂಪಸ್ ಡೈರಿಯ ಪುಟಗಳು

ಹಾಸ್ಟೆಲ್ ಡೈರೀಸ್



ನೂಪುರ ಜಿ.ಜಿ



ರಜೆ ಎರಡಕ್ಷರದ ಈ ಪದ ಎಲ್ಲರಿಗೂ ಅಚ್ಚುಮೆಚ್ಚು. ರಜೆ ಎಷ್ಟಿದ್ದರೂ ಸಾಲದು. ಇದೊಂದು ವಸ್ತುವಾಗಿದ್ದರೆ ಅಕ್ಷಯ ಪಾತ್ರೆಗೆ ಹಾಕಿ ಜೀವನ ಪರ್ಯಂತ ಅನುಭವಿಸುತ್ತಿದ್ದೇವೇನೋ. ಶಾಲೆ, ಕಾಲೇಜು, ಕೆಲಸ ಇತ್ಯಾದಿ ಪ್ರಾರಂಭವಾಗುವುದುನೋ ಸಂಭ್ರಮದ ವಿಚಾರವೇ. ಆದರೆ ನಮ್ಮಂತಹ ಹಳ್ಳಿಯ ಮಕ್ಕಳಿಗೆ ದೂರದೂರಿನ ಹಾಸ್ಟೆಲಿಗೆ ಹೋಗುವುದೇ ಬೇಸರದ ಸಂಗತಿ. ಹಾಸ್ಟೆಲ್ ಅನ್ನು 'ಹೋಂ ಅವೇ ಫ್ರಮ್ ಹೋಂ' ಎನ್ನುತ್ತಾರೆ, ಸತ್ಯವೇ!

ನಮ್ಮಂತೆಯೇ ಹತ್ತಾರು ಆತಂಕ ನೂರಾರು ಆಕಾಂಕ್ಷೆಗಳನ್ನು ಇಟ್ಟುಕೊಂಡ ಸಾವಿರಾರು ವಿದ್ಯಾರ್ಥಿಗಳು ಹಾಸ್ಟೆಲ್ ಸೇರಿರುತ್ತಾರೆ. ಸಣ್ಣ ಪುಟ್ಟ ನಗು ಮುಗುಳ್ನಗೆಯಿಂದ ಆರಂಭವಾಗುವ ಸಂಭಾಷಣೆ ಮುಂದೆ ಒಂದೊಳ್ಳೆ ಸ್ನೇಹಕ್ಕೆ ತಿರುಗುತ್ತದೆ. ನಂತರ ತಾಯಿಯಾಗಿ, ತಂಗಿಯಾಗಿ, ಅಕ್ಕಳಾಗಿ ನಮ್ಮನ್ನು ಸಲಹುತ್ತಾರೆ ಸ್ನೇಹಿತರು. ಆದರಲ್ಲೂ ಕೆಲ ದಿನಗಳು ಕಳೆದ ಮೇಲೆ, ಒಂದೇ ಮನಸ್ಥಿತಿಯ ಸ್ನೇಹಿತರ ಗುಂಪಾದ ಮೇಲಂತೂ ನಮ್ಮ ಹುಚ್ಚಾಟಗಳಿಗೆ ಪಾರವೇ ಇಲ್ಲ. ವೀಕೆಂಡ್ ಬರುತ್ತಿದ್ದಂತೆ ಔಟಿಂಗ್ ಹೋಗುವುದೇ ದೊಡ್ಡ ಗೌಜು. ಹಾಸ್ಟೆಲ್ ಸ್ಟ್ರಿಕ್ಟ್ ಆದಷ್ಟು ನಮ್ಮ ಕಪಿಚೇಷ್ಟೆ ಹೆಚ್ಚು. ಈವರೆಗೂ ಅದೆಷ್ಟು ರೂಲ್ಸ್ ಬ್ರೇಕ್ ಮಾಡಿದ್ದೇವೋ ದೇವರೇ ಬಲ್ಲ!

ಮನೆಯಲ್ಲಿ ಅಮ್ಮ ನಮ್ಮ ಹೆಸರಿನ ಸಹಸ್ರ ನಾಮಾವಳಿ ಮಾಡಿದರೂ ಏಳದ ನಾವು ಹಾಸ್ಟೆಲ್‌ನ ಒಂದೇ ಬೆಲ್ಲಿಗೆ ದಡದಡನೆ ಎದ್ದು ಮೇಲ್ಗಣ್ ತೇಲ್ಗಣ್ಣಿನಲ್ಲಿ ಬೆಳಗ್ಗಿನ ಪ್ರಾರ್ಥನೆಯನ್ನು ಮುಗಿಸಿ ತೂಕಡಿಸಿಕೊಂಡು ಸ್ಟಡಿ ಅವರ್ಸ್ ಕಳೆಯುವುದೇ ನಮ್ಮ ಬಹುದೊಡ್ಡ ಸಾಧನೆ. ನಂತರ ಕ್ಯೂನಲ್ಲಿ ಬಕೆಟ್ ಹಿಡಿದುಕೊಂಡು ಬಿಸಿ ನೀರಿಗೆ ಜಗಳವಾಡುವಾಗ ಯಾವ ಗಯ್ಯಾಳಿಗಳಿಗೂ ಕಮ್ಮಿ ಕಾಣದು ನಮ್ಮ ಹೋರಾಟ. ಅಂತೂ ಇಂತೂ ಸ್ನಾನ ಮುಗಿಸಿ ಮೆಸ್‌ಗೆ ಹೋದರೆ ಅಲ್ಲಿಯೂ ಅದೇ ಟೈಂ ಟೇಬಲ್ ಪ್ರಕಾರದ ತಿಂಡಿಗಳು. ಆಗಲೇ ನೋಡಿ ಅಮ್ಮನ ಅಡುಗೆಯ ಕೈ ರುಚಿಯ ನೆನಪಾಗುವುದು.


ಬೆಳಿಗ್ಗೆ ಅದೆಷ್ಟೇ ಬೇಗ ಎದ್ದರೂ ಕೊನೆಗೆ ಗಡಿಬಿಡಿಯಲ್ಲೇ ಹೊರಟು ಕಾಲೇಜು ತಲುಪುವಾಗ ಲೆಕ್ಚರರ್‌ರ "ಹಾಸ್ಟೆಲ್ ಅಲ್ಲಿ ಇದ್ದುಕೊಂಡು ತುಂಬಾ ಬೇಗ ಬಂದಿದ್ದೀರಿ" ಎನ್ನುವ ವ್ಯಂಗ್ಯದ ಮಾತು ನಮಗಂತೂ ಕಾಮನ್ ಡೈಲಾಗ್.

ಬೇಕೆಂದಾಗ ಯಾರನ್ನೂ ಕೇಳದೆ ಔಟಿಂಗ್ ಹೋಗುವುದು, ಸಂಜೆಯ ಲಿಮಿಟೆಡ್ ತಿಂಡಿಯನ್ನು ಅನ್ಲಿಮಿಟೆಡ್ ಆಗಿ ಕದ್ದುಣ್ಣುವುದು. ಸ್ಟಡಿ ಟೈಮಿನಲ್ಲಿ ಅಸೈನ್ಮೆಂಟ್ ನೆಪ ಮಾಡಿ ಆಗಾಗ ಫೋನ್ ನೋಡುವುದು, ನಾಳೆ-ನಾಳೆ ಎಂದು ಮುಂದ್ಹಾಕಿದ ಇಡೀ ವಾರದ ಬಟ್ಟೆಯನ್ನು ಒಗೆಯುವುದು, ಅದ್ಯಾರನ್ನೊ ಬಾತ್ರೂಮಲ್ಲಿ ಕೂಡಿಹಾಕುವುದು, ಮತ್ಯಾರದ್ದೊ ಬಟ್ಟೆ, ಚಪ್ಪಲಿಯನ್ನು ಕದ್ದಿಟ್ಟು ಸತಾಯಿಸುವುದು. ಪರೀಕ್ಷೆಯ ಸಮಯದಲ್ಲಿ ಗ್ರೂಪ್ ಸ್ಟಡಿ ನೆಪದಲ್ಲಿ ಹರಟೆ, ಸಮಯ ಸಿಕ್ಕಾಗೆಲ್ಲಾ ಹಸಿಬಿಸಿ ಗಾಸಿಪ್ಪು, ಗೆಳತಿ ಮನೆಯಿಂದ ತಿಂಡಿ ತಂದಾಗ ಊರ ಜಾತ್ರೆಗೆ ಜನ ಸೇರಿದಂತೆ ಆ ರೂಮಲ್ಲಿ ಎಲ್ಲಾ ಸೇರಿ ಎಲ್ಲವನ್ನೂ ಗುಳುಂ ಮಾಡುವುದು. ಯಾರಿಗಾದರೂ ಹುಷಾರಿಲ್ಲದಾಗ ಅವರ ದೇಖ್ಬಾಲ್ ಮಾಡುವುದು, ಓದುವ ಸಮಯದಲ್ಲಿ ಹಾಯಾಗಿ ಮಲಗಲು ಹುಷಾರಿಲ್ಲ ಎಂದು ನೆಪಕೊಡುವುದು. ಹೊಸ ಬಟ್ಟೆ ಖರೀದಿಸಿದಾಗ ಸ್ನೇಹಿತರ ಮುಂದೆ ಸಣ್ಣ ಫ್ಯಾಷನ್ ಶೋ, ಹೀಗೆ ನಗು ಕೇಕೆಗೆ ಏನೂ ಕಮ್ಮಿ ಇಲ್ಲದ ನಮ್ಮ ಹಾಸ್ಟೆಲ್ ಖಂಡಿತಾ ಹೋಂ ಅವೇ ಫ್ರಂ ಹೋಮೇ!

ಹಾಸ್ಟಲಿನ ಕಾರಿಡಾರ್ ಗೋಡೆಗಳಿಗೆ ಗೊತ್ತಿರುವಷ್ಟು ಗಾಸಿಪ್ಪು ಮತ್ಯಾರಿಗೂ ಗೊತ್ತಿರಲ್ಲಪ್ಪ. ಹಾಗೆ ಹಾಸಿಗೆಯ ದಿಂಬಿಗೆ ಗೊತ್ತಿರುವಷ್ಟು ನೋವೂ ಕೂಡ. ಒಟ್ಟಿನಲ್ಲಿ ಈ ಇಡೀ ಜರ್ನಿಯನ್ನು ಸುಂದರವಾಗಿಸುವ ಹಾಸ್ಟೆಲ್‌ಮೇಟ್‌ಗೆ ಜೈ! ಜೀವನದಲ್ಲಿ ಒಮ್ಮೆಯಾದರೂ ಹಾಸ್ಟೆಲ್ ಅನುಭವ ಬೇಕು ಅನ್ನುವುದು ಅಕ್ಷರಶಃ ಸತ್ಯವಾದ ಮಾತು.

(ಪ್ರಥಮ ವರ್ಷದ ಬಿ.ಎ. ವಿದ್ಯಾರ್ಥಿ, ಎಸ್ ಡಿ ಎಂ ಕಾಲೇಜು ಉಜಿರೆ)

ಕಾಲ್ಕೇಜಿ ಕಾಲೇಜು ನೆನಪು



ಹೇಮಂತ್ ಮೂಡಿಗೆರೆ



ಶಾಲಾ ಜೀವನ ಮುಗಿಸಿ ಕಾಲೇಜು ಜೀವನಕ್ಕೆ ಕಾಲಿಡುವುದು ಒಂಥರಾ ಅರ್ಧ ಹಣ್ಣಾದ ಮಾವಿನ ರೀತಿ. ಅತ್ತ ಬಾಲ್ಯದ ಪೂರ್ತಿ ಸಿಹಿಯೂ ಇಲ್ಲದ, ಇತ್ತ ಗುರಿ, ಜವಾಬ್ದಾರಿಗಳ ಹುಳಿಯೂ ಸೇರಿ ನಮ್ಮದೇ ಕಲ್ಪನೆ. ಕನಸುಗಳ ಉಪ್ಪು- ಖಾರ ಬೆರೆಸಿ ಒಂದು ರೀತಿ ಮಜವಾದ ಅನುಭವ.

ಈ ಕಾಲೇಜು ಜೀವನ ಎಂಬುದು ಪದವಿ ಪೂರ್ವದಿಂದ ಹಿಡಿದು ಹೆಚ್ಚು ಕಡಿಮೆ ಕೆಲಸ ಸಿಗುವ ತನಕದ ವಯಸ್ಸಿನಲ್ಲಿ ನಮಗೆ ಸಿಗುವ ಕಾಲ್ಕೇಜಿ ಜೀವನ. ಪದವಿ ಶಿಕ್ಷಣವಂತೂ ಒಬ್ಬ ಮನುಷ್ಯನನ್ನು ಪೂರ್ಣವಾಗಿ ರೂಪಿಸುವ ಕುಂಬಾರನಂತೆಯೇ ಸರಿ. ಗೊತ್ತು ಗುರಿಯಿಲ್ಲದ ಆಸೆಗಳಿಗೆ ರೂಪು ಕೊಟ್ಟು, ರೂಪುರೇಷೆಗಳನ್ನು ತಿದ್ದಿ ತೀಡಿ ಅಂತಿಮ ಹಂತಕ್ಕೆ ತಲುಪಲು ಕೊಂಡೊಯ್ಯುವ ಹೊತ್ತು.

ಹಾಗೆಂದು ಹದಿಹರೆಯದಲ್ಲೇ ಗಂಭೀರ ಗೌತಮನಾಗಿ ಬಾಳಬೇಕೇ? ಕಾಲೇಜಿನ ಕನ್ಯಾ, ಕುಮಾರರಿಗೆ ಆ ರೀತಿ ಸಲ್ಲದು. ಕಲಿಕೆಯ ಜೊತೆಗೆ ಪ್ರಯಾಣ, ಚಟುವಟಿಕೆ, ಮೋಜು, ಹರಟೆ ಎಲ್ಲವನ್ನೂ ಒಳಗೊಂಡ ಕಸರತ್ತು. ಕಾಲೇಜಿಗೆ ದಶದಿಕ್ಕುಗಳಿಂದ ಬರುವ ವಿದ್ಯಾರ್ಥಿಗಳದು ನೂರೆಂಟು ಕಥೆ. ಬಸ್ಸಿನ ಸೀಟು ಸಿಗದೆ ನೇತಾಡಿಕೊಂಡು ಊರುಗಳಿಂದ ಬರುವ ವಿದ್ಯಾರ್ಥಿಗಳದು ಒಂದು ಕಥೆಯಾದರೆ, ಹಾಸ್ಟೇಲಿನ ಊಟವನ್ನು ಹಗಲಿಡೀ ಬೈದು 'ಇರುವ ಭಾಗ್ಯವನು ನೆನೆದು ಬಾರನೆಂಬುದನು ಬಿಡು' ಎಂಬುದನ್ನು ಅರಿತು ಕಡೆಗೆ 'ಹರುಷಕ್ಕಿದೇ ದಾರಿ' ಎಂದು ಕಾಲೇಜಿನ ಹಾದಿ ತುಳಿವ ಅನ್ಯ'ಗೃಹ' ಜೀವಿಗಳ ವ್ಯಥೆ ಮತ್ತೊಂದು! ಹೀಗೆ ಹಲವು ನದಿಗಳು ಸೇರಿ ಒಟ್ಟಾದ ಸಾಗರದಲ್ಲಿ ವೈವಿಧ್ಯಮಯ ಜೀವ ಜಗತ್ತು ಸರ್ವೇ ಸಾಮಾನ್ಯ. ಒಬ್ಬ ಓದುವುದರಲ್ಲಿ ನಿಪುಣನಾದರೆ, ಮತ್ತೊಬ್ಬ ಆಟೋಟಗಳಲ್ಲಿ ನಿಷ್ಣಾತ. ಒಬ್ಬಳು ಮೌನ ತ್ರಿಪುರ ಸುಂದರಿಯಾದರೆ, ಮತ್ತೊಬ್ಬಳು ತ್ರಿಪುರಗಳನ್ನೂ ಜಾಲಾಡಿಸಿಬಿಡುವ ವಾಚಾಳಿ.

ಎಲ್ಲರೂ ತಮ್ಮದೇ ಮುಗ್ಧತೆಯನ್ನು ಶುದ್ಧ ಬದ್ಧತೆಯಿಂದ ಹೊತ್ತು ತರುವ ತಾಣ ಕಾಲೇಜು (ಇಂಪ್ರೆಸ್ಸು, ಸಪ್ರೈಸುಗಳ ವಿಷಯಕ್ಕೆ ಈ ಸೂತ್ರ ಅನ್ವಯವಾಗುವುದಿಲ್ಲ). ಈ ರೀತಿ ಎಲ್ಲರೂ ಒಟ್ಟಾಗಿ ತಮ್ಮದೇ ತರಗತಿ, ತಂಡಗಳಲ್ಲಿ ಬೆರೆಯುತ್ತ, ಕಲಿಯುತ್ತ ಸಾಗುತ್ತಾರೆ. ಮುಂದಿನ ಜೀವನಕ್ಕಿರಲಿ ಎಂದು ನಡೆಯುವ ಪ್ರಯೋಗಾತ್ಮಕ ಪ್ರೀತಿ ಪ್ರೇಮ ಪ್ರಕರಣಗಳು. ಕೆಲವೊಮ್ಮೆ ಸೇರಿದ ಗೂಡಾಗಿ, ಹಲವೊಮ್ಮೆ ಒಡೆದ ಹೃದಯಗಳಾಗಿ ಉಳಿಯುವುದು ಒಂಟಿ ಕಾಲೇಜು ವಾಸಿಗಳಿಗೆ ಜೀವನದಲ್ಲಿ ಎಂದಿಗೂ ಅರ್ಥವಾಗದ ಮಾಯಾಜಾಲ.

ಈ ರೀತಿಯ ಸಕಲ ಪ್ರಯತ್ನ, ಪರಿಶ್ರಮ, ಪರಾಕ್ರಮಗಳನ್ನು ತೋರಿ ಕಳೆಯುವ ಕಾಲೇಜು ಜೀವನ ಕಲಿಸುತ್ತದೆ, ನಲಿಸುತ್ತದೆ, ಕೆಲವೊಮ್ಮೆ ಅಳಿಸುತ್ತದೆ. ಒಟ್ಟಾರೆಯಾಗಿ ಇದರಿಂದ ಸಿಗುವ ಜೀವನಾನುಭವ ಅನನ್ಯ, ಅಗಣ್ಯ. ಈ ಜೀವನಕ್ಕದೆಷ್ಟು ತೂಕವೋ?! ಗೊತ್ತಿಲ್ಲ. ಆದರೆ ಅದರೊಟ್ಟಿಗೆ ಕಾಲ್ಕೇಜಿ ಕಾಲೇಜು ನೆನಪುಗಳ ಹೊತ್ತೊಯ್ದರೆ ಅದೇ ಕಟ್ಟಿಟ್ಟ ಬುತ್ತಿ.

(ಲೇಖಕರು ಎಂಎಸ್ಸಿ ವಿದ್ಯಾರ್ಥಿ ಮತ್ತು ಹವ್ಯಾಸಿ ಬರಹಗಾರರು)

ತಾಳ್ಮೆಯ ಜೀವನ

ಸಂಜನಾ ವಲ್ತಾಜೆ



ಮನುಷ್ಯನಿಗೆ ತಾಳ್ಮೆಯೆಂಬುದು ಬಂಗಾರದ ಮೌಲ್ಯವಿದ್ದಂತೆ. ತಾಳ್ಮೆಯೆಂಬುದು ನಮ್ಮೊಂದಿಗೆ ಇದ್ದರೆ ನಾವು ಎಲ್ಲವನ್ನೂ ಗೆಲ್ಲಲು ಅರ್ಹರು ಎಂಬುದು ವಿಶೇಷ. ಬದುಕಿನಲ್ಲಿ ತಾಳ್ಮೆಯೆಂಬುದು ಎಷ್ಟು ಮುಖ್ಯ ಎಂಬುವುದು ತಿಳಿಯುವುದು.

ಬದುಕು ಸಾಗರವಿದ್ದಂತೆ. ಅದರಲ್ಲಿ ಸಮಸ್ಯೆಗಳು, ಸವಾಲುಗಳು ಅಲೆಗಳಂತೆ ಒಂದರ ಅನಂತರ ಇನ್ನೊಂದು ಬರುತ್ತಲೇ ಇರುತ್ತವೆ. ಅವುಗಳನ್ನೆಲ್ಲ ಎದುರಿಸಿ ಮುಂದೆ ಸಾಗಬೇಕಾದರೆ ತಾಳ್ಮೆ ಅತೀ ಅಗತ್ಯ ಸ್ವತಂತ್ರವಾಗಿ ಬದುಕು ರೂಪಿಸಿಕೊಳ್ಳಬೇಕು ಎನ್ನುವ ಹಂಬಲ ಇರುವವರು ಛಲ, ಧೈರ್ಯ, ಸತತ ಪರಿಶ್ರಮ, ಶ್ರದ್ಧೆ, ತಾಳ್ಮೆಯಂತಹ ಗುಣಗಳನ್ನು ಬೆಳೆಸಿಕೊಳ್ಳಬೇಕಾದುದು ಅತೀ ಅಗತ್ಯ ತಾಳ್ಮೆ ಎಂದರೆ ಕೇವಲ ಕಾಯುವಿಕೆ ಎಂದು ಕಡೆಗಣಿಸಬೇಡಿ, ಆ ಕಾಯುವಿಕೆಯ ಪ್ರಕ್ರಿಯೆಯಲ್ಲಿ ನಾವು ತೋರುವ ಉತ್ತಮ ನಡವಳಿಕೆಯೇ ನಿಜವಾದ ತಾಳ್ಮೆ. ಮೇಲ್ನೋಟಕ್ಕೆ ತಾಳ್ಮೆಯು ಕಹಿ ಎಂದು ಅನಿಸಿತಾದರೂ ಅದು ನೀಡುವ ಫಲ ಮಾತ್ರ ಸದಾ ಸಿಹಿಯಾಗಿ ರುತ್ತದೆ. ಒಂದು ಕ್ಷಣದ ತಾಳ್ಮೆಯು, ಸಾವಿರ ಕ್ಷಣಕ್ಕಾಗುವಷ್ಟು ದುಃಖವನ್ನು ತಡೆಯಬಲ್ಲದು.

ಬದುಕು ಎಂದರೆ ನೋವು ನಲಿವುಗಳ ಸಮ್ಮಿಲನ. ಕ್ರಿಯಾಶೀಲರಾಗಿ ಬುದ್ಧಿವಂತಿಕೆ, ಪರಿಶ್ರಮಗಳ ಮೂಲಕ ಜೀವನದ ಪ್ರತಿಯೊಂದು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ತಾಳ್ಮೆಯನ್ನು ಕೂಡ ಅಳವಡಿಸಿಕೊಳ್ಳಬೇಕಿದೆ. ನೃತ್ಯಕ್ಕೆ ತಾಳವೆಷ್ಟು ಮುಖ್ಯವೋ ಬಾಳಿಗೆ ತಾಳ್ಮೆ ಅಷ್ಟೇ ಮುಖ್ಯ. ಆದ್ದರಿಂದಲೇ ತಾಳ್ಮೆಯಂತಹ ಗುಣ ಇಲ್ಲದವರು ಭ್ರಮೆಯೆಂಬ ಪ್ರವಾಹದಲ್ಲಿ ಕೊಚ್ಚಿಹೋಗುತ್ತಾರೆ. ತಾಳ್ಮೆ ಇದ್ದವರು ವಾಸ್ತವವೆಂಬ ಶಾಂತಸಾಗರದಲ್ಲಿ ತೇಲಾಡುತ್ತಾರೆ ಎನ್ನಲಾಗುತ್ತದೆ.

ಸಹನೆಯಿಂದ ಶ್ರೇಯಸ್ಸು

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದು ಸುಂದರ ಮನಸ್ಸಿರುತ್ತದೆ. ಆ ಸುಂದರ ಮನಸ್ಸು ಯಾವಾಗಲು ಶಾಂತಿ, ನೆಮ್ಮದಿಯಿಂದ,



ವ್ಯಕ್ತಿ ಉಲ್ಲಾಸಪಡುವಂತೆ ಮಾಡುತ್ತದೆ. ಇದಕ್ಕೆ ಆತನ ಮನಸ್ಸಿನಲ್ಲಿರುವ ತಾಳ್ಮೆ ಎಂಬ ಗುಣವೇ ಕಾರಣ. ಸಹನೆ ಹೊಂದಿರುವ ಮನಸ್ಸು ಯಾವಾಗಲು ವ್ಯಕ್ತಿಯ ಶ್ರೇಯಸ್ಸನ್ನು ಬಯಸುತ್ತದೆ. ಕೋಪವನ್ನು ಅದುಮಿಟ್ಟುಕೊಂಡು ನೆಮ್ಮದಿ, ಶಾಂತಿಗಾಗಿ ಹಾತೊರೆಯುತ್ತದೆ. ಹಾಗೇ ಬಾಳಿನ ಯಶಸ್ಸಿಗೆ ಮುನ್ನುಡಿ ಬರೆಯುತ್ತದೆ. ಗೊತ್ತುಗುರಿಗಳಿಲ್ಲದ ಬದುಕು ಹರಿಗೋಲಿಲ್ಲದ ದೋಣಿಯಂತೆ. ಗುರಿ ಇಲ್ಲದೆ ಸಾಗುವ ಬದುಕಿಗೆ ಅರ್ಥವಿಲ್ಲ. ಆದ್ದರಿಂದ ನಮ್ಮ ಸಾಮರ್ಥ್ಯ ಅರಿತು ನಾವೇ ಗುರಿ ನಿಗದಿಪಡಿಸಬೇಕು. ಯಾವುದೇ ಗುರಿಯನ್ನು ಇದ್ದಕ್ಕಿದ್ದಂತೆ ಸಾಸಲು ಸಾಧ್ಯವಿಲ್ಲ. ಅದಕ್ಕೆ ಹಲವಾರು ವರ್ಷಗಳ ನಿರಂತರ ಪರಿಶ್ರಮ ಕಾಯುವಿಕೆ ಅಗತ್ಯ.

ತಾಳ್ಮೆಯೇ ನಮ್ಮ ಶಕ್ತಿ. ತಾಳ್ಮೆ, ಸಹನೆಯನ್ನು ದೌರ್ಬಲ್ಯ ಎನ್ನುವವರೂ ಇದ್ದಾರೆ. ಆ ಬಗ್ಗೆ ಚಿಂತಿಸುವುದು ಅಗತ್ಯವಿಲ್ಲ. ಅದುವೇ ನಮ್ಮ ಶಕ್ತಿ ಎಂದು ಭಾವಿಸಿ ಮುಂದುವರಿದರೆ ಯಶಸ್ಸು ಸಾಸಬಹುದು. 'ತಾಳುವಿಕೆಗಿಂತ ತಪವಿಲ್ಲ' ಎನ್ನುವ ದಾಸರ ನುಡಿಯಂತೆ, ಸುಖ ಬಂದಾಗ ಹಿಗ್ಗದೇ, ದುಃಖ ಬಂದಾಗ ಕುಗ್ಗದೇ ಎಲ್ಲವನ್ನು ಸಮಾನಭಾವದಿಂದ ಸ್ವೀಕರಿಸಬೇಕು. ಅದಕ್ಕೆ ತಾಳ್ಮೆ ಬೇಕು. ತಾಳ್ಮೆಯೊಂದಿದ್ದರೆ ನಂಬಿಕೆ ನೆಲೆಸುತ್ತದೆ, ಭರವಸೆಯು ಬೆಳೆಯುತ್ತದೆ, ಪ್ರೀತಿ ಮೂಡುತ್ತದೆ. ಹಾಗಾಗಿ ತಾಳ್ಮೆಗೆ ಬಂಗಾರಕ್ಕಿಂತ ಹೆಚ್ಚಿನ ಬೆಲೆಯಿದೆ. ಅದು ಕೇವಲ ಒಂದು ಶಕ್ತಿ ಮಾತ್ರವಲ್ಲ, ಜ್ಞಾನವೂ ಹೌದು. ತಾಳ್ಮೆಗೆಟ್ಟು ತೆಗೆದುಕೊಳ್ಳುವ ಆತುರದ ನಿರ್ಧಾರವು ಭವಿಷ್ಯಕ್ಕೇ ಮಾರಕವಾಗುತ್ತದೆ. ದಾಸರು ಹೇಳುವಂತೆ 'ಈಸಬೇಕು, ಇದ್ದು ಜಯಿಸಬೇಕು' ಎಂಬಂತೆ ಪ್ರವಾಹದಲ್ಲಿ ಈಜಿ ಆಚೆಯ ದಡವನ್ನು ಸೇರುವ ಮನೋಭಾವ ರೂಢಿಸಿಕೊಳ್ಳಬೇಕು.

ತಾಳ್ಮೆ ಯಶಸ್ಸಿನ ಮೊದಲ ಮೆಟ್ಟಿಲು

ಬದುಕಿನಲ್ಲಿ ಯಶಸ್ಸು ಎನ್ನುವುದು ರಾತ್ರಿ ಬೆಳಗಾಗುವುದರೊಳಗೆ ಲಭಿಸುವಂತಹದ್ದಲ್ಲ. ಅದು ಹಲವಾರು ವರ್ಷಗಳ ಸಾಧನೆಯ ಫಲ. ನಿರಂತರ ಪ್ರಯತ್ನ, ಶ್ರಮ ವಹಿಸುವಿಕೆಯಿಂದ ದೊರೆಯುವುದು. ಅದಕ್ಕೆ ವ್ಯಕ್ತಿಯಲ್ಲಿ ಮುಖ್ಯವಾಗಿ ಬೇಕಾದ್ದು ತಾಳ್ಮೆ. ಆದ್ದರಿಂದ ತಾಳ್ಮೆಯೇ ಯಶಸ್ಸಿನ ಮೂಲಮಂತ್ರ ಅಥವಾ ಮೊದಲ ಮೆಟ್ಟಿಲು. ಹಾಗೇ ತಾಳ್ಮೆ ಎಂಬುದು ಯಾರೊಬ್ಬರು ಹೇಳಿಕೊಟ್ಟು ಬರುವಂತಹದ್ದಲ್ಲ. ಅದನ್ನು ನಮ್ಮಲ್ಲಿ ನಾವೇ ಅಳವಡಿಸಿಕೊಳ್ಳಬೇಕು. ಧ್ಯಾನ, ತಪಸ್ಸು, ಯೋಗಾಸನ ಮಾಡುವುದು, ಪ್ರಕೃತಿ ರಮಣೀಯ ಪ್ರದೇಶಗಳಿಗೆ ಭೇಟಿ ಕೊಡುವುದು ಇತ್ಯಾದಿಗಳು ನಮ್ಮಲ್ಲಿ ತಾಳ್ಮೆ ಬೆಳೆಸಿಕೊಳ್ಳಲು ಪೂರಕ.

(ಮಂಗಳೂರಿನ ಶ್ರೀನಿವಾಸ್ ಯುನಿವರ್ಸಿಟಿಯಲ್ಲಿ ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿ)

ಮಂದಾರ ಪೋಸ್ಟಾಫೀಸು



ಪತ್ರಿಕೆಯ ಓದು ಸುಖಕರವಾಗಿತ್ತೆಂದು ಭಾವಿಸಿದ್ದೇವೆ. ಪತ್ರಿಕೆಯ ಕುರಿತು ನಿಮಗೇನನಿಸಿತು? ನಿಮ್ಮ ಅನಿಸಿಕೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಮರೆಯಬೇಡಿ.

ನಮ್ಮ ಇಮೇಲ್ ವಿಳಾಸ
editormandara@gmail.com

ವಾಟ್ಸಪ್ ನಂಬರ್
9353223669

ನಮ್ಮ ವಿಳಾಸ:
ಸಂಪಾದಕರು, ಮಂದಾರ ಪತ್ರಿಕೆ
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಎಸ್.ಡಿ.ಎಂ. ಕಾಲೇಜು (ಸ್ವಾಯತ್ತ), ಉಜಿರೆ, ಬೆಳ್ತಂಗಡಿ
ತಾಲೂಕು, ದಕ್ಷಿಣ ಕನ್ನಡ - 574240

ಬಾಲ್ಯದ ಒಂದು ದಿನ



ದಿವ್ಯಶ್ರೀ ಹೆಗಡೆ



ಶೈಕ್ಷಣಿಕ ವರ್ಷ ಪ್ರಾರಂಭವಾಗುವುದೇ ಜೂನ್ ಇಂದ. ಅಂದು ಶಾಲೆಗೆ ಹೋಗಿ ಬರುವೆ ಎಂದು ಬ್ಯಾಗ್ ಬೆನ್ನಿಗೇರಿಸಿ ಹೊರಟ ಸಮಯ. ಮೊದಲ ದಿನ ಶಾಲೆಯ ಪ್ರಾರಂಭೋತ್ಸವ. ಶಾಲೆಗೆ ಹೋಗುವ ಆತುರ ಒಂದೆಡೆ, ಮೊದಲ ದಿನ ಅಲ್ವಾ ಅದಕ್ಕಾಗಿ, ಆಗ "ರಾಜ್ಯದಲ್ಲಿ ಎರಡು ದಿನದ ಒಳಗಾಗಿ ಮಾನ್ಸೂನ್ ಆಗಮನ" ಅಂತಾ ಟಿವಿಯಲ್ಲಿ ಬಂದಂತಹ ಹೆಡ್‌ಲೈನ್ ಕಿವಿ ಪ್ರವೇಶಿಸಿದರೂ ಅಷ್ಟೇನು ಲಕ್ಷ ಕೊಡದೆ ಸಾಗೆ ಬಿಟ್ಟಿದೆ ಪಯಣ ಶಾಲೆ ಕಡೆಗೆ!

ಅಮ್ಮ ಮನೆ ಇಂದ ಕೂಗಿದ್ದು ಅಲ್ಪಸ್ವಲ್ಪಾ ಕಿವಿಯನ್ನು ತಲುಪಿದೆ "ಮೋಡ ಆಗಿದೆ ಮಳೆ ಬರಬಹುದು ಛತ್ರಿಯನ್ನಾದರೂ ತೆಗೆದುಕೊಂಡು ಹೋಗು ಪುಟ್ಟಾ" ಅಂತಾ, ಆದರೆ ಮೊದಲೇ ಶಾಲೆಗೆ ತಡವಾಗಿದೆ ಈಗ ಮತ್ತೆ ಛತ್ರಿ ಬೇಕಾ? ಎಂದು ಮನಸು ಹೇಳೇ ಬಿಡ್ತು, ಇವತ್ತು ಮಳೆ ಬರಲ್ಲಾ ನನಗೆ ಲೇಟ್ ಆಯ್ತು ಅಂತಾ ಬಾಯಿ ಹೇಳಿಯೇ ಬಿಟ್ಟಿದೆ. ಹಾಗೆ ಕಾಲು ಸಹ ಓಡಿದೆ ಶಾಲೆ ಕಡೆ. ಹಾಗೆ ಹೀಗೆ ಅಂತಾ ಶಾಲಾ ಪ್ರಾರಂಭದ ಉತ್ಸವ ಏನೋ ಮುಗೀತು. ಆದ್ರೆ ಅಂದೇ ಮಳೆರಾಯನ ಪ್ರಾರಂಭ ಅಂತ ಯಾರಿಗ್ ತಾನೇ ಗೊತ್ತಿತ್ತು?! ಮೊದಲೇ ಛತ್ರಿನೂ ಬಿಟ್ಟು ಬಂದಿದೀನಿ ಅಂತಾ ಯೋಚಿಸೋ ಅಷ್ಟರಲ್ಲಿ ಮಳೆರಾಯನ ಒಂದೊಂದೇ ಹನಿ ಭೂಮಿಯನ್ನು ಮುತ್ತಿಕ್ಕಲು ತವಕಿಸುತ್ತಿದೆ. ಸಣ್ಣ ಪ್ರಮಾಣದ ಗುಡುಗು ಅಷ್ಟೇ!

ಹಾಗೆ ನೋಡ್ ನೋಡೋ ಅಷ್ಟರಲ್ಲಿ ಮಳೆಯ ಆಗಮನವು ಒಂದು ಕಡೆ ಆದರೂ ಮನೆಗೆ ಹೋಗೋ ಕಾತುರಕ್ಕಿಂತ ಮಳೆಯಲ್ಲಿ ಆಡುವ ಆತುರ. ಅದೇ ಸಮಯಕ್ಕೆ ಸರಿಯಾಗಿ ಶಾಲೆಯ ಗಂಟೆ ಟ್ರಣ್.... ಎಂದು ಬಾರಿಸಿದೆ. ಖುಷಿಯೇ ಖುಷಿ! ಬ್ಯಾಗ್ ಬೆನ್ನಿಗೇರಿಸಿ ಓಡಿದ್ದೇ ಓಡಿದ್ದು, ಮಳೆಯಲ್ಲಿ ಕುಣಿಯೊ ಆಸೆಗೆ ಮಳೆಯೂ ಅದಕ್ಕೆ ತಂಪ ಎರಚಿದೆ. ಧೋ..... ಎಂದು ಮಳೆ ಬರ್ತಿದ್ರೆ, ಹೋ ಎಂದು ಕೂಗು ಹಾಕುತಾ ಕುಣಿಯುತ್ತಾ ಸಾಗುತಿದೆ ಪಯಣ ಮನೆಯ ಕಡೆ. ಹಾಗೆ ಹೀಗೆ ಆಟ ಆಡ್ತಾ ಹಳ್ಳ ಕೊಳ್ಳ ದಾಟುತ ಹೊರಟೆವು. ಮೊದಲೇ ಮಳೆಯಲ್ಲಿ ತೊಯ್ದು ಒದ್ದೆ ಆಗಿದ್ದ ಮೈಗೆ ಮತ್ತಷ್ಟು ನೀರನ್ನು ಎರಚುತ ಮನೆಯ ಬಾಗಿಲಿಗೆ ಬರುವಾಗಲೆ ಎದುರಾದ ಅಮ್ಮ.

ಆಗ ತಲೆಗೆ ಹೋಯ್ತು ಮಳೆಯಲ್ಲಿ ತೊಯ್ದು ಬಂದಿದೀವಿ ಮನೆಯಲ್ಲಿ ಬೈಗುಳ ಗ್ಯಾರಂಟಿ ಅಂತಾ! ಆದ್ರೂ ಅಮ್ಮನಲ್ಲಿ ಮಳೆಯ ಮೇಲೆಯೇ ಕಂಪ್ಲೇಂಟ್. ನಮಗೆ ಶಾಲೆ ಬಿಟ್ಟಾಗಲೇ ಮಳೆ ಬಂತು ಅಮ್ಮಾ ನಾವು ಮಳೆಯಲ್ಲಿ ನೆನೆಯಬಾರದು ಅಂತಾನೆ ಇದಿದ್ವಿ ಆದ್ರೆ ಏನ್ ಮಾಡೋದು? ಅಂತ ಅಮಾಯಕರಂತೆ ದೂರನ್ನು ನೀಡುತ್ತಾ ಮನೆಯ ಬಾಗಿಲಲ್ಲಿ ಕಾಲಿರಿಸಿದ್ದಷ್ಟೇ ಆಕ್ಷಿಮ್.. ಎಂದು ಶೀನು ಒಂದರ ನಂತರ ಒಂದರಂತೆ. ಆಗ ಶುರುವಾಯ್ತು ಬೈಗುಳಗಳ ಸರಮಾಲೆ! ಬೆಳಿಗ್ಗೆನೇ ಹೇಳಿದ್ವಿ ಛತ್ರಿ ತಗೊಂಡು ಹೋಗು ಅಂತಾ ಅದು ಬೇಡ ಮಳೆ ಬರ್ತಾ ಇದೆ ಅಂತಾ ಅಪ್ಪ ಛತ್ರಿ ತಗೊಂಡು ಬಂದ್ರೆ ನೀವ್ ಯಾವ್ದೋ ರೋಡ ಅಲ್ಲಿ ಬಂದಿದ್ರಿ ಮಳೆಯಲ್ಲಿ ನೆನೆದು ಜ್ವರ ಗಿರ ಹೀಗೆ ಬೈಗುಳ ಮುಂದುವರಿಯುತ್ತಲೇ ಇತ್ತು.

ಆ ಮೊದಲ ಮಳೆಯ ನೆನಪ ನೆನೆಯುತ ಈ ದಿನ ನಗುವಿನ ಜೊತೆ ಮುಕ್ತಾಯವಾಗುತಿದೆ. ಬಾಲ್ಯದ ನೆನಪಲಿ ನಾನು ನೆನೆಯುತ್ತಾ ನಗುತ್ತಿದ್ದರೆ, ಭುವಿಯು ಇಂದು ತನ್ನ ಮೊದಲ ಮಳೆಗೆ ತಂಪಾಗಿ ನೆನೆದು ನಗುವ ಬೀರುತಿದೆ.

(ಅಂತಿಮ ವರ್ಷದ ಬಿಎ ಪತ್ರಿಕೋದ್ಯಮ ವಿದ್ಯಾರ್ಥಿನಿ.
ಎಸ್ ಡಿ ಎಂ ಕಾಲೇಜು ಉಜಿರೆ)



Mandara Kannada Practical Magazine, Published by Editor-in-Chief Chandan Bhat, Executive Editor Shobith MS on behalf of Department of Journalism & Mass Communication, Sri Dharmasthala Manjunatheshwara College (Autonomous), Ujire, Guided by Dr. Bhaskar Hegde, Printed at Manushri Printers Ujire, Belthangady Talluk, (D.K.) Dist, Karnataka - 574240

ರಥಬೀದಿಯಲ್ಲೊಂದು ಬೆರಗಿನ ಬೆಳಗು





ಅನುಭವ ಕಥನ

ನೇರಳೆ ಮತ್ತು ಬಿಳಿಯ ಬಣ್ಣದ 'ಸ್ಕೂಟಿ ಪೆಪ್' ಅವಳ ಎದುರಿಗೆ ನಿಲ್ಲಿಸಿ "ವಟ್ಲರಗೆ ಹೇಂಗೆ?", "ಪಾಲಿಗೆ ಹೇಂಗೆ ತೊಂಡೆಕಾಯಿ? ಗೋಕರ್ಣದ್ದೇ? ಈ ಸರ್ತಿ ಗೋಕರ್ಣ ಮೆಣಸು ಹಾಕ್ಲಿಲ್ವೆ ಗದ್ದೆಲಿ?" ಎಂದು ಸಾಲಲ್ಲಿ ಪ್ರಶ್ನೆಗಳನ್ನು ಕೇಳಿದ ಕಪ್ಪು ಹೆಲ್ಮೆಟಿನೊಳಗೆ ಕನ್ನಡಕವನ್ನು ಹಾಕಿಕೊಂಡಿರುವ ಗ್ರಾಹಕನೊಬ್ಬನಿಗೆ "ಹರ್ಗಿ ಐವತ್ರುಪಾಯಿಗೆ ಯೋಲು ಕಟ್ಟು, ನಿಮಗೆ ಹೇಲಿ ಎಂಟುಕೊಡ್ತೆ, ತೊಂಡೆಕಾಯಿ ಪಾಲಿಗೆ ಇಪ್ಪತ್ತು. ಗೋಕರ್ಣ ಮೆನಸು ತುಟ್ಟಿ ಅಲ್ರಾ? ಈ ಸಲ ಮಲೆಗೆ ಎಲ್ಲ ಹಾಲಾಗೋಗಿದು" ಎನ್ನುತ್ತ ವ್ಯವಹಾರ ಕುದುರಿಸಿದ್ದಳು ಕುಂದಾಪುರ ಕುಂಕುಮ ಬಣ್ಣದ ಸೀರೆಯುಟ್ಟ 'ಗಂಗೆ'. ಗ್ರಾಹಕ ಐವತ್ತು ರೂಪಾಯಿಗೆ ಹನ್ನೆರಡು ಕೇಳಿದರೆ "ಇಲ್ರ ವಡ್ಯಾ ನಾವು ತಂದದ್ದೆ ಹತ್ತಕ್ಕೆ" ಎಂದಳು. ಅವನೂ ಬಿಡಲಿಲ್ಲ. "ಅದ್ಯೆಂತದೆ ಆ ನಮನಿ ತುಟ್ಟಿ, ಊರಲ್ಲಿಲ್ದಿದ್ ರೇಟಲೆ ನಿಂದು, ಅದೂ ಖಾಯಮ್ ತಕಂಡೋಗು ಜನರಿಗೆ". ಎಂದನವ. ಅದಕ್ಕೆ ಗಂಗೆ "ತಕಲ್ರಾ ನಿಮಗೆ ಮತ್ತೊ ಒಂದು ಕಟ್ಟು ಜಾಸ್ತಿ ಹಾಕ್ತೆ, ವಟ್ಲರ್ಗಿ ಶಮಾ ಆಗ್ಲಿಲ್ರಾ; ಗದ್ದೆಲಿ ಹುಲ ಬಿದ್ದೋಗಿದು, ತರೂಕೆ ಮರ್ವಾದಿ" (ನಿಮಗೊಂದು ಕಟ್ಟನ್ನು ಜಾಸ್ತಿ ಕೊಡ್ತೇನೆ. ಈ ಸಲ ಹರಿವೆ ಸೊಪ್ಪು ಹಾಕಿರುವ ಗದ್ದೆಯಲ್ಲಿ ಹುಳಗಳಗಿರುವುದರಿಂದ ಸೊಪ್ಪನ್ನು ಮಾರಲು ತರಲು ನಾಚಿಕೆಯಾಗುತ್ತದೆ) ಎಂದವಳು ದೊಡ್ಡ ದನಿಯಲ್ಲಿ ಎಣಿಸುತ್ತ ಒಂಭತ್ತು ವಟ್ಟಲರಿಗೆ ಕಟ್ಟನ್ನು ಲೆಕ್ಕಮಾಡಿ ಅವರ ಚೀಲಕ್ಕೆ ಹಾಕಿದಳು.

ಅವಳ ಬಲ ಬದಿಗೆ ತೊಂಡೆ, ಚವಳಿ ಕಾಯಿಗಳನ್ನು ಪಾಲಿಗೆ ಹಾಕಿಕೊಂಡು ಕೂತಿರುವ 'ಮಾಸ್ತಿ'ಯ ಬಳಿ ಹಸಿರು ಸೀರೆಗೆ ಕೆಂಪು ಬಣ್ಣದ ಅಂಚಿರುವ ಜರತಾರಿ ಸೀರೆಯುಟ್ಟು ತನ್ನ ಹದಿ ಹರೆಯದ ಮಗಳ ಜೊತೆಗೆ ಬಂದಿರುವ ಹೆಂಗಸೊಬ್ಬಳು 'ಎಲ್ಲಿ ಹರ್ಗನೆ?' ಕೇಳಿದಾಗ "ಇಲ್ಲೇ ವಕ್ಕಲಳ್ಳಿದು ಬೇಕ್ರಾ ಅಮ್ಮಾ?" ಎಂದಳು ಮಾಸ್ತಿ. ಆ ಹಸಿರು ಕೆಂಪು ಸೀರೆಯ ಹೆಂಗಸೋ ತನ್ನ ಮಗಳಿಗೆ ಪಕ್ಕದ 'ಖಾಜಿ ಅಂಗಡಿ'ಯ ಗತ ವೈಭವವನ್ನು ವರ್ಣಿಸುವುದರಲ್ಲಿ ತಲ್ಲೀನಳಾಗಿದ್ದಾಳೆ. "ದೇವಸ್ಥಾನಕ್ಕೆ ಹೋಗಿ ಬರ್ತೆ, ಕಡೆಗೆ ತಗೊಂಡು ಹೋಗ್ತೆ ಅಡ್ಡಿಲ್ವೆ" ಎಂದವಳು. ಮಗಳ ಕರೆದುಕೊಂಡು ದೇವಸ್ಥಾನದ ಬಳಿಯಿರುವ ಕುಟುಂಬದವರನ್ನು ಸೇರಿಕೊಂಡಳು.

ಪ್ರತಿಯೊಂದು ಪಟ್ಟಣಕ್ಕೂ ಒಂದೊಂದು ಪರಿಮಳವಿದೆ. ಅದರಲ್ಲೂ ಆ ಪಟ್ಟಣದ ರಥಬೀದಿಯ ಘಮವಂತೂ ಒಂಥರದ ಸೆಳೆತವನ್ನು ಸೃಜಿಸಿಬಿಡುತ್ತದೆ. ಆ ರಥಬೀದಿಯ ಓಕುಳಿಯ ಬಣ್ಣಗಳು ಈ ಹೆಂಗೆಳೆಯರು

ಅಷ್ಟರಲ್ಲಿ ಆ ದೇವಳದ ಬದಿಯಿಂದಲೇ "ಯೇ ಕಮಲಿ, ನಾಗಿ ನೋಡೆ ಇಪ್ಪತ್ರುಪಾಯ್ಗೆ ಒಂದು ಬೊಕಳೆ ದಂಡೆ ಕೊಡ್ತಲೆ!! ಬಾರೇ ಕೇಲ್ವನಿ" ಎನ್ನುತ್ತ ನಾಗಿಯ ಬಳಿಗೆ ಸಣ್ಣ ಆರೋಪದೊಂದಿಗೆ ಹೊರಟಿದ್ದಾಳೆ ಉದ್ದ ಲಂಗ ಮತ್ತು ಗಾಢ ಹಸಿರಿನ ಬಣ್ಣದ ರವಿಕೆ ತೊಟ್ಟ ಲತಾ. "ಹೋಯ್ ಇಲ್ಬನ್ನಿ ಇಪ್ಪತ್ರುಪಾಯ್ಗೆ ನಾನೂ ಕೊಡ್ತೆ ಅದು ಬಾಡೋಗದೆ ಇದು ಪ್ರೆಸ್ ಅದೆ" ಎಂದು ಹೇಳುತ್ತಿದ್ದಾಳೆ ಅವಳು. ಆದರೆ, ಗ್ರಾಹಕನ ಖರೀದಿ ಮುಗಿದಿದೆ! ಲತಾಳ ಕಣ್ಣಲ್ಲಿ ಒಂಥರದ ಅಸಮಾಧಾನ. ಆ ಅಸಮಾಧಾನ ಅರೆಕ್ಷಣ ಮಾತ್ರ!! ಮರು ಕ್ಷಣವೇ ಮತ್ತೆ ಕಣ್ಣಲ್ಲಿ ನಿರೀಕ್ಷೆ ತುಂಬಿಕೊಂಡುಬಿಡುತ್ತದೆ.



ಇನ್ನೊಬ್ಬಳು ಹಳದಿ ಕುರ್ತಾ ಹಾಕಿಕೊಂಡವಳ ಬಳಿ ಲತಾಳ ವ್ಯವಹಾರ ಕುದುರುತ್ತದೆ.

ಕುಮಟೆಯ ಸಮೀಪದ ಹಳ್ಳಿಗಳಲ್ಲಿ ಗದ್ದೆಗಳಿರುವ ಮನೆಯವರು ತಮ್ಮ ಗದ್ದೆಗಳಲ್ಲಿ 'ಹಿತ್ಲಕಾಯಿ' ಬೆಳೆಯುವುದು ಮಾಮೂಲು. ಮನೆಯ ಹೆಂಗಸರು ಮುಂಜಾನೆ ಕೋಳಿ ಕೂಗಿದೊಡನೆಯೇ ಎದ್ದು ಗದ್ದೆಗಳಿಗೆ ತೆರಳಿ ಸೊಪ್ಪು, ತರಕಾರಿ, ಹೂವು, ಹಣ್ಣುಗಳನ್ನು ಕೊಯ್ದು ಬೆಳಗಾಗುವುದೇ ತಡ ಪೇಟೆಗೆ ಹೊತ್ತು ತಂದು ಮಧ್ಯಾಹ್ನದ ವರೆಗೆ ಮಾರುತ್ತಾರೆ. ಸೀಸನ್ನು ಬದಲಾದಂತೆ ಇವರು ಮಾರಾಟ ಮಾಡುವ ಸರಕುಗಳೂ ಬದಲಾಗುತ್ತವೆ.

ಸೌಮ್ಯಾ ಭಾಗ್ವತ್



ಕುಮಟೆಯ ರಥಬೀದಿಯಲ್ಲೆಲ್ಲ ಕುತ್ತಿಗೆಯ ತುಂಬ ಮಣಿಸರಗಳ ಹಾಕಿ ಜೇಟಿ ಕಟ್ಟಿರುವ ನಾಗಿ, ಹಳೆಯ ಒಂದು ರುಪಾಯಿ ನಾಣ್ಯದಷ್ಟು ಅಗಲದ ಕುಂಕುಮವನ್ನು ಹಣೆಗೆ ಹಚ್ಚುವ ಸ್ವಲ್ಪ ಚೌಕು ಮೋರೆಯ ಮೇಲಿನಮನೆ ಸುಕ್ರಿ, ಉದ್ದ ಜಡೆ ಮತ್ತು ಉದ್ದ ಲಂಗ ಹಾಕಿ ಉದ್ದಕೆ ಸುರಿದ ಬೊಕಳೆ ಮಾಲೆ ಹಿಡಿದು ನಿಲ್ಲುವ ಲತಾ, ನೀಲಿ ಸೀರೆಯುಟ್ಟು ತುಳಸೀ ಮಾಲೆಯ ಜೊತೆಗೆ ಕೆಂಪು ಬಿಳಿಯ ಕಮಲಗಳ ಕೈಯಲ್ಲಿ ಹಿಡಿದು ಹೆಚ್ಚಾಗಿ ಸನ್ನೆ ಭಾಷೆಯಲ್ಲೇ ಮಾತನಾಡುವ ಬಾಯಿ ತುಂಬ ಕವಳ ಹಾಕಿಕೊಂಡ ಲಕ್ಷ್ಮೀ, ಬಗೆಬಗೆಯ ಗೆಣಸುಗಳನ್ನು ಮಾರುವ ಕೂದಲು ಪೂರ್ತಿ ಜಡೆಗಟ್ಟಿರುವ ಯಂಕಮ್ಮ ಹೀಗೆ ಇನ್ನೂ ಹಲವು ನನಗೆ ಹೆಸರು ಗೊತ್ತಿಲ್ಲದ ಹೆಂಗಸರು ಬುತ್ತಿ, ಗೊಂಡೆ, ಬೊಕಳೆ, ಜಾಜಿ, ನಂದಟ್ಲೆ, ಗೆಂಟಿಗೆ, ದಂಡೆಗಳನ್ನು, ವಿವಿಧ ಬಣ್ಣದ ಕಮಲ ಹೂವುಗಳನ್ನು, ಗರಿಕೆ, ಬಿಲ್ಪತ್ರೆಗಳನ್ನು ಪ್ಲೇಟಿನಲ್ಲಿ ಇಟ್ಟುಕೊಂಡು ಮಾರುತ್ತಿದ್ದರೆ; ಇನ್ನು ಕೆಲವರು ಬಜಾರಿನ ಅಂಗಡಿ ಸಾಲುಗಳ ಎದುರಿಗೆ ತಮ್ಮ ಕಪ್ಪು ಬಣ್ಣದ ಸಾದಾ ಕೊಡೆಯನ್ನು ಬಿಚ್ಚಿ ಅದರಡಿಗೆ ಕಬ್ಬಿನ ಗದ್ದೆಯ ಬದಿಗೆ ಬೆಳೆಸುವ ಬೆಂಡೆಕಾಯಿ, ಮೂಲಂಗಿ, ಕೆಂಪುಹರಿವೆ, ಬದನೆ, ಬಸಳೆ ಕಟ್ಟು, ಬಾಳೆಕಾಯಿ, ಬೇರಲಸು, ನೀರಲಸು, ಗೆಣಸುಗಳ ಹರವಿಕೊಂಡು ವ್ಯಾಪಾರ ಮಾಡುತ್ತಿರುತ್ತಾರೆ.

ಈಗ ಚಳಿಗಾಲವಿರುವುದರಿಂದ ಕುಮಟೆಯ ರಥಬೀದಿಯಲ್ಲಿ ಇದೀಗತಾನೆ ಮಿಂದು ಮಡಿಯುಟ್ಟು ಬಂದಂತಿರುವ ಮೆಂತೆ, ಕೊತ್ತುಂಬರಿ, ಸಬ್ಬಸಿಗೆ, ಪಾಲಕ್ , ವಿವಿಧ ಹರಿವೆ ಸೊಪ್ಪುಗಳು (ಕೆಂಪು ಹರಿವೆ , ಹಸಿರು ಹರಿವೆ, ಕಂಬ ಹರಿವೆ , ವಟ್ಟಲು ಹರಿವೆ), ಮೂಲಂಗಿ, ಗೋಕರ್ಣ ಬದನೆ, ಗೋಕರ್ಣದ ಹಸಿಮೆಣಸು ಹೀಗೆ ತರೇವಾರಿ ತರಕಾರಿ ಮತ್ತು ಸೊಪ್ಪುಗಳು ರಥಬೀದಿಯ ಇಕ್ಕೆಲವನ್ನು ಅಲಂಕರಿಸಿರುತ್ತವೆ. ಈ ಎಳೆಯ ಸೊಪ್ಪುಗಳನ್ನು ಬಾಳೆಪಟ್ಟೆಯ ಬಳ್ಳಿಯಲ್ಲಿ ಕಟ್ಟಿರುತ್ತಾರೆ.

ಹದವಾಗಿ ಏರುತ್ತಿರುವ ಬಿಸಿಲಿನ ಜೊತೆಗೆ ರಥಬೀದಿಯೂ ಚುರುಕುಗೊಳ್ಳುತ್ತದೆ. ಮಾರುವವರ ಬುಟ್ಟಿಗಳು ಮಧ್ಯಾಹ್ನದೊಳಗೆ ಖಾಲಿಯಾಗಿಬಿಡಬೇಕು. ಇಲ್ಲದಿದ್ದರೆ ಊಟಮಾಡಿ ಮತ್ತೆ ಮಾರಲು ಕುಳಿತುಕೊಳ್ಳುವ ಉಸಾಬರಿ! ಬುಟ್ಟಿ ಖಾಲಿಯಾಗುವುದೇ ತಡ ಪಕ್ಕದ ಕಿಣಿ ಕೋಲ್ಡ್ರಿಂಕ್ಸಿನಲ್ಲಿ ರಾಗಿ ನೀರನ್ನೋ, ದೂಧ್ ಕೋಲ್ಡನ್ನೋ, ಸೋಡ ಶರಬತ್ತನ್ನೋ ತಣ್ಣಗೆ ಹೀರಿ; ಒಂದು ಪ್ಲೇಟ್ ಬನ್ಸನ್ನೋ, ಬೋಂಡವನ್ನೋ ಸವಿದು, ಮನೆಯಲ್ಲಿರುವ ಮಕ್ಕಳಿಗೆ/ ಮೊಮ್ಮಕ್ಕಳಿಗೆ ಕುರುಕಲು ತಿಂಡಿಯನ್ನು 'ಕಟ್ಟಿಸಿಕೊಂಡು' ತರಾತುರಿಯಲ್ಲಿ ಹೊರಟುಬಿಡುತ್ತಾರೆ. ಇತ್ತ ತರಕಾರಿ, ಸೊಪ್ಪುಗಳ ಕೊಂಡ ಗ್ರಾಹಕ ಹರಿವೆಸೊಪ್ಪಿನ ಪಲ್ಯ, ಬೇರಲಸಿನ ಪೋಡಿ, ಎಳೆತೊಂಡೆಯ ಪಲ್ಯ, ಬಾಳೆಕಾಯಿಯ ಹುಳಿ ಮುಂತಾದ ರುಚಿಕರ ಅಡುಗೆಯನ್ನು ಮಾಡಿಯೋ ಮಾಡಿಸಿಕೊಂಡೋ ಉಂಡು ತೇಗಬೇಕು.

ಆ ಹೂವಕ್ಕಂದಿರ ಒಳಗೆ ಒಂದು ಕುತೂಹಲ, ಅಸಮಾಧಾನ, ಅಸೂಯೆ, ಸಣ್ಣ ಜಗಳ ಎಲ್ಲವೂ ಇರುತ್ತದೆ; ಅದರ ಜೊತೆಗೆ ಚಿಲ್ಲರೆಯನ್ನು ಹೊಂದಿಸುವ, ಬುಟ್ಟಿಯನ್ನು ತಲೆಯಮೇಲೆ ಹೊತ್ತುಕೊಳ್ಳುವಾಗ ಇನ್ನೊಬ್ಬರಿಗೆ ಸಹಕರಿಸುವ, 'ಚಾ' ಕುಡಿಯಲು ಹೋದಾಗ ಒಬ್ಬರ ಬುಟ್ಟಿಯನ್ನು ಇನ್ನೊಬ್ಬರು ಕಾಯುವ ಸಹಕಾರವೂ ಇರುತ್ತದೆ! ಅಲ್ಲಿ ಒಂದೇ ಮನೆಯ ಅಕ್ಕ ತಂಗಿಯರಿದ್ದಾರೆ, ಅತ್ತೆ ಸೊಸೆಯಂದಿರಿದ್ದಾರೆ, ಅಮ್ಮ-ಮಗಳಿದ್ದಾರೆ, ಗೆಳತಿಯರಿದ್ದಾರೆ.

ಗ್ರಾಹಕರಿಲ್ಲದ ಸಮಯದಲ್ಲಿ ಆಪ್ತ ಸಮಾಲೋಚನೆಯೂ ಹೂವಕ್ಕರ ಮಧ್ಯೆ ನಡೆಯುತ್ತದೆ!

ಅಲ್ಲಿ "ನಮ್ಮನೆ ಅಭಿಸೇಕ ನಿನ್ನ ಕುಡ್ಯಂಬಂಡ್ಯ ಕಾಂತಿದು ಸಾವುಕೆ ಎಲ್ಲ ಅವನ ಅಪ್ಪನಿಂದ ಕಲೀತೀವಾ" ಎನ್ನುವುದರಿಂದ ಹಿಡಿದು, ನಮ್ ಕಾವ್ಯಾ ನಿನ್ನೆ ಮಿಂದದ್ಯೇ ಎನ್ನುವ ಮಕ್ಕಳ ಕುರಿತಾದ ಕಳವಳಗಳೂ ಮತ್ತು ಕಾಳಜಿಗಳೂ ಇವೆ, ನಿನ್ನೆ ಬಂಗಡೀ ಸಾರು ಇದ್ರೆ ಇವತ್ತು ಹಾಕಂಡು ಉಣ್ಬೇಕೆ, ನಮ್ಮ ಅಕ್ಕನ ಮಗಳ ಮದ್ವೀ ಬಂತಲೇ ಒಂದು ಚೊಲೊ ಸೀರೆ ತಗಬೇಕೆ ಎಂಬ ಚಂದನೆಯ ಕನಸುಗಳಿವೆ, "ನಮ್ ಅತ್ತಿ ಅದ್ಯಲೆ ಅದ್ಕೆ ಪೆನ್ಸನ್ ಬಂದ್ರೂ ನಮ್ಮನೆಯವ್ರ ಕೂಡೆ ಗುಳಿಗಿಗೆ ದುಡ್ ಕೇಲ್ತದೆ", ಎಂಬ ಪುಕಾರುಗಳಿವೆ, ಆ ಕಮಲಿ ನೋಡು ಹೊಸ ಕರಿಮಣಿ ಮಾಡ್ಕಂಡ್ತಂತೆ ಮಗ ಬೆಂಗಳೂರಾಗೆ ಇರ್ತ್ನಲೆ ಎಂಬ ಸಣ್ಣ ಹೊಟ್ಟೆಕಿಚ್ಚಿದೆ.

ಹದವಾಗಿ ಏರುತ್ತಿರುವ ಬಿಸಿಲಿನ ಜೊತೆಗೆ ರಥಬೀದಿಯೂ ಚುರುಕುಗೊಳ್ಳುತ್ತದೆ. ಮಾರುವವರ ಬುಟ್ಟಿಗಳು ಮಧ್ಯಾಹ್ನದೊಳಗೆ ಖಾಲಿಯಾಗಿಬಿಡಬೇಕು. ಇಲ್ಲದಿದ್ದರೆ ಊಟಮಾಡಿ ಮತ್ತೆ ಮಾರಲು ಕುಳಿತುಕೊಳ್ಳುವ ಉಸಾಬರಿ!

ಮನೆ, ಮಕ್ಕಳು, ಕುಡುಕಗಂಡ, ಅತ್ತೆಯ ಕಿರಿಕಿರಿ, ಇನ್ಯಾರದೋ ಅಸೂಯೆ, ಇವೆಲ್ಲದರ ನಡುವೆ ಅವರ ಸಣ್ಣ ಸಣ್ಣ ಕನಸುಗಳು ಎಲ್ಲವನ್ನೂ ತೂಗಿಸಿ ಸಂಭಾಳಿಸುತ್ತಾರೆ ಈ ಹೆಂಗಸರು. ಒಂದಿಬ್ಬರು ಪಿಪ್ಟಿ, ಟ್ವೆಂಟಿ ಹೀಗೆ ಇಂಗ್ಲಿಷ್ ನಂಬರುಗಳನ್ನೂ ಬಳಸುತ್ತಾರೆ.

ಆ ಹೆಂಗಸರು ವ್ಯಾಪಾರ ಕುದರಿಸುವಾಗ, ಗಿರಾಕಿಗಳನ್ನು ಸಂಭಾಳಿಸುವಾಗ, ಲೆಕ್ಕ ಮಾಡಿ ಚಿಲ್ಲರೆಯನ್ನು ಕೊಡುವಾಗ. ಈ ಮಾರ್ಕೆಟಿಂಗ್ ಎಂಬುದು ಯಾರಪ್ಪನ ಮನೆಯ ಸೊತ್ತೂ ಅಲ್ಲ ಅನಿಸಿಬಿಡುತ್ತದೆ. Women Empowerment/ ಮಹಿಳಾ ಸಬಲೀಕರಣ ಎಂಬ ಶಬ್ದಗಳೆಲ್ಲ ಬೆಳಗಿಂದ ಮಧ್ಯಾಹ್ನದ ಒಳಗೆ ಇಲ್ಲಿ ರಸ್ತೆಯಲ್ಲಿ ನಡೆದಾಡಿಕೊಂಡಿರುತ್ತದೆ.

ಪ್ರತಿಯೊಂದು ಪಟ್ಟಣಕ್ಕೂ ಒಂದೊಂದು ಪರಿಮಳವಿದೆ. ಅದರಲ್ಲೂ ಆ ಪಟ್ಟಣದ ರಥಬೀದಿಯ ಘಮವಂತೂ ಒಂಥರದ ಸೆಳೆತವನ್ನು ಸೃಜಿಸಿಬಿಡುತ್ತದೆ. ಆ ರಥಬೀದಿಯ ಓಕುಳಿಯ ಬಣ್ಣಗಳು ಈ ಹೆಂಗೆಳೆಯರು.

ಪ್ರತಿ ಬೆಳಗು ಕೂಡ ಅಲ್ಲಿ ಒಂದು ಸಂಭ್ರಮವನ್ನು ಸೃಷ್ಟಿಸಿರುತ್ತದೆ. ಆ ಸಂಭ್ರಮವನ್ನು ನನ್ನೊಳಗೆ ಎಳೆದುಕೊಳ್ಳಲಿಕ್ಕೆ ಆಗಾಗ ನಾನಲ್ಲಿ ಧಾವಿಸುತ್ತೇನೆ. ಹೊಳಪು ಕಳೆದುಕೊಂಡು ಭೂಮಿಗುರುಳಿರುವ ತಾರೆಗಳು ಎನಿಸುವ ಬೊಕಳೆ ಹೂವಿನ ಹಾರ ನನ್ನ ಫೇವರೆಟ್. ಅದು ಕಂಡಾಗಲೆಲ್ಲ ಖರೀದಿಸಬೇಕು ಅನಿಸ್ತದೆ. ಅದನ್ನು ಖರೀದಿಸಿದ ನಂತರ, ಅಲ್ಲಿಯೇ ಪಕ್ಕದಲ್ಲಿ ಕಂಡ ವಟ್ಟಲರಿಗೆ!! ಅದನ್ನು ಖರೀದಿಸುತ್ತಿರುವಾಗಲೇ ಮುಖವೆಲ್ಲ ಸುಕ್ಕುಗಟ್ಟಿರುವ ಅಜ್ಜಿಯೊಬ್ಬಳು ಬಂದು 'ಕಡೇದು ಎರಡು ನಂಜಟ್ಲೆ ದಂಡೆ ಅದೆ ತಕಾ ಮಗಾ, ನಾ ಬಸ್ಸಿಗೆ ಹೋತೆ' ಎನ್ನುವಾಗ ತಡೆಯಲಾಗದೇ ಅದನ್ನೂ ಖರೀದಿಸಿಬಿಡ್ತೇನೆ, ಅವಶ್ಯವಿರದಿದ್ದರೂ! ಆ ಅಜ್ಜಿ ನಾನು ದುಡ್ಡುಕೊಟ್ಟ ನಂತರ ನನ್ನ ಕೈ ಸ್ಪರ್ಶಿಸುತ್ತಾಳೆ ಕಣ್ಣಲ್ಲೇ ಧನ್ಯವಾದವ ಹೇಳಿಬಿಡುತ್ತಾಳೆ.

ಏನೊ ಒಂದು ನಮೂನೆಯ ಖುಷಿ ,ಸಂಭ್ರಮ, ಬೊಕಳೆ ಮಾಲೆಯ ಘಮ , ವಟ್ಟಲರಿಗೆಯ ಬಣ್ಣ ಎಲ್ಲವೂ ಮೇಳೈಸಿ ಹೇಳಿಕೊಳ್ಳಲಾಗದ ಭಾವವನ್ನು ಸೃಷ್ಟಿಸಿಬಿಡುತ್ತದೆ!!

**ಬೆಳಗು ಒಂದು ಭಾವವಾಗುತ್ತದೆ,
ಆ ಭಾವವೇ ಬದುಕಾಗಿಬಿಡುತ್ತದೆ !**

(ಸೌಮ್ಯಾ ಭಾಗ್ವತ್ ಹುಟ್ಟಿದ್ದು ಕಡಲತಡಿಯ ಸಣ್ಣ ಪಟ್ಟಣ ಕುಮಟೆಯಲ್ಲಿ. ಓದಿದ್ದು ತಂತ್ರಜ್ಞಾನ. ಇಷ್ಟವಾಗುವುದು ಸಾಹಿತ್ಯ, ಛಾಯಾಗ್ರಹಣ, ಕಾಡು ಹೂಗಳು, ತಿರುಗಾಟ, ಚಾರಣ ಮತ್ತು ಪಾಕವೈವಿಧ್ಯ)